# *ವರ್ಣಮಾಲೆ

ನಮ್ಮ ಅಭಿಪ್ರಾಯಗಳನ್ನು ಇತರರಿಗೆ ತಿಳಿಸುವುದಕ್ಕೆ ಮತ್ತು ಇತರರ ಅಭಿಪ್ರಾಯವನ್ನು ನಾವು ತಿಳಿಯುವ ಮಾಧ್ಯಮಕ್ಕೆ "**ಭಾಷೆ**" ಎಂದು ಹೆಸರು. ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ,ಅವುಗಳಲ್ಲಿ ನಾವು ನಾವು ಮಾತನಾಡುವ ಕನ್ನಡ ಭಾಷೆಯು ಒಂದು ಪ್ರಮುಖ ಭಾಷೆಯಾಗಿದೆ.ಕನ್ನಡ ಭಾಷೆಗೆ "**ಶ್ರವಣ ಮತ್ತು ಚಾಕ್ಷುಷ**" ಎಂಬ ಎರಡು ರೂಪಗಳಿವೆ.

- **ಧ್ವನಿಯ ಮೂಲಕ ಕಿವಿಗೆ ಕೇಳಿಸುವುದು "ಶ್ರವಣ" ವೆಂತಲೂ,**
- **ಬರಹದ ಮೂಲಕ ಕಣ್ಣಿಗೆ ಕಾಣೀಸುವುದು "ಚಾಕ್ಷುಷ" ವೆಂತಲೂ,**

ಕರೆಯುವರು, ನಾವು ಬರಹದ ಮೂಲಕ ಕನ್ನಡ ಭಾಷೆಯನ್ನು ತಿಳಿಯಬೇಕಾದರೆ ಚಾಕ್ಷುಷ ರೂಪದಿಂದ ಲಿಪಿ ರೂಪ ವರ್ಣಮಾಲೆಯನ್ನು ಮೊದಲು ತಿಳಿಯಬೇಕು.

ಕನ್ನಡ ಭಾಷೆಯಲ್ಲಿ ಬಳಕೆಯಲ್ಲಿರುವ ಅಕ್ಷರಗಳ ಗುಂಪಿಗೆ "**ವರ್ಣಮಾಲೆ**" ಎನ್ನುತ್ತೇವೆ. ಈ ವರ್ಣ ಮಾಲೆಯ ಸಂಖ್ಯೆಯು ಕಾಲಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿದೆ.ಕನ್ನಡದಲ್ಲಿ ಮೊದಲು "**ಕೇಶಿರಾಜನ**"**ಕಾಲಕ್ಕೆ 47 ಅಕ್ಷರಗಳಿದ್ದವು**(ಕೇಶಿರಾಜನು ಈ ಕನ್ನಡ ವರ್ಣಮಾಲೆಗೆ "**ಶುದ್ಧಗೆ**" ಎಂದು ಕರೆದಿದ್ದಾನೆ). ನಂತರ 52 ಅಕ್ಷರಗಳಾದವು(ಕ್ಷ, ಜ್ಞ, ಅಕ್ಷರಗಳು ಸೇರಿ) ಆದರೆ **'ಕ್ಷ'** ಮತ್ತು **'ಜ್ಞ'** ಅಕ್ಷರಗಳನ್ನು ಕೈ ಬಿಡಲಾಗಿದೆ.ಈಗ ಕನ್ನಡ ವರ್ಣಮಾಲೆಯಲ್ಲಿ "ಋ" ಅಕ್ಷರ ಬಳಕೆ ಅತೀ ವಿರಳವಾದ್ದರಿಂದ ಅದು ಲೋಪವಾಗಿ **NCERT**ಅಧಿಕೃತ ಅಕ್ಷರಗಳ ಸಂಖ್ಯೆ 49 ಆಗಿದೆ.

ಕನ್ನಡ ವರ್ಣ ಮಾಲೆಯನ್ನು ಮೂರು ಭಾಗವಾಗಿ ವಿಭಾಗಿಸಬಹುದು

1) **ಸ್ವರಗಳು** 2) **ವ್ಯಂಜನಗಳು** 3) **ಯೋಗವಾಹಗಳು**

## 1)*ಸ್ವರಗಳು

ಸ್ವತಂತ್ರವಾಗಿ ಉಚ್ಛರಿಸಲ್ಪಡುವ ಅಥವಾ ಸ್ವತಂತ್ರ ಅಸ್ತಿತ್ವವನ್ನು ಹೊಂದಿ ವರ್ಣಗಳಿಗೆ "**ಸ್ವರಗಳು**" ಎಂದು ಕರೆಯುತ್ತಾರೆ.

**ಉದಾ:ಅ,ಆ,ಇ,ಈ,ಉ,ಊ,ಋ,ಎ,ಏ,ಐ,ಒ,ಓ,ಔ** ಈ ಸ್ವರಗಳಲ್ಲಿ ಮೂರು ಪ್ರಕಾರಗಳಿವೆ

**1)ಹ್ರಸ್ವಸ್ವರ**

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು
JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

## 2)ದೀರ್ಘಸ್ವರ

## 3)ಪ್ಲುತಸ್ವರ

1)ಹ್ರಸ್ವಸ್ವರ:–

**ಒಂದು ಮಾತ್ರೆ** ಕಾಲಾವಧಿಯಲ್ಲಿ ಉಚ್ಛರಿಸಲ್ಪಡುವ ಸ್ವರಗಳನ್ನು**ಹ್ರಸ್ವಸ್ವರ** ಎಂದು ಕರೆಯುತ್ತಾರೆ

**ಉದಾಹರಣೆಗಳು:–ಅ,ಇ,ಉ,ಋ,ಎ,ಒ.**

2)ದೀರ್ಘಸ್ವರ:–

**ಎರಡು ಮಾತ್ರೆ** ಕಾಲಾವಧಿಯಲ್ಲಿ ಉಚ್ಛರಿಸಲ್ಪಡುವ ಸ್ವರಗಳನ್ನು **ದೀರ್ಘಸ್ವರ** ಎಂದು ಕರೆಯುತ್ತಾರೆ

**ಉದಾಹರಣೆಗಳು:–ಆ,ಈ,ಊ,ಏ,ಐ,ಓ,ಔ**

3)ಪ್ಲುತಸ್ವರ:–

**ಮೂರು ಮಾತ್ರೆಯ** ಕಾಲಾವಧಿಯಲ್ಲಿ ಉಚ್ಛರಿಸಲ್ಪಡುವ ಸ್ವರಗಳನ್ನು**ಪ್ಲುತಸ್ವರ** ಎಂದು ಕರೆಯುತ್ತಾರೆ.ಭಾವ ತೀವ್ರತೆಯನ್ನು ಅಭಿವ್ಯಕ್ತಿಸುವಾಗ ದೀರ್ಘಸ್ವರವು ಎಂಬ ಚಿನ್ಹೆಯನ್ನು ಪಡೆಯುವುದರ ಮೂಲಕ ಪ್ಲುತ್ತಸ್ವರವಾಗುತ್ತದೆ.

**ಉದಾಹರಣೆಗಳು:–ಅಮ್ಮಾ** S**, ಓ ದೇವರೇ.**

<u>**ಸೂಚನೆ:–**</u>

ಆಧುನಿಕ ವ್ಯಾಕರಣದಲ್ಲಿ "**ಋ**" ಧ್ವನಿಯನ್ನು ವ್ಯಂಜನವೆಂದೂ ‘‘ಐ’’**(ಅ+ಏ)** ಮತ್ತು"**ಔ**"**(ಅ+ಓ)** ಧ್ವನಿಗಳನ್ನು ಸಂಧ್ಯಕ್ಷರಗಳು ಎಂದು ಗುರುತಿಸುತ್ತಾರೆ. **ಸಂಧ್ಯಕ್ಷರ** ಎಂದರೆ "**ಎರಡು ಸ್ವರಗಳು ಸೇರೆ ಹೊಸ ಸ್ವರಾಕ್ಷರವಾಗುವುದು**" **ಉದಾಹರಣೆಗೆ:– ಅ+ಏ=ಐ.**

**ಕನ್ನಡ ವರ್ಣಮಾಲೆ**(49)

**ಸ್ವರಗಳು**(13) **ಯೋಗವಾಹಗಳು**(2)

**ಹ್ರಸ್ವಸ್ವರ**(6) **ದೀರ್ಘಸ್ವರ**(7) **ಅನುಸ್ವರ**(ಂ) **ವಿಸರ್ಗ**(ಃ)

ಅ,ಇ,ಉ,ಋ,ಎ,ಒಆ,ಈ,ಊ,ಏ,ಐ,ಓ,ಔ

**ವ್ಯಂಜನಗಳು** (34)

**ವರ್ಗೀಯ ವ್ಯಂಜನ**(25) **ಅವರ್ಗೀಯ ವ್ಯಂಜನ**(9)

**"ಕ" ಕಾರದಿಂದ "ಮ" ಕಾರದ ವರೆಗೆ** **"ಯ" ಕಾರದಿಂದ "ಳ" ಕಾರದ ವೆರೆಗೆ**

**ಅಲ್ಪಪ್ರಾಣ**(10) **ಮಹಾಪ್ರಾಣ**(10)**ಅನುನಾಸಿಕ**(5)

# 2)*ವ್ಯಂಜನಗಳು

**ಸ್ವರಗಳ** ಸಹಾಯದಿಂದ ಪರಿಪೂರ್ಣತೆಯನ್ನು ಪಡೆಯುವ ಅಕ್ಷರಗಳಿಗೆ "**ವ್ಯಂಜನಗಳು**" ಎಂದು ಕರೆಯುತ್ತೇವೆ, ಅವು:-

ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

ಈ ವ್ಯಂಜನಗಳಲ್ಲಿ ಎರಡು ವಿಧಗಳು:-

1) **ವರ್ಗೀಯ ವ್ಯಂಜನಗಳು**

2) **ಅವರ್ಗೀಯ ವ್ಯಂಜನಗಳು**

1) **ವರ್ಗೀಯ ವ್ಯಂಜನಗಳು:**

ಅಕ್ಷರಗಳು ಧ್ವನ್ಯಂಗದ ಹಿನ್ನೆಲೆಯಲ್ಲಿ ಅಥವಾ ರೂಪಸಾಮ್ಯದ ಹಿನ್ನೆಲೆಯಲ್ಲಿ ವರ್ಗೀಕಿಸಲು ಸಾಧ್ಯವಿರುವ **'ಕ್'** ಯಿಂದ **'ಮ್'** ವರೆಗಿನ 25 ಅಕ್ಷರಗಳನ್ನು **ವರ್ಗೀಯ ವ್ಯಂಜನಗಳು** ಎಂದು ಕರೆಯುತ್ತಾರೆ.

ಈ ವ್ಯಂಜನಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ, ಅವುಗಳೆಂದರೆ,

1. **ಅಲ್ಪಪ್ರಾಣ**-ಕಡಿಮೆ ಸಮಯದಲ್ಲಿ ಉಚ್ಚರಿಸಲಾಗುವ ವ್ಯಂಜನಗಳು

(ಪ್ರತಿ ವರ್ಗದಪ್ರಥಮ ಹಾಗೂ ತೃತೀಯ ಅಕ್ಷರಗಳು)

**ಉದಾ: ಕ್ಗ್,ಚ್ಜ್, ಟ್ಡ್,ತ್ದ್,ಪ್ಬ್.**

2.**ಮಹಾ ಪ್ರಾಣ-** ಹೆಚ್ಚು ಸಮಯದಲ್ಲಿ ಉಚ್ಚರಿಸಲಾಗುವ ವ್ಯಂಜನಗಳು

(ಪ್ರತಿ ವರ್ಗದ ದ್ವಿತೀಯ ಹಾಗೂ ಚತುರ್ಥಾಕ್ಷರಗಳು)

**ಉದಾ: ಖ್ಘ್,ಛ್ಝ್,ಠ್ಢ್,ಥ್ಧ್,ಫ್ಭ್.**

3.**ಅನುನಾಸಿಕ**-ಮೂಗಿನ ಸಹಾಯದಿಂದ ಉಚ್ಚರಿಸಲಾಗುವ ವ್ಯಂಜನಗಳು.

(ಪ್ರತಿ ವರ್ಗದ ಪಂಚಮಾಕ್ಷರಗಳು)

**ಉದಾ:ಙ್, ಙ್,ಞ್,ಣ್,ಗ್,ನ್,ಮ್.**

ಅಕ್ಷರಗಳನ್ನು ಉಚ್ಛರಿಸುವಾಗ ಅವುಗಳು ಎಲ್ಲೆಲ್ಲಿ ಹುಟ್ಟುತ್ತದೆ ಎಂಬುದರ ಆಧಾರದ ಮೇಲೆ ವರ್ಗೀಯ ವ್ಯಂಜನಗಳನ್ನು ವರ್ಗೀಕರಿಸಲಾಗಿದೆ. ಅವು

1. **ಕ್,ಖ್,ಗ್,ಘ್,ಙ್:–**

ಇವುಗಳು **ಕಂಠದಲ್ಲಿ** ಹುಟ್ಟುತ್ತವಾದ್ದರಿಂದ ಇವುಗಳು **ಕಂಠಾಕ್ಷರಗಳು.**

2. **ಚ್,ಛ್,ಜ್,ಝ್,ಞ್:–**

ಇವುಗಳು **ತಾಲುವು** ಅಥವಾ **ಅಂಗಳದಲ್ಲಿ** ಹುಟ್ಟುತ್ತವೆ, ಹಾಗಾಗಿ
ಇವು **ತಾಲವ್ಯಾಕ್ಷರಗಳು.**

3. **ಟ್,ಠ್,ಡ್,ಢ್,ಣ್:–**

ಇವುಗಳು ಹುಟ್ಟುವ ಸ್ಥಳ **ಮೂರ್ಧ** ಅಥವಾ **ಬಾಯಿಯ** ಮುಂಭಾಗವನ್ನು **ನಾಲಿಗೆಯು ಸ್ಪರ್ಶಿಸಿ** ಅಕ್ಷರವನ್ನು ಉಚ್ಛರಿಸಲಾಗುತ್ತದೆ ಹಾಗಾಗಿ
ಇವು **ಮೂರ್ಧನ್ಯಾಕ್ಷರಗಳು.**

4. **ತ್,ಥ್,ದ್,ಧ್,ನ್:–**

ಇವುಗಳು ಹುಟ್ಟುವ ಸ್ಥಳ **ಹಲ್ಲುಗಳು ಬಳಿ,** ಹಾಗಾಗಿ ಇವು **ದಂತ್ಯಾಕ್ಷರಗಳು.**

5. **ಪ್,ಫ್,ಬ್,ಭ್,ಮ್:–**

ಇವುಗಳು **ಓಷ್ಠ್ಯ** ಅಥವಾ **ತುಟಿಗಳ** ಸಹಾಯದಿಂದ ಉಚ್ಛರಿಸಲ್ಪಡುವುದರಿಂದ
ಇವುಗಳನ್ನು **ಓಷ್ಠ್ಯ ಅಕ್ಷರಗಳು** ಎನ್ನಲಾಗುತ್ತದೆ.

2) **ಅವರ್ಗೀಯ ವ್ಯಂಜನಗಳು:**

ಭಿನ್ನ–ಭಿನ್ನ ಧ್ವನ್ಯಾಂಗದ ಮೂಲಕ ಜನಿಸುವ ಮತ್ತು ವರ್ಗೀಕರಿಸಲು ಸಾಧ್ಯಯಿರುವ ಕೊನೆಯ ಒಂಬತ್ತು ಅಕ್ಷರಗಳನ್ನು ಅವರ್ಗೀಯ ವ್ಯಂಜನಗಳು ಎಂದು ಕರೆಯುತ್ತಾರೆ.

**ಯ ರ ಲ ವ ಶ ಷ ಸ ಹ ಳ.**

# 3)*ಯೋಗವಾಹಗಳು

**ಯೋಗ** ಎಂದರೆ **"ಸಂಬಂಧ",ವಾಹ** ಎಂದರೆ **"ಹೊಂದಿದ"** ಅಂದರೆ ಯಾವುದಾದರೂ ಸ್ವರಗಳೊಂದಿಗೆ ಸಂಬಂಧ ಹೊಂದಿ ಉಚ್ಛರಿಸಲ್ಪಡುವ ಅನುಸ್ವರ ಮತ್ತು ಉಪಸರ್ಗಗಳಿಗೆ **"ಯೋಗವಾಹ"ಗಳು** ಎನ್ನುವರು.

1)ಅನುಸ್ವರ "ಂ"2)ವಿಸರ್ಗ "ಃ"

**ಉದಾಹರಣೆಗೆ:– ಅಂ,ಕಂ,ಚಂ,ತಂ,ಟಂ,ಪಂ, ರಂಬೆ,ಪಂಪ,**

**ಅಃ,ಕಃ,ತಃ,ಟಃ,ದುಃಖ,ಅಂತಃಕರಣ,** ಇತ್ಯಾದಿ

**<u>ಸೂಚನೆ:–</u>** ಅನುಸ್ವರವು **"ಂ" ಕಂಠ** ಮತ್ತು **ನಾಸಿಕದ ಸಹಾಯದಿಂದ ಹುಟ್ಟುವುದರಿಂದ** ಇದನ್ನು **"ಕಂಠನಾಸಿಕ"** ಎಂದು ಕರೆಯುವರು.

| ಕ್ರ.ಸಂ. | ವರ್ಗಗಳು | ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ | ಅಕ್ಷರ ಸಂಖ್ಯೆ |
|---|---|---|---|---|---|---|---|
| 1 | ಕ ವರ್ಗ | ಕ್ | ಖ್ | ಗ್ | ಘ್ | ಙ್ | 5 |
| 2 | ಚ ವರ್ಗ | ಚ್ | ಛ್ | ಜ್ | ಝ್ | ಞ್ | 5 |
| 3 | ಟ ವರ್ಗ | ಟ್ | ಠ್ | ಡ್ | ಢ್ | ಣ್ | 5 |
| 4 | ತ ವರ್ಗ | ತ್ | ಥ್ | ದ್ | ಧ್ | ನ್ | 5 |
| 5 | ಪ ವರ್ಗ | ಪ್ | ಫ್ | ಬ್ | ಭ್ | ಮ್ | 5 |
| **ಒಟ್ಟು ಅಕ್ಷರಗಳು:** | | | | 25 | | | |

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು
JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ಸಂಧಿಗಳು

**ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಕೂಡುವುದಕ್ಕೆ "ಸಂಧಿ"** ಎಂದು ಹೆಸರು.

1. ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಬಂದರೆ **ಸ್ವರಸಂಧಿ** ಎನ್ನುವರು.
2. ಸಂಧಿಯಾಗುವಾಗ ಸ್ವರದ ಮುಂದೆ ವ್ಯಂಜನ, ವ್ಯಂಜನದ ಮುಂದೆ ಸ್ವರ, ವ್ಯಂಜನದ ಮುಂದೆ ವ್ಯಂಜನ ಬಂದರೆ **ವ್ಯಂಜನಸಂಧಿ** ಎನ್ನುವರು.

ಸಂಧಿಗಳಲ್ಲಿ ಎರಡು ವಿಧಗಳು:-

1.**ಕನ್ನಡ ಸಂಧಿಗಳು**

2.**ಸಂಸ್ಕೃತ ಸಂಧಿಗಳು**

# 1).*ಕನ್ನಡ ಸಂಧಿಗಳು

ಕನ್ನಡ ಸಂಧಿಯಲ್ಲಿ **ಲೋಪಸಂಧಿ,ಆಗಮ ಸಂಧಿ ಮತ್ತು ಆದೇಶ ಸಂಧಿ** ಎಂದು ಮೂರು ವಿಧಗಳುಂಟು. ಲೋಪ ಮತ್ತು ಆಗಮ ಸಂಧಿಯನ್ನು ಕನ್ನಡದ ಸ್ವರಸಂಧಿ ಎಂದು ಮತ್ತು ಆದೇಶ ಸಂಧಿಯನ್ನು ಕನ್ನಡದ ವ್ಯಂಜನಸಂಧಿ ಎಂದು ಕರೆಯುತ್ತಾರೆ.

**ಉದಾಹರಣೆ: ಸ್ವರಸಂಧಿ = ಸ್ವರ+ ಸ್ವರ**

**ದೇವರಿಂದ= ದೇವರು + ಇಂದ(ಉ+ಇ)**

**ಕೆರೆಯನ್ನು= ಕೆರೆ + ಅನ್ನು(ವ+ಅ)**

1.**ಲೋಪಸಂಧಿ:**

**ಸ್ವರದ ಮುಂದೆ ಸ್ವರವು ಬಂದು** ಸಂಧಿಯಾಗುವಾಗ **ಪೂರ್ವ ಪದದಲ್ಲಿರುವ ಸ್ವರದ ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ** ಲೋಪವಾಗುವುದನ್ನು **ಲೋಪಸಂಧಿ** ಎನ್ನುವರು. **ಉದಾಹರಣೆ:**

**ಊರನ್ನು=**ಊರು + ಅನ್ನು (ಉ+ಅ)

**ನೂರಾರು=**ನೂರು + ಆರು (ಉ+ಅ)

**ದೇವರಿಂದ=** ದೇವರು + ಇಂದ(ಉ+ಇ)

**ಮಾತಿಲ್ಲ=**ಮಾತು + ಇಲ್ಲ (ಉ+ ಇ)

**ಮಾಡಿಸು=**ಮಾಡು + ಇಸು (ಉ+ಇ)

**ನಿಮ್ಮೂರು=** ನಿಮ್ಮ +ಊರು (ಅ+ಊ)
**ನಮ್ಮೂರು=** ನಮ್ಮ +ಊರು(ಅ+ಊ)
**ನಾವೆಲ್ಲಾ=**ನಾವು+ ಎಲ್ಲಾ (ಉ+ಎ)
**ತನ್ನದೆಂಬಂತೆ=**ತನ್ನದು + ಎಂಬಂತೆ(ಉ+ಎ)
**ಹಿಡಿದೆಳೆ** =ಹಿಡಿದು + ಎಳೆ (ಉ+ಎ)
**ನೂಲೆಳೆ =**ನೂಲು +ಎಳೆ (ಉ+ಎ)
**ನೂರೆಂಟು=**ನೂರು + ಎಂಟು (ಉ+ ಎ)
**ಊರೊಳಗೆ =** ಊರು + ಒಳಗೆ (ಉ+ಒ)
**ಬೇರೊಂದು=** ಬೇರೆ + ಒಂದು (ಎ+ ಒ)
**ಓಬ್ಬೊಬ್ಬ=**ಒಬ್ಬ+ ಒಬ್ಬ (ಅ+ಒ)
**ಒಂದೊಂದು =** ಒಂದು + ಒಂದು(ಉ+ಒ)

2.**ಆಗಮ ಸಂಧಿ:–**

**ಸ್ವರದ ಮುಂದೆ ಸ್ವರವು ಬಂದಾಗ** ಲೋಪಸಂಧಿ ಮಾಡಿದರೆ ಅರ್ಥವು ಕೆಡವಂತಿದ್ದಲ್ಲಿ **ಆ ಎರಡು ಸ್ವರಗಳು ಮಧ್ಯದಲ್ಲಿ "ಯ್" ಕಾರ ಅಥವಾ "ವ್" ಕಾರವೂ ಹೊಸದಾಗಿ ಬಂದು ಸೇರುವುದನ್ನು ಆಗಮಸಂಧಿ ಎನ್ನುವರು**

**"ಯ್" ಕಾರಾಗಮಸಂಧಿ:–**

ಸಂಧಿಕಾರ್ಯವು ಮಾಡಿದಾಗ **"ಯ್"** ಕಾರ ಆಗಮವಾದರೇ **"ಯ್"ಕಾರಗಮಸಂಧಿ** ಎನ್ನುತ್ತಾರೆ.**ಉದಾಹರಣೆಗೆ:–**

ಕೆರೆ+ ಅಲ್ಲಿ=**ಕೆರೆಯಲ್ಲಿ** ಗಾಳಿ+ಅನ್ನು= **ಗಾಳಿಯನ್ನು**
ಕೈ+ ಅನ್ನು=**ಕೈಯನ್ನು**ಗಿರಿ+ ಅನ್ನು=**ಗಿರಿಯನ್ನು**
ಕೈ+ ಆಡಿಸು=**ಕೈಯಾಡಿಸು**ಬಿಸಿ+ಆಯ್ತು=**ಬಿಸಿಯಾಯ್ತು**
ಪರಿವೆ+ ಇಲ್ಲದೆ=**ಪರಿವೆಯಿಲ್ಲದೆ** ಮಳೆ+ ಇಂದ=**ಮಳೆಯಿಂದ**
ಮೇ+ಇಸು= **ಮೇಯಿಸು** ನುಡಿ +ಒಡನೆ=**ನುಡಿಯೊಡನೆ**

**"ವ್"ಕಾರಾಗಮಸಂಧಿ:–**

ಸಂಧಿಕಾರ್ಯವು ಮಾಡಿದಾಗ **"ವ್"ಕಾರ** ಆಗಮವಾದರೆ "ವ್"ಕಾರಗಮಸಂಧಿ ಎನ್ನುತ್ತೇವೆ.**ಉದಾಹರಣೆಗೆ:–**

ಮಗು+ಅನ್ನು=**ಮಗುವನ್ನು** ಹಸು+ ಅನ್ನು= **ಹಸುವನ್ನು**
ಗುರು +ಅನ್ನು=**ಗುರುವನ್ನು** ಮಾತೃ+ ಅನ್ನು= **ಮಾತೃವನ್ನು**
ಹೂ+ ಇಂದ=**ಹೂವಿಂದ** ಪೂ + ಇನ=**ಪೂವಿನ**

**3.ಆದೇಶ ಸಂದಿ:-**

ಸಂಧಿಕಾರ್ಯ ನಡೆದಾಗ ಒಂದು ಅಕ್ಷರ ಹೋಗಿ ಮತ್ತೊಂದು ಅಕ್ಷರ ಬಂದರೆ ಅದನ್ನು ಆದೇಶ ಸಂಧಿ ಎನ್ನುತ್ತಾರೆ.ಸಾಮಾನ್ಯವಾಗಿ **"ಕತಪ"** ಗಳಿಗೆ **"ಗದಬ"** ಗಳು ಅನುಕ್ರಮವಾಗಿಆದೇಶವಾಗುವುದು. ಉದಾಹರಣೆಗೆ:-

**"ಕ" ಕಾರಕ್ಕೆ "ಗ"ಕಾರ ಆದೇಶ**

ಹರಿ+ ಕೋಲು= **ಹರಿಗೋಲು** ಕೈ +ಕನ್ನಡಿ=**ಕೈಗನ್ನಡಿ**

ಬರಿ + ಕನಸು =**ಬರಿಗನಸು** ಒಡ+ ಕೂಡಿ= **ಒಡಗೂಡಿ**

ಸಿರಿ+ ಕನ್ನಡ= **ಸಿರಿಗನ್ನಡ**ಕಣ್+ ಕೆಟ್ಟು=**ಕಂಗೆಟ್ಟು**

ಕೊನೆ+ ಕಾಣು= **ಕೊನೆಗಾಣು**ಹನಿ+ ಕೂಡು= **ಹನಿಗೂಡು**

ಕೈ + ಕನ್ನಡಿ= **ಕೈಗನ್ನಡಿ** ಮಳೆ+ ಕಾಲ=**ಮಳೆಗಾಲ**

ಹಳ+ಕನ್ನಡ =**ಹಳಗನ್ನಡ** ನುಡಿ +ಕೂಡು=**ನುಡಿಗೊಡು**

**"ತ"ಕಾರಕ್ಕೆ "ದ" ಕಾರ:-**

ಮೈ+ ತುಂಬಿ=**ಮೈದುಂಬಿ** ಮೈ+ತೊಳೆ=**ಮೈದೊಳೆ**

ಬೆಟ್ಟ+ತಾವರೆ=**ಬೆಟ್ಟದಾವರೆ**ಸರಿ+ತೂಗು= **ಸರಿದೂಗು**

ಕೆಳ+ತುಟಿ=**ಕೆಳದುಟಿ**ತಲೆ+ತೂಗಿದನು=**ತಲೆದೂಗಿದನು**

ಬೆಳು+ ತಿಂಗಳು=**ಬೆಳದಿಂಗಳೂ**

**"ಪ"ಕಾರಕ್ಕೆ "ಬ" ಕಾರ:-**

ಕಣ್ + ಪನಿ=**ಕಂಬನಿ**ಸುಖ+ಪಡು= **ಸುಖಬಡು**

ಪೂ+ ಪುಟ್ಟಿ= **ಪೂಬುಟ್ಟಿ** ಹೂ+ಪುಟ್ಟಿ= **ಹೂಬುಟ್ಟಿ**

ಬೆನ್+ಪತ್ತು= **ಬೆಂಬತ್ತು**

ಸಾಮಾನ್ಯವಾಗಿ ಉತ್ತರ ಪದದ ಮೊದಲಕ್ಷರ **ಪ,ಬ,ಮ ಗಳಿಗೆ "ವ"**ಕಾರವು ಆದೇಶವಾಗಿ ಬರುವುದನ್ನು ಸಹ **ಆದೇಶ ಸಂಧಿ** ಎಂದು ಕರೆಯುತ್ತಾರೆ.

**ಉದಾಹರಣೆಗೆ:-**

**'ಪ'ಕಾರಕ್ಕೆ 'ವ' ಕಾರ:-**

ನಡೆ+ ಪೆಣ= **ನಡೆವೆಣ**ಬಿಲ್+ಪಿಡಿ=**ಬಿಲ್ವಡಿ**

ಎಳ+ಪರೆ=**ಎಳವರೆ**ಬೆಮರ್+ಪನಿ=**ಬೆಮರ್ವನಿ**

ಬೇರ್ದ+ಪೆರಸಿ=**ಬೇರ್ವೆಸಿ**

**"ಬ" ಕಾರಕ್ಕೆ "ವ" ಕಾರ:–**

ಎಳ+ ಬಳ್ಳಿ= **ಎಳವಳ್ಳಿ** ತಲೆ+ಬೇನೆ=**ತಲೆವೇನೆ**

ಕಡು +ಬೆಳ್ಳು=**ಕಡುವೆಳ್ಳು**

**"ಮ" ಕಾರಕ್ಕೆ "ವ" ಕಾರ:–**

ನೆಲ+ಮನೆ=**ನೆಲವನೆ** ಮೇಲ್+ಮಾತು=**ಮೇಲ್ವಾತು**

ಸಾಮಾನ್ಯವಾಗಿ ಉತ್ತರ ಪದದ ಮೊದಲಕ್ಷರ **"ಸ"ಕಾರ**ವಿದ್ದಾಗ **ಚ,ಛ,ಜ,** ಕಾರವು ಆದೇಶವಾಗಿ ಬರುವುದನ್ನು ಸಹ **ಆದೇಶ ಸಂಧಿ** ಎಂದು ಕರೆಯುತ್ತಾರೆ. ಉದಾಹರಣೆಗೆ:–

**"ಸ" ಕಾರಕ್ಕೆ " ಚ" ಕಾರ:–**

ಇನ್+ ಸರ= **ಇಂಚರ** ನುಣ್+ ಸರ =**ನುಣ್ಚರ**

**"ಸ" ಕಾರಕ್ಕೆ "ಛ" ಕಾರ:–**

ನೂರ್+ ಸಾಸಿರ= **ನೂರ್ಛಾಸಿರ** , ಪದಿನೆಣ್+ ಸಾಸಿರಿ= **ಪದಿನೆಣ್ಛಾಸಿರಿ, ಇರ್ಛಾಸಿರ್**

**"ಸ" ಕಾರಕ್ಕೆ "ಜ" ಕಾರ:–**

ಹಿಂ+ ಸರಿ=**ಹಿಂಜರಿ,** ಮುನ್+ ಸೆರಗು=**ಮುಂಜೆರಗು, ಮುಂಜೊಡರ್**

# 2).*ಸಂಸ್ಕೃತ ಸಂಧಿಗಳು

ಸಂಸ್ಕೃತ ಸಂಧಿಗಳಲ್ಲಿ ಪ್ರಮುಖವಾಗಿ 7 ವಿಧಗಳುಂಟು ಇವುಗಳಲ್ಲಿ ಸವರ್ಣಧೀರ್ಘಸಂಧಿ, ಗುಣಸಂಧಿ, ವೃದ್ಧಿಸಂಧಿ, ಯಣ್‌ಸಂಧಿಗಳನ್ನು ಸಂಸ್ಕೃತ ಸ್ವರಸಂಧಿ ಎಂದು, ಜಸ್ತ್ವಸಂಧಿ, ಶ್ಚುತ್ವಸಂಧಿ, ಅನುನಾಸಿಕ ಸಂಧಿಗಳನ್ನು ಸಂಸ್ಕೃತ ವ್ಯಂಜನ ಸಂಧಿ ಗಳೆಂದು ಕರೆಯುತ್ತಾರೆ

1.**ಸವರ್ಣ ದೀರ್ಘಸಂಧಿ:–**

**ಒಂದೇ ಜಾತಿಯ ವರ್ಣಗಳು ಪರಸ್ಪರ ಪರವಾದಾಗ ಅದೇ ವರ್ಣವು ದೀರ್ಘವಾದರೆ ಅದು ಸವರ್ಣದೀರ್ಘಸಂಧಿ** ಎನಿಸುವುದು.

**ಉದಾಹರಣೆಗೆ:–**

**ದೇವ+ಅಸುರ = ದೇವಾಸುರ (ಅ+ಅ=ಆ)**

**ಏಕ+ ಅಕ್ಷಿ = ಏಕಾಕ್ಷಿ (ಅ+ಅ=ಆ)**

**ಪ್ರೇಮ+ ಅಮೃತ =ಪ್ರೇಮಾಮೃತ (ಅ+ಅ=ಆ)**
**ಕಾರಣ +ಅಂತರ= ಕಾರಣಾಂತರ (ಅ+ಅ=ಆ)**
**ಅಂಗ + ಅಂಗ= ಅಂಗಾಂಗ (ಅ+ಅ=ಆ)**
**ರಾಜ+ ಆಶ್ರಯ= ರಾಜಾಶ್ರಯ (ಅ+ಅ=ಆ)**
**ಕಮಲ+ ಅಕ್ಷ= ಕಮಲಾಕ್ಷ (ಅ+ಅ=ಆ)**
**ದಿವ್ಯ+ ಅನುಭವ= ದಿವ್ಯಾನುಭವ (ಅ+ಅ=ಆ)**
**ಕೋಪ+ ಅಗ್ನಿ = ಕೋಪಾಗ್ನಿ (ಅ+ಅ=ಆ)**
**ಉದ್ಯೋಗ+ಅವಕಾಶ= ಉದ್ಯೋಗಾವಕಾಶ (ಅ+ಅ=ಆ)**
**ಶಸ್ತ್ರ + ಅಲಯ= ಶಸ್ತ್ರಾಲಯ (ಅ+ಅ=ಆ)**
**ರವಿ +ಇಂದ್ರ= ರವೀಂದ್ರ (ಇ+ಇ=ಈ)**
**ಹರಿ+ ಈಶ =ಹರೀಶ (ಇ+ಇ=ಈ)**
**ಲಕ್ಷ್ಮೀ +ಈಶ=ಲಕ್ಷ್ಮೀಶ (ಈ+ಈ=ಈ)**
**ಗುರು+ ಉಪದೇಶ =ಗುರೂಪದೇಶ (ಉ+ಉ=ಊ)**
**ವಧೂ+ ಉಪದೇಶ =ವಧೂಪದೇಶ (ಉ+ಉ=ಊ)**
**ಬಹು+ಉಪದೇಶ=ಬಹೂಪದೇಶ (ಊ+ಉ=ಊ)**
**ಕಟ್ಟು+ಉಕ್ತಿ= ಕಟೂಕ್ತಿ (ಉ+ಉ=ಊ)**
**ಗುರು+ಉಕ್ತಿ = ಗುರೂಕ್ತಿ (ಉ+ಉ=ಊ)**

2.ಗುಣಸಂಧಿ:–

**ಅ ಆ ಕಾರಗಳ ಮುಂದೆ ಇ ಈ ಕಾರಗಳು ಪರವಾದರೆ ಅವೆರೆಡರ** ಸ್ಥಾನದಲ್ಲಿ **"ಏ" ಕಾರವೂ, ಉ ಊ ಕಾರಗಳು** ಪರವಾದರೆ ಅವೆರಡರ ಸ್ಥಾನದಲ್ಲಿ **"ಓ" ಕಾರವೂ, ಋ ಕಾರವೂ ಪರವಾದರೆ** ಅದರ ಸ್ಥಾನದಲ್ಲಿ **"ಅರ್"ಕಾರವೂ** ಆದೇಶಗಳಾಗಿ ಬರುತ್ತದೆ.ಇದಕ್ಕೆ **ಗುಣಸಂಧಿ** ಎಂದು ಹೆಸರು.

**ಉದಾಹರಣೆಗೆ:–**
**ಅ, ಆ, ಕಾರಕ್ಕೆ ಇ,ಈ ಕಾರ ಪರವಾದರೆ 'ಏ' ಕಾರ ಆದೇಶ**
**ದೇವ+ ಈಶ =ದೇವೇಶ (ಅ+ಈ =ಏ)**
**ಮಹಾ+ ಈಶ= ಮಹೇಶ (ಅ+ಈ=ಏ)**
**ಗಿರಿಜಾ+ ಈಶ =ಗಿರಿಜೇಶ (ಅ+ಈ=ಏ)**
**ಉಮಾ+ ಈಶ = ಉಮೇಶ (ಅ+ಈ=ಏ)**

**ಅ. ಅ ಕಾರಕ್ಕೆ ಉ,ಊ ಕಾರ ಪರವಾದರೆ 'ಓ' ಕಾರ ಆದೇಶ**
**ನಿತ್ಯ+ಉತ್ಸವ =ನಿತ್ಯೋತ್ಸವ (ಅ+ಉ=ಓ)**

**ಸೂರ್ಯ+ ಉದಯ= ಸರ್ರ್ಯೋದಯ (ಅ+ಉ=ಓ)**
**ಚತುರ +ಉಕ್ತಿ= ಚತುರೋಕ್ತಿ (ಅ+ಉ=ಓ)**
**ಚಂದ್ರ+ ಉದಯ= ಚಂದ್ರೋದಯ (ಅ+ಉ=ಓ)**
**ಸ್ನಾತಕ+ ಉತ್ತರ= ಸ್ನಾತಕೋತ್ತರ (ಅ+ಉ=ಓ)**
**ಮಹಾ + ಉಪಕಾರ= ಮಹೋಪಕಾರ (ಅ+ಉ=ಓ)**

**ಆ. ಆ ಕಾರಕ್ಕೆ 'ಋ' ಕಾರ ಪರವಾದರೆ 'ಆರ್(೯)' ಕಾರ ಆದೇಶ**
**ಮಹ+ ಋಷಿ=ಮಹರ್ಷಿ (ಅ+ಋ=ಅರ್(ೕ))**
**ದೇವ+ ಋಷಿ=ದೇವರ್ಷಿ (ಅ+ಋ=ಅರ್(ೕ))**

**3.ವೃದ್ಧಿಸಂಧಿ:-**

**ಅ ಆ ಕಾರಗಳಿಗೆ ಏ ಐ** ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ **'ಐ' ಕಾರವೂ,ಓ, ಔ ಕಾರಗಳು ಪರವಾದರೆ** ಅವೆರಡರ ಸ್ಥಾನದಲ್ಲಿ **'ಐ' ಕಾರವೂ, ಓ,ಔ ಕಾರಗಳು** ಪರವಾದರೆ ಅವೆರಡರ ಸ್ಥಾನದಲ್ಲಿ **'ಔ' ಕಾರವೂ** ಆದೇಶವಾಗಿ ಬರುವ ಸಂಧಿಯನ್ನು **ವೃದ್ಧಿ ಸಂಧಿ** ಎನ್ನುವರು. **ಉದಾಹರಣೆಗಳು:-**

**ಅ. ಅ ಕಾರಕ್ಕೆ 'ಏ,ಐ' ಕಾರಗಳು ಪರವಾದರೆ 'ಐ' ಕಾರ ಆದೇಶ**
**ಏಕ+ ಏಕ= ಏಕೈಕ (ಅ+ಏ=ಐ)**
**ಲೋಕ+ ಏಕವೀರ (ಅ+ಏ=ಐ)**
**ಅಷ್ಟ+ಐಶ್ವರ್ಯ= ಅಷ್ಟೈಶ್ವರ್ಯ (ಅ+ಏ=ಐ)**
**ಭಾವ+ ಐಕ್ಯ =ಭಾವೈಕ್ಯ (ಅ+ಏ=ಐ)**
**ಶಿವ+ ಐಕ್ಯ = ಶಿವೈಕ್ಯ (ಅ+ಏ=ಐ)**
**ಜನ+ ಐಕ್ಯ= ಜನೈಕ್ಯೆ (ಅ+ಏ=ಐ)**
**ವಿದ್ಯಾ+ಐಶ್ವರ್ಯ=ವಿದ್ಯೈಶ್ವರ್ಯ (ಅ+ಏ=ಐ)**

**ಆ. ಆ ಕಾರಕ್ಕೆ 'ಓ,ಔ' ಕಾರಗಳು ಪರವಾದರೆ 'ಔ' ಕಾರ ಆದೇಶ**
**ಜಲ+ ಓಘ= ಜಲೌಘ (ಅ+ಓ=ಔ)**
**ವನ+ ಔಷದ= ವನೌಷದ (ಅ+ಓ=ಔ)**
**ಘನ+ ಔದಾರ್ಯ= ಘನೌದಾರ್ಯ (ಅ+ಓ=ಔ)**
**ಮಹಾ+ಔನ್ನತ್ಯ= ಮಹೌನ್ನತ್ಯ (ಅ+ಓ=ಔ)**
**ಮಹಾ+ಔಷದ=ಮಹೌಷದ (ಅ+ಓ=ಔ)**
**ಮಹಾ+ಔದಾರ್ಯ=ಮಹೌದಾರ್ಯ (ಅ+ಓ=ಔ)**

**4.ಯಣ್ ಸಂಧಿ:–**

**ಇ,ಈ,ಉ,ಊ,ಋ, ಕಾರಗಳಿಗೆ** ಸವರ್ಣವಲ್ಲದ ಸ್ವರ ಪರವಾದರೆ **ಇ,ಈ ಕಾರಗಳಿಗೆ ’ಯ್’ ಕಾರವೂ, ಉ, ಊ ಕಾರಗಳಿಗೆ ’ವ್’ ಕಾರವೂ, ಋ ಕಾರಕ್ಕೆ ’ರ್’** ಆದೇಶಗಳಾಗಿ ಬರುತ್ತದೆ, ಇದಕ್ಕೆ **ಯಣ್ ಸಂಧಿ** ಎನ್ನುವರು. **ಉದಾಹರಣೆಗೆ:–**

**ಇ. ಈ ಕಾರಕ್ಕೆ ’ಯ’ ಕಾರ ಆದೇಶ**
**ಜಾತಿ +ಅತೀತ=ಜಾತ್ಯತೀತ (ಇ+ಅ=ಯ)**
**ಅತಿ+ ಅಂತ= ಅತ್ಯಂತ (ಇ+ಅ=ಯ)**
**ಪ್ರತಿ+ ಉತ್ತರ=ಪ್ರತ್ಯುತ್ತರ (ಇ+ಅ=ಯ)**
**ಅತಿ+ ಉತ್ತಮ=ಅತ್ಯುತ್ತಮ (ಇ+ಅ=ಯ)**
**ಭೂಮಿ+ ಅಂತರ್ಗತ= ಭೂಮ್ಯಂತರ್ಗತ (ಇ+ಅ=ಯ)**
**ಇತಿ +ಅದಿ= ಇತ್ಯಾದಿ (ಇ+ಅ=ಯ)**
**ಗತಿ+ ಅಂತರ=ಗತ್ಯಂತರ (ಇ+ಅ=ಯ)**
**ಅಧಿ+ ಆತ್ಮ=ಅಧ್ಯಾತ್ಮ (ಇ+ಅ=ಯ)**

**ಉ.ಊ ಕಾರಕ್ಕೆ ’ವ’ ಕಾರ ಆದೇಶ**
**ಮನು+ ಅಂತರ= ಮನ್ವಂತರ (ಉ+ಅ=ವ)**
**ವಧೂ+ ಅನ್ವೇಷಣ= ವಧ್ವನ್ವೇಷಣ (ಉ+ಅ=ವ)**
**ಗುರು+ ಆಜ್ಞೆ =ಗುರ್ವಾಜ್ಞೆ (ಉ+ಆ=ವ)**
**ಮನು+ ಆದಿ=ಮನ್ವಾದಿ( ಊ+ಆ=ವ)**

**ಋ ಕಾರಕ್ಕೆ ’ರ್’ ಕಾರ ಆದೇಶ**
**ಪಿತೃ +ಅರ್ಜಿತ=ಪಿತ್ರಾರ್ಜಿತ (ಋ+ಅ=ರ್)**
**ಕತೃ+ಅರ್ಥ=ಕರ್ತ್ರರ್ಥ (ಋ+ಅ=ರ್)**
**ಮಾತೃ+ ಅಂಶ=ಮಾತ್ರಂಶ (ಋ+ಅ=ರ್)**

5.**ಜಸ್ತ್ವಸಂಧಿ:–**

**ಪೂರ್ವಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಿಗೆ ಯಾವ ವರ್ಣ ಎದುರಾದರೂ ಅದೇ ವರ್ಗದ ಮೂರನೇ ಅಕ್ಷರ ಆದೇಶವಾಗಿ** ಬರುವುದು ಜಸ್ತ್ವಸಂಧಿ ಎನ್ನುವುದು. ಅಂದರೆ **ಕ,ಚ,ಟ,ತ,ಪ** ಗಳಿಗೆ ಆದೇಶವಾಗಿ ವರ್ಗದ **ಗ,ಜ,ಡ,ದ,ಬ** ಗಳು ಆದೇಶವಾಗುವುದು, **ಉದಾಹರಣೆಗೆ:–**

**ವಾಕ್+ ದಾನ= ವಾಗ್ದಾನ, ವಾಕ್+ದೇವಿ= ವಾಗ್ದೇವಿ( ಕ್ ಗೆ, ಗ್ ಕಾರ)**
**ಅಚ್+ಅಂತ=ಅಜಂತ, ಅಚ್+ಆದಿ=ಅಜಾದಿ(ಚ್ ಗೆ.ಜ್ ಕಾರ)**
**ಷಟ್+ಅನನ=ಷಡಾನನ, ಷಟ್+ಅಂಗ=ಷಡಂಗ (ಟ್ ಗೆ,ಡ್ ಕಾರ)**
**ಸತ್ + ಆನಂದ=ಸದಾನಂದ, ಸತ್+ ಭಾವ=ಸದ್ಭಾವ(ತ್ ಗೆ,ದ್ ಕಾರ)**
**ಅಪ್+ಧಿ=ಅಬ್ಧಿ, ಅಪ್+ಜ= ಅಬ್ಜ(ಪ್ ಗೆ,ಬ್ ಕಾರ)**

6.**ಶ್ಚುತ್ವಸಂದಿ:-**

**ಪೂರ್ವಪದದ ಕೊನೆಯಲ್ಲಿ ಸಕಾರ ವಾಗಲೀ, ತಕಾರ ವಾಗಲೀ ಇದ್ದು, ಉತ್ತರಪದದ ಮೊದಲಲ್ಲಿ ಕ್ರಮವಾಗಿ ಶಕಾರ ವಾಗಲೀ, ಚಕಾರ ವಾಗಲೀ** ಬಂದರೆ ಅವುಗಳನ್ನು **ಶ್ಚುತ್ವಸಂಧಿ** ಎನ್ನುವರು.

**ಉದಾಹರಣೆಗೆ:–**

**ಮನಸ್+ ಶುದ್ಧಿ =ಮನಶ್ಶುದ್ಧಿ ('ಸ್' ಕಾರಕ್ಕೆ 'ಶ್' ಕಾರ)**
**ಮನಸ್+ ಶಾಂತಿ=ಮನಶಾಂತಿ ('ಸ್' ಕಾರಕ್ಕೆ 'ಶ್' ಕಾರ)**
**ಯಶಸ್+ ಚಂದ್ರ= ಯಶಶ್ಚಂದ್ರ('ತ್ ಕಾರಕ್ಕೆ 'ಚ್' ಕಾರ)**
**ಬೃಹತ್+ ಛತ್ರ= ಬೃಹಚ್ಛತ್ರ ('ತ್' ಕಾರಕ್ಕೆ 'ಚ್' ಕಾರ)**

7.**ಅನುನಾಸಿಕ ಸಂಧಿ:–**

**ಪೂರ್ವಪದದ ಕೊನೆಯಲ್ಲಿ ಅಯಾ ವರ್ಗದ ಪ್ರಥಮಾಕ್ಷರಗಳು ಇದ್ದು ಅವುಗಳಿಗೆ ಅನುನಾಸಿಕ ಅಕ್ಷರಗಳು ಪರವಾದರೆ ಅದನ್ನು ಅನುನಾಸಿಕ ಸಂಧಿ** ಎನ್ನುವರು. **ಅಂದೆರ ಕ್,ಟ್,ತ್,ಪ್, ವ್ಯಂಜನಗಳಿಗೆ ಙ್,ಣ್,ನ್,ಮ್** ವ್ಯಂಜನಗಳು ಆದೇಶವಾಗುವುದು.
**ಉದಾಹರಣೆಗೆ:–**
**ವಾಕ್+ ಮಯ=ವಾಙ್ಮಯ, ದಿಕ್+ಮೂಡ=ದಿಙ್ಮೂಡ (ಕ್ ಗೆ, ಙ್ ಕಾರ)**
**ಸತ್+ ಮಾನ=ಸನ್ಮಾನ, ಚಿತ್+ ಮಯ= ಚಿನ್ಮಯ (ತ್ ಗೆ, ನ್ ಕಾರ)**
**ಷಟ್+ ಮುಖ=ಷಣ್ಮುಖ, ಷಟ್ +ಮಾಸ= ಷಣ್ಮಾಸ (ಟ್ ಗೆ ಣ್ ಕಾರ)**

**ಅಪ್ +ಮಯ= ಅಮ್ಮಯ (ಪ್ ಗೆ,ಮ್ ಕಾರ)**

## ಸಂಧಿಗಳು

- **ಕನ್ನಡ ಸಂಧಿ**
  - **ಸ್ವರ ಸಂಧಿ**
    1. ಲೋಪ ಸಂದಿ
    2. ಆಗಮ ಸಂಧಿ
       - "ಯ" ಕಾರ
       - "ವ" ಕಾರ
  - **ವ್ಯಂಜನ ಸಂಧಿ**
    1. ಆದೇಶ ಸಂಧಿ
- **ಸಂಸ್ಕೃತ ಸಂಧಿಗಳು**
  - **ಸ್ವರ ಸಂಧಿ**
    1. ಸವರ್ಣದೀರ್ಘ ಸಂಧಿ
    2. ಗುಣಸಂಧಿ
    3. ವೃದ್ಧಿಸಂಧಿ
    4. ಯಣ್‌ಸಂಧಿ
  - **ವ್ಯಂಜನ ಸಂಧಿ**
    1. ಜಸ್ತ್ವಸಂಧಿ
    2. ಶ್ಚುತ್ವಸಂಧಿ
    3. ಅನುನಾಸಿಕ ಸಂಧಿ

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು
JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ನಾಮಪದ

ಜನರು ವ್ಯವಹಾರ ಅನುಕೂಲತೆಗಾಗಿ ಆಯಾ ವಸ್ತು ಪ್ರಾಣಿ, ಮೊದಲಾವುಗಳನ್ನು ಗುರುತಿಸಲು ಆಯಾ ಹೆಸರುಗಳನ್ನು ಇಟ್ಟು, ಆಯಾ ಹೆಸರುಗಳನ್ನು ಹೇಳುವ ಮೂಲಕ ಆ ವಸ್ತುಗಳನ್ನು ಗುರುತಿಸುತ್ತಾರೆ.ಆಯಾ ವಸ್ತುಗಳನ್ನು ಸಾಂಕೇತಿಸಲು ಇರುವ ಹೆಸರುಗಳಿಗೆ **"ನಾಮಪದ"** ಎನ್ನುವರು.

**ನಾಮಪದದಲ್ಲಿ ಎಂಟು ವಿಧಗಳಿವೆ,**

**1.ವಸ್ತು ವಾಚಕ ನಾಮ**

**2.ಗುಣವಾಚಕ ನಾಮ**

**3.ಸಂಖ್ಯಾವಾಚಕ ನಾಮ**

**4.ಪರಿಮಾಣವಾಚಕ**

**5.ದಿಗ್ವಾಚಕ**

**6.ಪ್ರಕಾರವಾಚಕ**

**7.ಸರ್ವನಾಮ**

**8.ಭಾವನಾಮ**

## 1.ವಸ್ತು ವಾಚಕ ನಾಮ.

ಸಜೀವ ಮತ್ತು ನಿರ್ಜೀವ ವಸ್ತುಗಳ ಹೆಸರನ್ನು ಹೇಳುವ ಶಬ್ದಗಳನ್ನು **ವಸ್ತುವಾಚಕ ನಾಮ**(ನಾಮ ಪ್ರಕೃತಿಗಳು)ಎನ್ನುವರು.

**ಉದಾ:–**ಗಂಗೆ,ತುಂಗೆ, ಶಾರದೆ,ಮಂಜು, ರಮೇಶ,
ಎತ್ತು,ಎಮ್ಮೆ,ಬೆಕ್ಕು,ನಾಯಿ,ಚಿರತೆ,ಸಿಂಹ,
ಮನೆ,ದೇವಾಲಯ,ನದಿ,ಗುಡ್ಡ,ಕಲ್ಲು,ಹೊಲ,
ಪಾತ್ರೆ,ಹೂ,ಬಳ್ಳಿ,ಬೆಟ್ಟ,ಇತ್ಯಾದಿ

**I.**ವಾಸ್ತವಾಚಕಗಳನ್ನು ಸ್ಪಷ್ಟವಾಗಿ ಗುರುತಿಸಲು ಮೂರು ರೀತಿಯಲ್ಲಿ ವಿಂಗಡಿಸಲಾಗುತ್ತದೆ.

**ಅ.ರೂಢ ನಾಮ**

**ಆ. ಅಂಕಿತ ನಾಮ**

**ಇ.ಅನ್ವರ್ಥ ನಾಮ**

**ಅ.ರೂಢ ನಾಮ:**

**ಭಾಷೆಯಲ್ಲಿ ಹಿಂದಿನ ಕಾಲದಿಂದಲೂ ರೂಢಿಯಿಂದ ಬಂದ ಹೆಸರನ್ನು ರೂಢನಾಮಗಳು** ಎನ್ನುವರು.ಇವು ವಸ್ತು, ವ್ಯಕ್ತಿ,ಪ್ರಾಣಿ,ಮನೆ,ಮಠ,ಕಟ್ಟಿಗೆ,ಶಾಲೆ ಇತ್ಯಾದಿ

**ಆ.ಅಂಕಿತ ನಾಮ:**

**ರೂಢಿಯಿಂದ ಬಂದ ಹೆಸರುಗಳಿಗೆ ಪ್ರತ್ಯೇಕತೆಯನ್ನು ಮತ್ತು ಸ್ಪಷ್ಟತೆಯನ್ನು ಅಥವಾ ಒಂದೇ ವಸ್ತು,ವ್ಯಕ್ತಿ ಮತ್ತು ಪ್ರಾಣಿಯನ್ನು ನಿರ್ದಿಷ್ಟವಾಗಿ ಗುರುತಿಸಲು ಇಟ್ಟ ಹೆಸರುಗಳು ಅಂಕಿತ ನಾಮಗಳು** ಆಗಿರುತ್ತವೆ.ಅಂದರೆ ಅಂಕಿತ ನಾಮಗಳು ಎಂದರೆ ಇಟ್ಟ ಹೆಸರುಗಳು ಎಂದು ಅರ್ಥ.

**ಉದಾ:-ರೂಢನಾಮಗಳು - ಅಂಕಿತನಾಮಗಳು**

ಹುಡುಗ - ಶಾಮು, ರಾಮು, ಲಕ್ಷ್ಮಣ

ಹುಡುಗಿ- ಲಲಿತಾ, ಲ್ಯಕ್ಷ್ಮೀ

ಹುಲಿ-ಸ್ವಾತಿ, ಹುಲಿ

ಮನೆ-ಶಾಂತಿ ನಿವಾಸ ಮರ-ಆಲದಮರ

ಬೆಟ್ಟ-ಸಹ್ಯಾದ್ರಿಬೆಟ್ಟ ಗ್ರಂಥ-ರಾಮಾಯಣ

**ಇ.ಅನ್ವರ್ಥ ನಾಮ:**

**ವ್ಯಕ್ತಿ,ವಸ್ತು,ಪ್ರಾಣಿಗಳ ಗುಣ ಉದ್ಯೋಗ ರೀತಿ ಮೊದಲಾದವುಗಳನ್ನು ಅರ್ಥಕ್ಕನುಸಾರವಾಗಿ ಗುರುತಿಸಲು ಅಥವಾ ಆಯಾ ವ್ಯಕ್ತಿ, ಪ್ರಾಣಿ,ವಸ್ತು, ಮೊದಲಾದವುಗಳಿಗೆ ಅನ್ವಯಿಸುವಂತೆ ಹೆಸರುಗಳು ಅನ್ವರ್ಥಕ ನಾಮ** ಗಳು ಹಾಗಿರುತ್ತದೆ.

ಉದಾ:-1.ತ್ಯಾಗ ಮಾಡುವವನು -**ತ್ಯಾಗಿ**

ಕಣ್ಣು ಕಾಣದೇ ಇದ್ದರೆ-**ಕುರುಡ**

ಕಿವಿ ಕೇಳಿಸದಿದ್ದರೆ-**ಕಿವುಡ**

ವ್ಯಾಪಾರ ಮಾಡುವವನು- **ವ್ಯಾಪಾರಿ**

ಉದಾ:-2. ಕುರುಡ, ಕುಂಟ, ವಿದ್ಯಾರ್ಥಿ, ವಕೀಲ,ವೈದ್ಯ,ವ್ಯಾಪಾರಿ, ಕವಿ, ಕಲಾಕಾರ, ಶಿಲ್ಪಿ, ಹೂಗಾರ,ಗಾಯಕ, ಶಿಕ್ಷಕ, ವಿಜ್ಞಾನಿ, ಇತ್ಯಾದಿ.

## 2.ಗುಣವಾಚಕ ನಾಮ.

**ವಸ್ತು, ವ್ಯಕ್ತಿ, ಪ್ರಾಣಿಗಳಲ್ಲಿರು ಬಣ್ಣ, ಗಾತ್ರ ಸ್ವಭಾವಗಳನ್ನು ತಿಳಿಸುವ ಶಬ್ದಗಳನ್ನು ಗುಣವಾಚಕಗಳು** ಎನ್ನುವರು.ಇವುಗಳನ್ನು ವಿಶೇಷಣಗಳು ಎಂದು ಸಹ ಕೆರೆಯುತ್ತಾರೆ.

ಉದಾ:- ರಮ್ಯಾ ಜಾಣ ಹುಡುಗಿ

ಕಪ್ಪು+ಹುಡುಗಿ=ಕಪ್ಪುಹುಡುಗಿ, ಕೆಂಪು+ಮನೆ=ಕೆಂಪಾದಮನೆ
ದೊಡ್ಡ+ ಊರು=ದೊಡ್ಡೂರು, ಚಿಕ್ಕ+ ಶಾಲೆ=ಚಿಕ್ಕಶಾಲೆ
ಒಳ್ಳೆಯ+ಜನ=ಒಳ್ಳೆಯಜನ, ಶ್ರೇಷ್ಠ+ಗಾಯಕ=ಶ್ರೇಷ್ಠಗಾಯಕ
ಹೊಸ+ಷರ್ಟ್=ಹೊಸಷರ್ಟ್, ಕೆಂಪು+ ಗುಲಾಬಿ=ಕೆಂಪುಗುಲಾಬಿ

## 3.ಸಂಖ್ಯಾವಾಚಕ ನಾಮ.

**ಸಂಖ್ಯೆಗಳನ್ನು ಸೂಚಿಸು ನಾಮಪದಗಳಿಗೆ ಸಂಖ್ಯಾವಾಚಕಗಳು ಎಂದು ಹೆಸರು,**
**ಉದಾ:–ಸಂಖ್ಯೆ+ ವಾಚಕ– ಸಂಖ್ಯಾವಾಚಕ**
ಒಂದು+ ಊರು–**ಒಂದೂರು**
ಅರವತ್ತು+ ರೂಪಾಯಿ– **ಅರವತ್ತುರೂಪಾಯಿಗಳು**
ಲಕ್ಷ+ ದೀಪ– **ಲಕ್ಷದೀಪ**
ನವ+ ಗ್ರಹ– **ನವಗ್ರಹ**
ಹತ್ತು +ಜನ–**ಹತ್ತುಜನ**

## 4.ಪರಿಮಾಣವಾಚಕ.

**ವಸ್ತು, ವ್ಯಕ್ತಿ, ಪ್ರಾಣಿಗಳ ತೂಕ,ಅಳತೆ, ಗಾತ್ರ,ಮ ಪರಿಮಾಣಗಳನ್ನು ವರ್ಣಿಸುವ ಶಬ್ದಗಳು ಪರಿಮಾಣವಾಚಕ** ವಿಶೇಷಣವಾಗಿರುತ್ತದೆ. ಉದಾ:
**ಅಷ್ಟು ಹಣ್ಣುಗಳು ಇಷ್ಟು ರೂಪಾಯಿ** ಅನಿತು ವ್ಯವಸ್ಥೆ
**ಇನಿತು ವಿಸ್ತಾರ ಎನಿತು ಬೋದು ಅಲ್ಪ ಪ್ರಮಾಣ**,ಬಹಳ ಕಠಣ

## 5.ದಿಗ್ವಾಚಕ.

**ದಿಕ್ಕುಗಳನ್ನು ಸೂಚಿಸುವ ಪದಗಳು ದಿಗ್ವಾಚಕಗಳು, ಉದಾ:–**
**ಪೂರ್ವ–ಮೂಡಣ , ಪಶ್ಚಿಮ–ಪಡುವಣ, ಆಚೆ–ಎಡ,**
**ಉತ್ತರ–ಬಡಗಣ, ದಕ್ಷಿಣ–ತೆಂಕಣ, ಈಚೆ–ಬಲ**

## 6.ಪ್ರಕಾರವಾಚಕ.

**ವಸ್ತುಗಳ ಇರುವಿಕೆ ಅಥವಾ ರೀತಿಯನ್ನು ತಿಳಿಸುವ ಶಬ್ದಗಳು ಇವುಗಳಾಗಿರುತ್ತದೆ.**
**ಉದಾ:–ಅಂತಹ–ಅಂತಹವನ್ನು, ಇಂತಹ–ಇಂಥಹವನ್ನು, ಎಂಥಹ–ಎಂಥಹವಳು,**
**ಸೀತೆಯಂತಹವಳು, ರಾಮನಂತಹವನು,ಭೀಮನಂತಹ**

## 7.ಸರ್ವನಾಮ.

**ಒಂದು ವಾಕ್ಯದಲ್ಲಿ ಒಮ್ಮೆ ಒಂದು ನಾಮಪದವನ್ನು ಉ**ಪಯೋಗಿಸಿದ ಬಳಿಕ ಅದೇ ವಾಕ್ಯದಲ್ಲಿ ಮತ್ತೆ ಅದೇ ನಾಮಪದವನ್ನು ಉಪಯೋಗಿಸದೆ ಅದರ ಸ್ಥಳದಲ್ಲಿ **ಅದೇ ಅರ್ಥವನ್ನು ಕೊಡುವ ಬೇರೆ ಶಬ್ದವನ್ನು ಉಪಯೋಗಿಸಿ ಬರೆಯುವುದಕ್ಕೆ** ಅಥವಾ ಹೇಳುವುದಕ್ಕೆ **ಸರ್ವನಾಮ** ಎಂದು ಹೆಸರು. **ಉದಾ:–**

**ತಪ್ಪುಹೇಳಿಕೆ:–** ರಾಜೀವ್ ಗಾಂಧಿಯವರು ಈ ದೇಶದ ಪ್ರಧಾನಿಯಾಗಿದ್ದರು. ರಾಜೀವ್ ಗಾಂಧಿಯವರು ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ಪುತ್ರರು.

**ಸರಿ ಹೇಳಿಕೆ:–** ರಾಜೀವ್ ಗಾಂಧಿಯವರು ಈ ದೇಶ ಪ್ರಧಾನಿಯಾಗಿದ್ದರು.ಇವರು ಮಾಜಿ ಪ್ರಧಾನಿ ಇಂದಿರಗಾಂಧಿಯವರ ಪುತ್ರರು.

(ರಾಜೀವ್ ಗಾಂಧಿ ಬದಲಿಗೆ ಇವರು ಎನ್ನುವ ಸರ್ವನಾಮ ಬಂದಿದೆ).

**ಸರ್ವನಾಮಗಳಲ್ಲಿ ನಾಲ್ಕು ವಿಧ:–**

**ಅ.ಪುರುಷಾರ್ಥಕ ಸರ್ವನಾಮ ಆ. ಆತ್ಮಾರ್ಥಕ ಸರ್ವನಾಮ**

**ಇ.ಪ್ರಶ್ನಾರ್ಥಕ ಸರ್ವನಾಮ ಈ.ದರ್ಶಕ ಸರ್ವನಾಮ**

**ಅ.ಪುರುಷಾರ್ಥಕ ಸುರ್ವನಾಮ:**

ಇದರಲ್ಲಿ ಮೂರು ಪ್ರಕಾರಗಳಿವೆ,

| ಪುರುಷ | ಏಕವಚನ | ಬಹುವಚನ |
|---|---|---|
| ಉತ್ತಮ ಪುರುಷ | ನಾನು | ನಾವು |
| ಮಧ್ಯಮ ಪುರುಷ | ನೀನು | ನೀವು |
| ಪ್ರಥಮ ಪುರುಷ | ಅವನು | ಅವರು |
| | ಅವಳು | ಅವರು |
| | ಇವನು | ಇವರು |
| | ಇವಳು | ಇವರು |
| | ಇದು | ಇವು |
| | ಅದು | ಅವು |

**<u>ಸೂಚನೆ:–</u> ಉತ್ತುಮ ಪುರುಷ ಮತ್ತು ಮಧ್ಯಮ ಪುರುಷ ಸರ್ವನಾಮಗಳಲ್ಲಿ ಲಿಂಗ ಬೇದವು ಇರುವುದಿಲ್ಲ. ಪ್ರಥಮ ಪುರುಷ ಮಾತ್ರ ಲಿಂಗಬೇದವು ಇರುತ್ತದೆ.**

**ಆ.ಆತ್ಮಾರ್ಥಕ ಸರ್ವನಾಮಗಳು:**

**ವಾಕ್ಯದಲ್ಲಿ ಕೆಲವು** ಸಂದರ್ಭಗಳಲ್ಲಿ ಆತ್ಮಾರ್ಥಕವನ್ನು ಬಳಸುವುದುಂಟು ಅಂಥ ಸರ್ವನಾಮಗಳೆಂದರೆ,

- ಏಕವಾಚದಲ್ಲಿ "**ತಾನು**"
- ಬಹುವಾಚದಲ್ಲಿ "**ತಾವು**"ಎಂಬುವವು.

**ಇ.ಪ್ರಶ್ನಾರ್ಥಕ ಸರ್ವನಾಮಗಳು:**

**ಪ್ರಶ್ನೆ ಮಾಡುವಾಗ ಉಪಯೋಗಿಸುವ ಸರ್ವನಾಮಗಳು ಇವುಗಳಾಗಿರುತ್ತವೆ.**

ಉದಾ:–ಯಾವನು? ಯಾವಾಗ?

ಯಾವಳು? ಹೇಗೆ?

ಯಾವುದು? ಏನು?

ಯಾವುವು? ಆರು?

ಯಾರು? ಆವದು?

ಆವುವು? ಏಕೆ? ಇತ್ಯಾದಿ.

**ಈ.ನಿರ್ದೇಶಾತ್ಮಕ ಸರ್ವನಾಮಗಳು:**

**ವ್ಯಕ್ತಿ, ವಸ್ತು ಮೊದಲಾದವುಗಳ ದೂರ ಸಮೀಪವನ್ನು ಹೇಳುವಾಗ ಬಳಸುವ ಪುರುಷಾರ್ಥಕ ಸರ್ವನಾಮಗಳಲ್ಲಿಯ ಪ್ರಥಮ ಪುರುಷ ಸರ್ವನಾಮಗಳು** ಇವುಗಳಾಗಿರುತ್ತದೆ.

**ಸಮೀಕ ದರ್ಶಕ :**ಇವನು, ಇವಳು

ಇವರು, ಇದು

ಇವು, ಈತನು, ಈಕೆ, ಈ, ಇತ್ಯಾದಿ

**ದೂರ ದರ್ಶಕ:** ಅವನು, ಅವಳು, ಆ,

ಅವರು, ಅದು, ಅವು,

ಆತನು, ಆಕೆ, ಇತ್ಯಾದಿ.

## 8.ಭಾವನಾಮ.

**ವ್ಯಕ್ತಿಗಳ,ವಸ್ತುಗಳ, ಪ್ರಾಣಿಗಳ ಗುಣ ಸ್ವಭಾ,ಸ್ಥಿತಿ, ಕ್ರಿಯೆ, ಮೊದಲಾದ ಭಾವ–ವಾವನೆಗಳನ್ನು ಬುದ್ದಿಗೆ ಮನಸ್ಸಿಗೆ ಸೂಚಿಸುವ ಅಥವಾ ತಿಳಿಸುವ ಪದಗಳು** ಇವುಗಳಾಗಿರುತ್ತದೆ.

**ಉದಾ:–**ಶೂರತನ, ದಿಟ್ಟತನ, ಜಾಣತನ

ಧೈರ್ಯ, ಶೌರ್ಯ, ಪಾಂಡಿತ್ಯ

ವಿದ್ವತ್ತು, ಗೌಡಿಕೆ, ಹೇಳಿಕೆ

ಕೇಳಿಕೆ, ನಗು, ಅಳು , ದು:ಖ, ಕಪ್ಪು, ಬಿಳುಪು, ಹಿರಿಮೆ, ಗರಿಮೆ, ಸಿಟ್ಟು, ಇತ್ಯಾದಿ

# *ದಿಕ್ಕುಗಳು




| | | | |
|---|---|---|---|
| **ಉತ್ತರ** | **– North** | **ದಕ್ಷಿಣ** | **– South** |
| **ಪೂರ್ವ** | **– East** | **ಪಶ್ಚಿಮ** | **– West** |
| **ಆಗ್ನೇಯ** | **–South East** | **ನೈರುತ್ಯ** | **–South West** |
| **ವಾಯವ್ಯ** | **– North West** | **ಈಶಾನ್ಯ** | **–North East** |

**<u>ಸೂಚನೆ:–</u>**

ದಿಕ್ಕುಗಳನ್ನು ಗುರುತಿಸುವಾಗ ಈ ಸಾಮಾನ್ಯ ನಿಯಮ ಗಮನಿಸಬಹುದು ಒಬ್ಬ ವ್ಯಕ್ತಿ ಸೂರ್ಯ ಉದಯಿಸುವ ದಿಕ್ಕಿಗೆ ಅಭಿಮುಖವಾಗಿ ನಿಂತು:–

1. ಸೂರ್ಯ ಉದಯಿಸುವ ದಿಕ್ಕು **’ಪೂರ್ವ’** ಎಂಥಲೂ.
2. ಸೂರ್ಯ ಅಸ್ತಮದ ದಿಕ್ಕು **’ಪಶ್ಚಿಮ’** ಎಂಥಲೂ.
3. ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಎಡಭಾಗವನ್ನು **’ಉತ್ತರ’** ಎಂಥಲೂ.

4. ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಬಲಭಾಗವನ್ನು **'ದಕ್ಷಿಣ'** ಎಂಥಲೂ ಗುರುತಿಸಬಹುದು.

ಅಂತೆಯೇ ಪೂರ್ವಕ್ಕೆ ಮುಖ ಮಾಡಿರುವ ವ್ಯಕ್ತಿ

5. ಪೂರ್ವ ಮತ್ತು ದಕ್ಷಿಣ ದಿಕ್ಕುಗಳ ಮಧ್ಯ ಭಾಗವನ್ನು **'ಆಗ್ನೇಯ'**ಎಂಥಲೂ.
6. ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳ ಮಧ್ಯ ಭಾಗವನ್ನು **'ನೈರುತ್ಯ'** ಇಂಥಲೂ.
7. ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ಮಧ್ಯಭಾಗವನ್ನು **'ವಾಯುವ್ಯ'** ಎಂಥಲೂ.
8. ಉತ್ತರ ಮತ್ತು ಪೂರ್ವ ದಿಕ್ಕುಗಳ ಮಧ್ಯ ಭಾಗವನ್ನು **'ಈಶನ್ಯ'** ಎಂಥಲೂ ಗುರುತಿಸಬಹುದು.

**ಸೂಚನೆ:-** ಈ ದಿಕ್ಕುಗಳನ್ನು "**ಆನೈವಾಈ**" (ಆಗ್ನೇಯ-ನೈರುತ್ಯ-ವಾಯುವ್ಯ-ಈಶನ್ಯ) ಅಥವಾ "**ಈ ಆನೆಯು**"**(**ಈಶನ್ಯ-ನೈರುತ್ಯ-ಆಗ್ನೇಯ-ವಾಯುವ್ಯ)
ಎಂಬ ಸೂತ್ರದ ಮೂಲಕ ನೆನಪಿನಲ್ಲಿ ಇಟ್ಟುಕೊಳ್ಳಬಹುದು.

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು
JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ಲಿಂಗಗಳು

ಕನ್ನಡ ವ್ಯಾಕರಣದಲ್ಲಿ ಮುಖ್ಯವಾಗಿ 3 ಲಿಂಗಗಳನ್ನು ಮಾತ್ರ ನಾವು ಕಾಣಬಹುದು

1. **ಪುಲ್ಲಿಂಗ**
2. **ಸ್ತ್ರೀಲಿಂಗ**
3. **ನಪುಂಸಕ ಲಿಂಗ**

## 1.ಪುಲ್ಲಿಂಗ:

ಪುರುಷ ಪ್ರಧಾನ ನಾಮಪದಗಳನ್ನು ಪುಲ್ಲಿಂಗ ಎಂದು ಕರೆಯುತ್ತೇವೆ.

**ಉದಾ**:ಅಣ್ಣ, ತಮ್ಮ
ತಂದೆ, ಹುಡುಗ
ಅಗಸ, ಗಂಡ
ರಾಜ, ಪುರುಷ,ಕವಿ, ಇತ್ಯಾದಿ.

## 2.ಸ್ತ್ರೀಲಿಂಗ:

ಸ್ತ್ರೀ ಪ್ರಧಾನ ನಾಮಪದಗಳನ್ನು ಸ್ತ್ರೀಲಿಂಗ ಎಂದು ಕರೆಯುತ್ತೇವೆ.

**ಉದಾ:**ಅಕ್ಕ, ತಂಗಿ,
ತಾಯಿ, ಹುಡುಗಿ
ಅಗಸಗಿತ್ತಿ,ಹೆಂಡತಿ
ರಾಣಿ, ಅಜ್ಜಿ, ಕವಯಿತ್ರಿ ಇತ್ಯಾದಿ.

**<u>*ಲಿಂಗಬದಲಾವಣೆಯ ವಿಧಾನ:-</u>**

1.ಪುಲ್ಲಿಂಗ ಪದದ ಕೊನೆಯಲ್ಲಿ **'ಗಿತ್ತಿ','ಇತ್ತಿ'** ಸೇರಿಸುವುದರಿಂದ ಸ್ತ್ರೀಲಿಂಗ ಪದವು ರೂಪಗೊಳ್ಳುವುದು.

**ಉದಾ:ಪುಲ್ಲಿಂಗ –ಸ್ತ್ರೀಲಿಂಗ**
ಹಾವಾಡಿಗ–ಹಾವಾಡಿಗಿತ್ತಿ
ಒಕ್ಕಲಿಗ–ಒಕ್ಕಲಗಿತ್ತಿ
ಹೂವಾಡಿಗ–ಹೂವಾಡಗಿತ್ತಿ
ಮಾದಿಗ–ಮಾದಿಗಿತ್ತಿ
ಗಾಣಿಗ–ಗಾಣಿಗಿತ್ತಿ

ಅಗಸ–ಅಗಸಗಿತ್ತಿ
ಅರಸ–ಅರಸಗಿತ್ತಿ
ಗೌಳಿಗ–ಗೌಳಿಗಿತ್ತಿ

**2.**ಪುಲ್ಲಿಂಗ ಪದದ ಕೊನೆಯಲ್ಲಿ **'ಅ'** ಕಾರಂತ ಇರುವಾಗ **'ಇ'** ಕಾರಂತ ಸೇರಿಸುವುದರಿಂದ ಸ್ತ್ರೀಲಿಂಗ ಪದವು ರೂಪಗೊಳ್ಳುವುದು.

**ಉದಾ: ಪುಲ್ಲಿಂಗ– ಸ್ತ್ರೀಲಿಂಗ ಪುಲ್ಲಿಂಗ– ಸ್ತ್ರೀಲಿಂಗ**

ಹುಡುಗ–ಹುಡುಗಿ ಗಾಯಕ–ಗಾಯಕಿ
ನಾಯಕ–ನಾಯಕಿ ಅಧ್ಯಾಪಕ–ಅಧ್ಯಾಪಕಿ
ಲೇಖಕ– ಲೇಖಕಿ ಬಾಲಕ–ಬಾಲಕಿ
ನಟ–ನಟಿ ವಿಮರ್ಶಕ–ವಿಮರ್ಶಿಕಿ
ಸೋದರ–ಸೋದರಿ ಪುತ್ರ–ಪುತ್ರಿ
ಅಜ್ಜ–ಅಜ್ಜಿ ಒಡೆಯ–ಒಡತಿ

**3.**ಕೆಲವು ಸಲ 'ವಿಕಲ್ಪ' ರೂಪದಲ್ಲಿ ಪುಲ್ಲಿಂಗ ಪದಗಳು ಸ್ತ್ರೀಲಿಂಗದ ಪದಗಳಾಗಿ ರೂಪಗೊಳ್ಳುವುದು.

**ಉದಾ:ಪುಲ್ಲಿಂಗ– ಸ್ತ್ರೀಲಿಂಗ ಪುಲ್ಲಿಂಗ–ಸ್ತ್ರೀಲಿಂಗ**

ಮಾವ–ಅತ್ತರ ಗಂಡ–ಹೆಂಡತಿ
ಅಣ್ಣ–ಅಕ್ಕ ತಮ್ಮ–ತಂಗಿ
ಅಳಿಯ–ಸೊಸೆ ಕುಮಾರ– ಕುಮಾರಿ
ಅಜ್ಜ– ಅಜ್ಜಿ ರಾಜ–ರಾಣಿ
ಪುರುಷ–ಮಹಿಳೆ ತಂದೆ–ತಾಯಿ
ಹುಡುಗ–ಹುಡುಗಿ ಮೈದುನ– ನಾದಿನಿ

**4.**ಕೆಲವು ಸಲ **'ಗಂಡು'** ಮತ್ತು **'ಹೆಣ್ಣು'** ಪದಗಳನ್ನು ನಪುಂಸಕ ಲಿಂಗ ಪದಗಳಿಗೆ ಸೇರಿಸುವುದರಿಂದಲೂ ಪುಲ್ಲಿಂಗ ಪದಗಳು ಮತ್ತು ಸ್ತ್ರೀಲಿಂಗ ಪದಗಳು ರೂಪಗೊಳ್ಳುವುದು.

**ಉದಾ:ವಚನ ಪುಲ್ಲಿಂಗ–ಸ್ತ್ರೀಲಿಂಗ**

ನಾಯಿ ಗಂಡು ನಾಯಿ –ಹೆಣ್ಣು ನಾಯಿ
ಹುಲಿ ಗಂಡು ಹುಲಿ–ಹೆಣ್ಣು ಹುಲಿ
ನವಿಲು ಗಂಡು ನವಿಲು–ಹೆಣ್ಣು ನವಿಲು
ಬೆಕ್ಕು ಗಂಡು ಬೆಕ್ಕು–ಹೆಣ್ಣು ಬೆಕ್ಕು
ಕುದುರೆ ಗಂಡು ಕುದುರೆ – ಹೆಣ್ಣು ಕುದುರೆ
ಆನೆ ಗಂಡು ಆನೆ–ಹೆಣ್ಣು ಆನೆ
ಕೋಗಿಲೆ ಗಂಡು ಕೋಗಿಲೆ– ಹೆಣ್ಣು ಕೋಗಿಲೆ

**<u>ಸೂಚನೆ:–</u> ಇಂತಹ ಬದಲಾವಣೆ ಸಾಮಾನ್ಯವಾಗಿ ಪ್ರಾಣಿಗಳಲ್ಲಿ ಕಂಡು ಬರುತ್ತದೆ.**

## 3.ನಪುಂಸಲಿಂಗ:

**ಪುರುಷ ಪ್ರಧಾನ ಮತ್ತು ಸ್ತ್ರೀ ಪ್ರಧಾನವೆಂದು** ಗುರ್ತಿಸಲಾಗದ **ನಿರ್ಜಿವ ವಸ್ತುಗಳನ್ನು** ಮತ್ತು ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ನಾಮಪದಗಳ್ನನು **ನಪುಂಸಕ ಲಿಂಗ** ಎಂದು ಕೆರೆಯುತ್ತೇವೆ.

**ಉದಾ:**

**ನಿರ್ಜೀವ ವಸ್ತುಗಳು:–** ಸೈಕಲ್, ಮೇಜು,ಕಿಟಕಿ, ಮರ, ಗಿಡ
ಬಸ್ಸು,ಮನೆ,ಬಾಗಿಲು, ಕುರ್ಚಿ, ಕಾರು

**ಪ್ರಾಣಿಗಳ ಹೆಸರುಗಳು:–** ನಾಯಿ, ಕೋತಿ, ಮೊಲ, ನವಿಲು,ಹಸು,ಟಗರು
ಆಕಳು,ಕುರಿ,ಎತ್ತು,ಕೋಣ,ಎಮ್ಮೆ,ಹುಲಿ,ಸಿಂಹ,ಹುಂಜ

**<u>ಸಾಮಾನ್ಯಲಿಂಗ:–</u> ಮಗು,ವೈದ್ಯ,ವಿದ್ಯಾರ್ಥಿ,ಮಕ್ಕಳು,ಕರು,ಕೂಸು,ಜನ, ಶಿಶು, ಕರು, ಪ್ರಾಣಿ, ಶಿಕ್ಷಕರು, ಮನುಷ್ಯ, ವಕೀಲರು,ಪೋಷಕರು.**

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ, ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ವಚನಗಳು

**ವಚನ** ಎಂದರೆ **'ಸಂಖ್ಯೆ'** ಎಂದರ್ಥ, ಕನ್ನಡ ವ್ಯಾಕರಣದಲ್ಲಿ ಮುಖ್ಯವಾಗಿ ವಿಧದ ವಚನಗಳನ್ನು ಮಾತ್ರ ನಾವು ಕಾಣಬಹುದು.

**1.ಏಕವಚನ**

**2.ಬಹುವಚನ**

**1.ಏಕವಚನ:**

**ಒಬ್ಬನೆ ವ್ಯಕ್ತಿ,ಒಂದೇ ಸ್ಥಳ** ಅಥವಾ **ಒಂದೇ ವಸ್ತು** ಎಂಬ ಅರ್ಥವನ್ನು ನೀಡುವ ನಾಮಪದಗಳಿಗೆ **ಏಕವಚನ** ಎಂದು ಕರೆತಯುತ್ತೇವೆ.

**ಉದಾ:** ಅಣ್ಣ, ತಮ್ಮ
ಹುಡುಗ, ಪುಸ್ತಕ
ಪೆನ್ನು, ಮರ
ಹುಲಿ, ನವಿಲು
ಹುಡುಗಿ, ಹುಡುಗ

**2. ಬಹುವಚನ**:

**ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಕ್ತಿಗಳು**,ಎರಡು ಅಥವಾ **ಎರಡಕ್ಕಿಂತ ಹೆಚ್ಚು ಸ್ಥಳಗಳು** ಅಥವಾ **ವಸ್ತುಗಳು** ಎಂಬ ಅರ್ಥವನ್ನು ನೀಡುವ ನಾಮಪದಗಳಿಗೆ **ಬಹುವಚನ** ಎಂದು ಕರೆಯುತ್ತೇವೆ.

**ಉದಾ:** ಅಣ್ಣಂದಿರು, ತಮ್ಮಂದಿರು
ಹುಡುಗರು, ಪುಸ್ತಕಗಳು
ಪೆನ್ನುಗಳು, ಮರಗಳು
ಹುಲಿಗಳು, ನವಿಲುಗಳು
ಹುಡುಗಿಯರು, ಮಡದಿಯರು

**<u>*ವಚನ ಬದಲಾವಣೆಯ ವಿಧಾನ:-</u>**

**1.**ಏಕವಚನ ಪದದ ಕೊನೆಯಲ್ಲಿ **'ಅರು'** ಪ್ರತ್ಯಯ ಸೇರಿಸುವುದರಿಂದ ಬಹುವಚನ ಪದವು ರೂಪಗೊಳ್ಳುವುದು. **ಉದಾಹರಣೆಗೆ:**

**ಏಕವಚನ - ಬಹುವಚನ ಏಕವಚನ - ಬಹುವಚನ**
ಹುಡುಗ-ಹುಡುಗರು ಗಾಯಕ-ಗಾಯಕರು
ನಾಯಕ-ನಾಯಕರು ಅಧ್ಯಾಪಕ-ಅಧ್ಯಾಪಕರು

ನಟ–ನಟರು ಪುತ್ರ–ಪುತ್ರರು
ಒಡೆಯ–ಒಡೆಯರು ಮೈದುನ– ಮೈದುನರು
ಹಾವಾಡಿಗ–ಹಾವಾಡಿಗರು ಒಕ್ಕಲಿಗ–ಒಕ್ಕಲಿಗರು
ಹಾಡುಗಾರ–ಹಾಡುಗಾರರು ಮಾಟಗಾರ– ಮಾಟಗಾರರು
ಕೂಲಿಗಾರ–ಕೂಲಿಗಾರರು ಕಥಗಾರ–ಕೆಥೆಗಾರರು

**ಸೂಚನೆ:–** **ಇಂತಹ ಬದಲಾವಣೆ ಸಾಮಾನ್ಯವಾಗಿ 'ಅರು' ಪ್ರತ್ಯಯವು ಪುಲ್ಲಿಂಗ ಪದಗಳಲ್ಲಿ ಕಂಡು ಬರುತ್ತದೆ.**

**2.**ಏಕವಚನ ಪದದ ಕೊನೆಯಲ್ಲಿ **'ಯರು'** ಪ್ರತ್ಯಯ ಸೇರಿಸುವುದರಂದ ಬಹುವಚನ ಪದವು ರೂಪಗೊಳ್ಳುವುದು. **ಉದಾಹರಣೆಗೆ:–**

**ಏಕವಚನ – ಬಹುವಚನ ಏಕವಚನ – ಬಹುವಚನ**
ಹುಡಿಗಿ–ಹುಡುಗಿಯರು ಗಾಯಕಿ–ಗಾಯಕಿಯರು
ನಾಯಕ–ನಾಯಕಿಯರು ಅಧ್ಯಾಪಕಿ– ಅಧ್ಯಾಪಕಿಯರು
ಲೇಖಕಿ–ಲೇಖಕಿಯರು ಬಾಲಕ–ಬಾಲಕಿಯರು
ನಟ–ನಟಿಯರು ಪುತ್ರಿ–ಪುತ್ರಿಯರು
ಅರಸಿ–ಅರಸಿಯರು ಗೌಳಿಗಿ–ಗೌಳಿಗಿಯರು

**ಸೂಚನೆ:–** **ಇಂತಹ ಬದಲಾವಣೆಗೆ ಸಾಮಾನ್ಯವಾಗಿ 'ಯರು' ಪ್ರತ್ಯಯವು ಸ್ತ್ರೀಲಿಂಗ ಪದಗಳಲ್ಲಿ ಕಂಡು ಬರುತ್ತದೆ.**

**3.**ಏಕವಚನ ಪದದ ಕೊನೆಯಲ್ಲಿ **'ಅಂದಿರು'** ಪ್ರತ್ಯಯ ಸೇರಿಸುವುದರಿಂದ ಬಹುವಚನ ಪದವು
ರೂಪಗೊಳ್ಳುವುದು. **ಉದಾಹರಣೆಗೆ:–**

**ಏಕವಚನ – ಬಹುವಚನ ಏಕವಚನ – ಬಹುವಚನ**
ಮಾವ – ಮಾವಂದಿರು ಅತ್ತೆ–ಅತ್ತೆಯಂದಿರು
ಗಂಡ–ಗಂಡಂದಿರು ಹೆಂಡತಿ–ಹೆಂಡತಿಯಂದಿರು
ಅಣ್ಣ–ಅಣ್ಣಂದಿರು ಅಕ್ಕ–ಅಕ್ಕಂದಿರು
ತಮ್ಮ–ತಮ್ಮಂದಿರು ತಂಗಿ–ತಂಗಿಯಂದಿರು
ಅಳಿಯ–ಅಳಿಯಂದಿರು ಸೊಸೆ – ಸೊಸೆಯಂದಿರು
ತಂದೆ–ತಂದೆಂದಿರು ತಾಯಿ–ತಾಯಿಯಂದಿರು

**ಸೂಚನೆ:–** **ಇಂತಹ ಬದಲಾವಣೆ ಸಾಮಾನ್ಯವಾಗಿ ರಕ್ತ ಸಂಬಂಧಿಕರಲ್ಲಿನ ಪದಗಳಲ್ಲಿ ಕಂಡು ಬರುತ್ತದೆ.**

**4.**ಕೆಲವು ಸಲ ಏಕವಚನವಿದ್ದರೂ, ವ್ಯಕ್ತಿ ಒಬ್ಬರೇ ಆಗಿದ್ದರೂ ಗೌರವ ಸೂಚಕವಾಗಿ ಬಹುವಚನದಿಂದ ಸಂಭೋಧಿಸಲಾಗುವುದು.

**ಉದಾಹರಣೆಗೆ:–**

ಗುರುಗಳು, ದೇವರು, ಚಿಕ್ಕಪ್ಪನವರು
ತಾಯಿಯವರು, ಅಕ್ಕನವರು, ದೊಡ್ಡಪ್ಪನವರು
ಅಣ್ಣನವರು, ತಂದೆಯವರು, ಮಾವನವರು.

ಅಕ್ಷರ ಅಕಾಡೆಮಿ

# *ಕೃದಂತ

**ಧಾತುಗಳ ಜೊತೆ ಕೃತ್ ಪ್ರತ್ಯಯಗಳು** ಸೇರಿರುವ ಶಬ್ದಗಳಿಗೆ **ಕೃದಂತಗಳು** ಅಥವಾ **ಕೃನ್ನಾಮಗಳು** ಎಂದು ಕರೆಯುತ್ತೇವೆ. ಕೃದಂತಗಳನ್ನು ಅಂದರೆ ಕೃತ್ ಪ್ರತ್ಯಯಗಳು ಕಡೆಯಲ್ಲಿರುವ ಶಬ್ದಗಳು ಎಂದರ್ಥ, ಕೃದಂತಗಳಲ್ಲಿ **3** ವಿಧ.

**1.ಕೃದಂತನಾಮ**

**2.ಕೃದಂತ ಭಾವನಾಮ**

**3.ಕೃದಂತಾವ್ಯಯ**

## 1.ಕೃದಂತನಾಮ:

**ಧಾತುಗಳಿಗೆ ಕರ್ತೃ** ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ **"ಅ"ಎಂಬ ಕೃತ್ ಪ್ರತ್ಯಯ** ಬರುವುದು,ಆಗ ಧಾತುವಿಗೂ ಕೃತ್ ಪ್ರತ್ಯಯಕ್ಕೂ ನಡುವೆ ವರ್ತಮಾನ **"ವ"** , **ಭವಿಷತ್ ಕಾಲದಲ್ಲಿ "ಉವ"**, ಭೂತಕಾಲದಲ್ಲಿ **"ದ" ಎಂಬ ಕಾಲ ಸೂಚಕ ಪ್ರತ್ಯಯವೂ,** ನಿಷೇದಾರ್ಥದಲ್ಲಿ **"ಅದ" ಎಂಬ ಪ್ರತ್ಯಯವೂ** ಆಗಮವಾಗಿ ಬರುತ್ತದೆ.ಇವುಗಳನ್ನು ಕೃದಂತ ನಾಮು ಎನ್ನುತ್ತಾರೆ.

**ವರ್ತಮಾನ ಕೃದಂತ:–**

ಮಾಡು+ವ+ಅ=**ಮಾಡುವ**

ತಿನ್ನು+ವ+ಅ=**ತಿನ್ನುವ**

ಬರೆ+ವ+ಅ=**ಬರೆವ**

**ಭವಿಷ್ಯತ್ ಕೃದಂತ:–**

ಬರೆ+ಉವ+ಅ=**ಬರೆಯುವ**

ನಡೆ+ಉವ+ಅ=**ನಡೆಯುವ**

**ಭೂತ ಕೃದಂತ:–**

ಮಾಡು+ದ+ಅ=**ಮಾಡಿದ**

ತಿನ್ನು+ದ+ಅ=**ತಿಂದ**

ಹೋಗು+ದ+ಅ=**ಹೋದ**

**ನಿಷೇದ ಕೃದಂತ:–**

ಮಾಡು+ಅದ+ಅ=**ಮಾಡದ**

ತಿನ್ನು+ಅದ+ಅ=**ತಿನ್ನದ**

ಹೋಗು+ಅದ+ಅ=**ಹೋಗದ**

**ಈ ಕೃದಂತ ನಾಮಗಳು ಏಕವಚನ–ಬಹುವಚನವಾಗಬೇಕಾದರೆ:–**

**ಪುಲ್ಲಿಂಗ**ವಾಗಬೇಕಾದರೆ **'ಅವನು–ಅವರು'** ಪ್ರತ್ಯಯವನ್ನು ಹಚ್ಚಬೇಕು.
**ಸ್ತ್ರೀಲಿಂಗ**ವಾಗಬೇಕಾದರೆ **'ಅವಳು–ಅವರು'** ಪ್ರತ್ಯಯವನ್ನು ಹಚ್ಚಬೇಕು.
**ನಪುಂಸಕಲಿಂಗ**ದಲ್ಲಿ **'ಉದು', 'ಉವು'**, ಪ್ರತ್ಯಯವನ್ನು ಹಚ್ಚಬೇಕು.

**ವರ್ತಮಾನ–ಭವಿಷತ್ ಕೃದಂತನಾಮಗಳು:–**

ಓಡಿದವನು–ಓಡಿದವರು, ಓಡಿದವಳು–ಓಡಿದವರು

**ನಿಷೇಧ ಕೃದಂತನಾಮಗಳು:–**

ಓಡದವಳು–ಓಡದವರು, ಓಡದವನು–ಓಡದವರು, ಓಡದದು–ಓಡದವು.

## 2.ಕೃದಂತ ಭಾವನಾಮ:

ದಾತುಗಳ ಮೇಲೆ ಭಾವಾರ್ಥದಲ್ಲಿ ಕೃತ್ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಳು ಹಾಗುತ್ತದೆ.

**ಉದಾ;–** ಇಕೆ, ಇಗೆ, ಗೆ, ತ,ಟ,ವಳಿಕೆ, ವಣಿಗೆ, ಉಕ, ಉದು, ಇಕೆ, ಇತ, ಅವು, ಅಕೆ, ಇತ್ಯಾದಿ.

| **ಭಾವಾರ್ಥದಲ್ಲಿ ಕೃತ್ ಪ್ರತ್ಯಯ ಕೃದಂತ ಭಾವನಾಮ** |
|---|
| **1** ಇಕೆ ನಂಬಿಕೆ, ಎಚ್ಚರಿಕೆ , ನಾಚಿಕೆ |
| **2**ವಳಿಕೆ ತಿಳುವಳಿಕೆ, ನಡವಳಿಕೆ |
| **3** ವಣಿಗೆ ಮೆರವಣಿಗೆ, ಬರವಣಿಗೆ |
| **4** ಅಕೆ ಮೊಳಕೆ, ಬೆರಕೆ, ಬಳಕೆ |
| **5** ಅವು ಒಲವು, ಬರವು, ಮರವು |
| **6** ತ ನೆಗೆತ, ಕುಣಿತ, ತಿಮಿತ |
| **7** ವುದು ನಗುವುದು, ತಿನ್ನುವುದು |
| **8** ಎ ನಗೆ,ಹೊರೆ,ಬರೆ |
| **9** ಟ ಆಟ,ಓಟ,ಊಟ |
| **10** ಪು ಹೊಳಪು, ನೆನಪು |

## 3.ಕೃದಂತಾವ್ಯಯ:

**ಧಾತುಗಳ** ಮೇಲೆ **ಉತ, ಉತ್ತ,ಅದೆ, ದರೆ, ಅಲು,ಅಲಿಕ್ಕೆ,ಅ,ಇ,ದು** ಇತ್ಯಾದಿ ಪ್ರತ್ಯಯ ಸೇರಿ ಕೃದಂತಾವ್ಯಯಗಳು ಎನಿಸುವುವು.

**1.ಏಕಕರ್ತೃಕ:–**

ಕೃದಂತಾವ್ಯಯಗಳಲ್ಲಿ ಒಂದೇ ಅಥವಾ ಒಬ್ಬನೇ ಕರ್ತೃವಿಗೆ ಸಂಬಂಧಿಸಿದ್ದು ಏಕಕರ್ತೃಕ ಎನಿಸುವುದು. **ಉದಾ:–**

- ರಾಮನು ಬಂದು ಹೇಳಿ ಹೋದನು.
- ರಾಮನು ಬಂದು ಹೇಳದೆ ಹೋದನು.

ಇಲ್ಲಿ ಹೇಳಿ, ಹೋಗು ಎಂಬ ಕ್ರಿಯೆಗೆ ರಾಮ ಒಬ್ಬನೇ ಕರ್ತೃವಾಗಿದೆ.

**2.ಭಿನ್ನ ಕರ್ತೃಕ:–**

ಒಂದೇ ಕರ್ತೃವಿಗೆ ಸಂಬಂಧಿಸದ ಬೇರೆ ಬೇರೆ ಕರ್ತೃಗಳಿಗೆ ಸಂಬಂಧಪಡುವುದನ್ನು ಭಿನ್ನ ಕರ್ತೃಗಳು ಎನಿಸುವುವು.**ಉದಾ:–**

- ಉಪಾಧ್ಯಾಯರು ಬೋಧಿಸಲು ವಿದ್ಯಾರ್ಥಿಗಳು ಕಲಿತರು.
- ಪೋಲಿಸರನ್ನು ಕಂಡರೆ ಕಳ್ಳರು ಓಡುತ್ತಾರೆ.

ಇಲ್ಲಿ ಎರಡು ಕರ್ತೃಗಳು ಇದ್ದಾರೆ.

**ಉದಾ:–**

ಅಳು+ ಉತ್ತ=**ಅಳುತ್ತಾ** ನೋಡು+ಅದೆ= **ನೋಡದೆ**

ಹೋಗು+ ದರೆ=**ಹೋದರೆ**ಬರು+ ಅಲು= **ಬರಲು**

ತಿನ್ನು+ ದು= **ತಿಂದು**ನೋಡು +ಇ =**ನೋಡಿ**

ಬರು +ಅ =**ಬರ** ಮಾಡು+ ಉತ =**ಮಾಡುತ**

ತಿನ್ನು +ಅಲಿಕ್ಕೆ =**ತಿನ್ನಲಿಕ್ಕೆ,**ಕುಡಿಯಲು + ಇಕ್ಕೆ= **ಕುಡಿಯಲಿಕ್ಕೆ**

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು
JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ಲೇಖನ ಚಿನ್ಹೆಗಳು

**ಬರವಣಿಗೆಯಲ್ಲಿ ಸರಾಗವಾಗಿ ಓದಿ, ಅರ್ಥಮಾಡಿಕೊಳ್ಳಲು ಬರವಣಿ**ಗೆಯ ಸಾಲುಗಳಲ್ಲಿ ಅಲ್ಲಲ್ಲಿ ಸೂಕ್ತ ಲೇಖನ ಚಿನ್ಹೆಗಳನ್ನು ಬಳಸುತ್ತೇವೆ. ಈ ಚಿನ್ಹೆಗಳನ್ನು ವಿರಾಮ ಚಿನ್ಹೆಗಳು ಅಥವಾ ಲೇಖನ ಚಿನ್ಹೆಗಳು ಎನ್ನುವರು.ಇವು **ಪದ ಪದಕ್ಕೂ, ವಾಕ್ಯದ ಭಾಗಗಳಿಗೂ** ಇರುವ ಸಂಬಂಧವನ್ನು ಸೂಚಿಸುವುದೇ **ಲೇಖನ ಚಿನ್ಹೆಗಳ** ಕೆಲಸ.

| ಕ್ರಸಂ | ಲೇಖನ ಚಿನ್ಹೆ | ಲೇಖನ ಚಿನ್ಹೆಯ ಹೆಸರು |
|---|---|---|
| 1. | (.) | ಪೂರ್ಣವಿರಾಮ |
| 2. | (,) | ಅಲ್ಪವಿರಾಮ |
| 3. | (;) | ಅರ್ಧವಿರಾಮ |
| 4. | (?) | ಪ್ರಶ್ನೆಸೂಚಕ |
| 5. | (!) | ವಿಸ್ಮಯಬೋಧಕ/ಭಾವಸೂಚಕ |
| 6. | ("    ") | ಉದ್ಧರಣ |
| 7. | (‘‘) | ವಿಶೇಷಕ/ಪ್ರತ್ಯಕ್ಷ |
| 8. | ((  )) | ಆವರಣ |
| 9. | (:) | ವಿವರಣಾತ್ಮಕ |
| 10. | (+) | ಅಧಿಕಚಿನ್ಹೆ |
| 11. | (=) | ಸಮಾನಾರ್ಥಕಚಿನ್ಹೆ. |

## 1.ಪೂರ್ಣವಿರಾಮ ಚಿನ್ಹೆ:–(.)

**ವಾಕ್ಯವು ಪೂರ್ಣವಾದಾಗ ಹಾಕುವ** ಚಿನ್ಹೆಯನ್ನು **ಪೂರ್ಣವಿರಾಮ** ಎಂದು ಕರೆಯುತ್ತಾರೆ. **ಉದಾಹರಣೆಗೆ:–**

*ಕರ್ನಾಟಕ ನಮ್ಮ ರಾಜ್ಯ. *ನಮ್ಮ ಭಾಷೆ ಕನ್ನಡ.

## 2.ಅಲ್ಪವಿರಾಮ ಚಿನ್ಹೆ:–(,)

**ಅರ್ಥಕ್ಕೆ ಸರಿಯಾಗಿ ವಾಕ್ಯವನ್ನು ನಿಲ್ಲಿಸಬೇಕಾದಾಗ** ಹಾಕುವ ಚಿನ್ಹೆಯೇ **ಅಲ್ಪವಿರಾಮ** ಚಿನ್ಹೆ. **ಉದಾಹರಣೆಗೆ:–**

*ಸಿಂಹ,ಹುಲಿ,ಚಿರತೆ,ಆನೆ,ಜಿಂಕೆ, ಇವೆಲ್ಲವು ಕಾಡು ಪ್ರಾಣಿಗಳು.

*ಅರ್ಜುನನು ಶೂರನೂ, ಧೈರ್ಯವಂತನೂ, ಚಾಣಕ್ಷನೂ, ಆಗಿದ್ದನು.

(ಕೃರ್ತ,ಕರ್ಮ,ಕ್ರಿಯೆಗಳಿಗೆ ಅನೇಕ ವಿಶೇಷಣಗಳಿದ್ದಾಗ)

## 3.ಅರ್ಧವಿರಾಮ ಚಿನ್ಹೆ:–(;)

**ಕೃರ್ತ ಪದದ ಒಂದು ಕ್ರಿಯೆಯೆ ಮುಗಿದು** ಇನ್ನೊಂದು **ಕ್ರಿಯೆಯನ್ನು ತಿಳಿಸಲು** ಅದೇ ಅಭಿಪ್ರಾಯದಲ್ಲಿ ಮುಂದುವರೆದಾಗ ಹಾಕುವ ಚಿನ್ಹೆಯೇ **ಅರ್ಧವಿರಾಮ**.

**ಉದಾಹರಣೆಗೆ:–**

*ಮಗನಿಗೆ ಅವನ ತಾಯಿಯು ಬುದ್ಧಿ ಹೇಳಿದಳೂ; ಆದರೆ ಏನೂ ಪ್ರಯೋಜನ ಆಗಲಿಲ್ಲ.

*ಅಲ್ಲ ಎಂದಿರಿ;ಹೌದು ಎನ್ನಿರಿ.

## 4.ಪ್ರಶ್ನಾರ್ಥಕ ಚಿನ್ಹೆ:–(?)

**ಪ್ರಶ್ನೆಯನ್ನು ಕೇಳಿದಾಗ** ಹಾಕುವ ಚಿನ್ಹೆಯೇ **ಪ್ರಶ್ನಾರ್ಥಕ** ಚಿನ್ಹೆ

**ಉದಾಹರಣೆಗೆ:–***ಚಿನ್ನವೋ,ಬೆಳ್ಳಿಯೋ ಯಾವುದು ಬೇಕು?

*ನೀನೇನು ಮಾಡಬೇಕು? ಅವರು ಯಾರು?

**<u>ಸೂಚನೆ:–</u> ಇಲ್ಲಿ ಏನು, ಏಕೆ,ಯಾವಾಗ, ಯಾರು, ಎಲ್ಲಿ, ಯಾವುದು,ಹೇಗೆ ಎಷ್ಟು, ಎಂಬ ಪದಗಳನ್ನು ಸಾಮಾನ್ಯವಾಗಿ ಕಾಣಬಹುದು.**

## 5.ವಿಸ್ಮಯಭೋದಕ/ಭಾವಸೂಚಕ ಚಿನ್ಹೆ:–(!)

**ಆಶ್ಚರ್ಯ,ದುಃಖಗಳನ್ನು ಸೂಚಿಸುವಾಗ** ಹಾಕುವ ಚಿನ್ಹೆಯನ್ನು **ವಿಸ್ಮಯ ಭೋದಕ/ಭಾವ ಸೂಚಕ** ಚಿನ್ಹೆ ಎನ್ನುವರು. **ಉದಾಹರಣೆಗೆ:–**

*ಅಬ್ಬಾ! ಅಯ್ಯೋ!

*ಅಹಾ!ತಂಗಾಳಿ ತನು–ಮನಗಳಿಗೆ ಎಷ್ಟೊಂದು ಹಿತವೆನಿಸಿದೆ!

## 6.ಉದ್ಧರಣ/ವಾಕ್ಯವೇಷ್ಟನ ಚಿನ್ಹೆ:–("   ")

ಇನ್ನೊಬ್ಬರ ಮಾತನ್ನು ಯಥಾವತ್ತಾಗಿ ಬರೆಯುವ ಚಿನ್ಹೆಯನ್ನು ಉದ್ಧರಣ/ವಾಕ್ಯವೇಷ್ಟನ ಚಿನ್ಹೆ ಎನ್ನುವರು. **ಉದಾಹರಣೆಗೆ:–**

*"ದೇಶಕ್ಕಾಗಿ ದುಡಿಯಿರಿ" ಎಂದು ಅಬ್ರಹಾಂ ಲಿಂಕನ್ ಅಮೇರಿಕದ ಹೇಳಿದನು.

*"ವಿಧ್ಯಾರ್ಥಿಗಳಿಗೆ ಸನ್ನಡತೆಯಿರಬೇಕು" ಎಂದು ಪ್ರಾಂಶುಪಾಲರು ಭಾಷಣದಲ್ಲಿ ಹೇಳಿದರು.

## 7.ವಿಶೇಷಕ/ಪ್ರತ್ಯಕ್ಷ ಚಿನ್ಹೆ:–(’ ’)

**ಇನ್ನೊಂದು ಮಾತನ್ನು ಹೇಳುವಾಗ** ಹಾಕುವ ಚಿನ್ಹೆಯನ್ನು **ವಿಶೇಷಕ/ಪ್ರತ್ಯಕ್ಷ ಚಿನ್ಹೆ** ಎನ್ನುವರು. **ಉದಾಹರಣೆಗೆ:–**

*’ನಾನು’ ಎಂಬುದನ್ನು ಬಿಡದ ಹೊರತು ಅಹಂಕಾರ ಅಳಿಯದು.

*ಮುಖ್ಯೋಪಾಧ್ಯಾಯರು ಹೇಳಿದ ಮಾತು 'ಶಾಲೆಯನ್ನು ಮರೆಯದಿರಿ'

## 8.ಆವರಣ ಚಿನ್ಹೆ:–(())

**ಒಂದು ವಿಷಯವನ್ನು ವಾಕ್ಯದಲ್ಲಿ ಪ್ರತ್ಯೇಕಿಸಿ** ಹೇಳುವಾಗ ಹಾಕುವ ಚಿನ್ಹೆಯೇ **ಆವರಣ** ಚಿನ್ಹೆ ಎನ್ನುವರು. **ಉದಾಹರಣೆಗೆ:–**

*ಕೊಕ್ಕರೆ (ನೀರುಹಕ್ಕಿ) ಹಾರುತ್ತಿದೆ.

*ಗಜಾನನ(ಗಣೇಶ) ಮೂಷಿಕವಾಹನದ ಮೇಲೆ ಚಲಿಸುವನು.

## 9.ವಿವರಣಾತ್ಮಕ ಚಿನ್ಹೆ:–(:)

**ಒಂದೇ ಮಾತಿನ ಅರ್ಥವನ್ನು ವಿವರಿಸುವಾಗ** ಹಾಕುವ ಚಿನ್ಹೆಯನ್ನು **ವಿವರಣಾತ್ಮಕ ಚಿನ್ಹೆ** ಎನ್ನುವರು. **ಉದಾಹರಣೆಗೆ:–**

*ಕೃಷ್ಣ: 'ಅರ್ಜುನ ಬಾಣದಿಂದ ಹೊಡೆ' ಎಂದು ಹೇಳಿದನು.

## 10. ಸಮಾನಾರ್ಥಕ ಚಿನ್ಹೆ:–(=)

**ಎರಡು ಪದಗಳ ಅರ್ಥವೂ ಸಮಾನ** ಎಂದು ತೋರಿಸಲು ಹಾಕುವ ಚಿನ್ಹೆಯನ್ನು **ಸಮಾನಾರ್ಥಕ** ಚಿನ್ಹೆ ಎನ್ನುವರು. **ಉದಾರಣೆಗೆ:–**

*ಉಡುರಾಜ=ಚಂದ್ರ, ಮಕರ=ಮೊಸಳೆ, ಕರಿ=ಆನೆ.

## 11.ಅಧಿಕ ಚಿನ್ಹೆ:–(+)

ಎರಡು ಪದಗಳನ್ನು ಕೂಡಿಸಿ ಹೇಳಲು ಬಳಸುವ ಚಿನ್ಹೆಯನ್ನು ಅಧಿಕ ಚಿನ್ಹೆ ಎನ್ನುವರು. **ಉದಾಹರಣೆಗೆ:–**

ಮರ+ ಅನ್ನು=ಮರವನ್ನು , ಮನೆ+ಅನ್ನು=ಮನೆಯನ್ನು

## 12.ಹ್ರಸ್ವಸಮತಲರೇಖೆ ಚಿನ್ಹೆ:–(–)

ಸೇರಿದ ಪದಗಳನ್ನು ಬೇರ್ಪಡಿಸಿ ಆ ಪದವು ಮುಂದಿನದಕ್ಕೆ ಸಂಬಂಧಿಸಿದ್ದು ಎಂದು ತೋರುವ ಚಿನ್ಹೆಯೇ ಸಮಾನಾರ್ಥಕ ಚಿನ್ಹೆ.

**ಉದಾರಣೆಗೆ:–** ಪಂಪ–ಗದಾಯುದ್ಧ ಕುವೆಂಪು–ಪಕ್ಷಿಕಾಶಿ

# *ಅವ್ಯಯಗಳು

**ನಾಮಪದ, ಧಾತುಗಳಂತೆ ಲಿಂಗ,ವಚನ,ವಿಭಕ್ತಿಗಳ ವಿಕಾರವಿಲ್ಲದೆ** ಅಥವಾ **ರೂಪ ಭೇದವನ್ನು ಹೊಂದದೇ** ಏಕ ರೂಪವಾಗಿರುವ ಶಬ್ದಗಳನ್ನು **'ಅವ್ಯಯಗಳು'** ಎನ್ನುವರು. ಅವ್ಯಯಪದಗಳು **ನಾಮವಿಭಕ್ತಿ, ಕ್ರಿಯಾವಿಭಕ್ತಿ ಪ್ರತ್ಯಯಗಳನ್ನು ಮತ್ತು ಲಿಂಗ–ವಚನಗಳನ್ನು ಹೊಂದಿರುವುದಿಲ್ಲ.**

**ಅವ್ಯಯ ಪ್ರಕಾರಗಳು:–**

1. ಸಮಾನ್ಯಾವ್ಯಯ
2. ಅನುಕರಣಾವ್ಯಯ
3. ಭಾವಸೂಚಕಾವ್ಯಯ
4. ಕ್ರಿಯಾರ್ಥಕಾವ್ಯಯ
5. ಸಂಬಂಧಸೂಚಕಾವ್ಯಯ
6. ಸಂಬೋಧಕಾವ್ಯಯ
7. ಅವಧಾರಣಾರ್ಥಕಾವ್ಯಯ
8. ಪ್ರಶ್ನಾರ್ಥಕಾವ್ಯಯ
9. ಕೃದಂತಾವ್ಯಯ
10. ತದ್ಧಿತಾಂತವ್ಯಯ

## 1.ಸಮಾನ್ಯಾವ್ಯಯ:

**ಒಂದು ಕ್ರಿಯೆಯು ನಡೆದ ರೀತಿಯನ್ನು** ಹೇಳುವ ಅವ್ಯಯಗಳು ಸಾಮಾನ್ಯಾವ್ಯಯ ಎನಿಸುವುವು. ಇದನ್ನು **ಕ್ರಿಯಾ ವಿಶೇಷಣಾಕಾವ್ಯಯ** ಎಂದು ಕರೆಯಿತ್ತಾರೆ.(ಕ್ರಿಯೆಯಕಾಲ, ಸ್ಥಾನ, ರೀತಿ).

**ಉದಾ:–ಬೇಗನೆ,ಮೆಲ್ಲನೆ,ವೇಗ,ಬಳಿಕ, ತರುವಾಯ,ಬೇಗ, ತಟ್ಟನೆ,ಇತ್ತ,ಕೂಡಲೆ,ಚೆನ್ನಾಗಿ, ಸುಮ್ಮನೆ, ನೆಟ್ಟಗೆ, ಅತ್ತ, ತೆಳ್ಳಗೆ, ನೆನ್ನೆ, ಬೆಳಗ್ಗೆ, ಅಲ್ಲಿ, ಅಂದು, ಹಾಗೆ, ಹೀಗೆ, ಅಂತು,ಇಂತುಮ ಎಂತು,ಒಡನೆ, ಇಲ್ಲಿ,ಇಂದು**

## 2.ಅನುಕರಣಾವ್ಯಯ:–

**ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ಪುನಃ** ಅನುಕರಣೆ ಮಾಡಿ ಹೇಳುವ ಶಬ್ದಗಳು **ಅನುಕರಣಾವ್ಯಗಳು.**

**ಉದಾ:–1**ಮಳೆಯು ಪಟಪಟನೆ ಬಿದ್ದಿತು

ಬೆಂಕಿಯು ಧಗ್ಗನೆ ಹತ್ತಿಕೊಂಡಿತು

ನೀರು ಜುಳುಜುಳನೆ ಶಬ್ದ ಮಾಡುತ್ತಿದೆ.

**ಉದಾ:–2.**ಧಗಧಗ,ಥಣಥಣ,ಚುರುಚುರು
ಸರಸರ,ಸಿಮಿಸಿಮಿ,ಗುಡುಗುಡು
ಜಳಜಳ,ತಟತಟ,ಡಮಡಮ,
ಮಗಮಗ,ದಡದಡ,ಪಳಪಳ
ಬರಬರ,ಕಟಕಟ,ಜುಳುಜುಳು
ದಬದಬ,ಪರಪರ,ಬುಸುಬುಸು
ರೊಯ್ಯನೆ,ಸುಯ್ಯನೆ,ಭಗ್ಗನೆ
ಚೊಯ್ಯಂತ,ಸೂಯ್ಯಂತ,ಭರ್ರೆಂದು
ಭುಗಿಲ್ಲಂತ,ದಿಗ್ಗಂತ,ಕರಕರ

**ಸೂಚನೆ:–** **ಆನೆ,ಅಂತ,ಎಂದು,ಎಂಬ ಕ್ರಿಯಾರ್ಥಕ ಅನುಕೃತಿ ಪದಗಳು ಸೇರಿಕೊಂಡು ಬರುತ್ತವೆ**.

## 3.ಭಾವಸೂಚಕಾವ್ಯಯ:–

ಮನದಲ್ಲಿರುವ ಕೋಪ,ತಾಪ,ಹರ್ಷ,ದುಃಖ, ತಿರಸ್ಕಾರ ಮುಂತಾ**ದ ಮನೋಭಾವನೆಗಳನ್ನು ವ್ಯಕ್ತಪಡಿಸುವ ಅವ್ಯಯಗಳುಭಾವಸೂಚಕಾವ್ಯಯಗಳು.**

**ಉದಾ:–ಅಬ್ಬಾ! ಎಷ್ಟು ಸೋಗಸಾಗಿದೆ.**
**ಎಲೆಲೇ!** ಅಯ್ಯೋ! ಎಲೇ! ಛೇ! ಎಲಾ!
**ಆಹಾ!** ಎಷ್ಟು ಸಿಹಿಯಾಗಿದೆ.
**ಓಹೋ!**ಥೂ! ಎಲ್ಲಾ! ಅರೆ! ಅಹಾ!
**ಅರರೆ!** ಭಲೇ! ಓ! ಎ! ಅಕ್ಕಟಾ!
**ಅಹಹಾ!** ಓಹೋ! ಏ! ಅಕಟಕಟಾ! ಇತ್ಯಾದಿ

## 4.ಕ್ರಿಯಾರ್ಥಕಾವ್ಯಯ:–

**ಕ್ರಿಯಾಪದದ ಸ್ಥಾನದಲ್ಲಿ ನಿಂತು ವಾಕ್ಯದ ಅರ್ಥ** ಪೂರ್ಣಗೊಳಿಸುವ ಅವ್ಯಯಗಳು **ಕ್ರಿಯಾರ್ಥಕಾವ್ಯಯ** ಎನಿಸುವುವು.

**ಉದಾ:–**ಬೇಕು, ಅಲ್ಲ, ಹಾಕು, ಹೌದು, ಸಾಕು, ಇಲ್ಲ, ಅಹುದು
ಬೇಡ, ಉಂಟು,ಎಲ್ಲಿಗೆ, ಇತ್ಯಾದಿ

## 5.ಸಂಬಂಧಸೂಚಕಾವ್ಯಯ:–

**ಎರಡು ಪದಗಳ ಇಲ್ಲವೇ ಎರಡು ವಾಕ್ಯಗಳ ಸಂಬಂಧವನ್ನು** ಸೂಚಿಸುವ ಅವ್ಯಯುಗಳನ್ನು **ಸಂಬಂಧಸೂಚಕಾವ್ಯಯ** ಎಂದು ಕರೆಯುವರು.

**ಆದರೆ, ಆದ್ದರಿಂದ, ಊ, ಅಥವಾ ಇಲ್ಲವೆ, ಹಾಗಾದರೆ, ಬಳಿಕ, ಊಂ, ಇತ್ಯಾದಿ**

**ಉದಾ:–**ರಾಮನೂ, ಕೃಷ್ಣನೂ, ಭೀಮನೂ ಸ್ನೇಹಿತರಲ್ಲ.

ರಾಧ ಬರಲಿಲ್ಲ **ಆದ್ದರಿಂದ** ರಶ್ಮಿಯು ಬರಲಿಲ್ಲ.

## 6.ಸಂಬೋಧಕಾವ್ಯಯ:–

**ಕರೆಯುವಾಗ ಬಳಸುವ ಶಬ್ದಗಳು ಸಂಬೋಧಕಾವ್ಯಯಗಳು.**

**ಉದಾ:–ಎಲೋ, ಓ, ಎಲೇ, ಹೇ ಇತ್ಯಾದಿ.**

## 7.ಅವಧಾರಣಾರ್ಥಕಾವ್ಯಯ:–

ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಿಯಿಸುವುದಕ್ಕೆ "**ಅವದಾರಣೆ**" ಎಂದು ಹೆಸರು, ಇಲ್ಲಿ ಬರುವ ಶಬ್ದಗಳೇ **ಅವಧಾರಣಾರ್ಥಕಾವ್ಯಯುಗಳು.**

**ಉದಾ:–** ನಾನೇ, ಅವಳೇ, ಇವರೇ, ಆ ಮನೆ,

ನೀನೆ, ಅದೇ, ಅವರೇ, ಆ ಕೇರಿ, ಆ ಮನೆಯೇ ಇತ್ಯಾದಿ

## 8.ಪ್ರಶ್ನಾರ್ಥಕಾವ್ಯಯ:–

**ಪ್ರಶ್ನೆ ಕೇಳುವಾಗ ಬಳಸುವ ಅವ್ಯಯ** ಶಬ್ದಗಳು **ಪ್ರಶ್ನಾರ್ಥಕಾವ್ಯಯ** ಎನಿಸುವುವು.

**ಉದಾ:–**ಅವನು ಬಂದನೇ?, ಅದು ಏನು?, ಎಲ್ಲಿ?, ಯಾವುದು?,

ಯಾರು?, ಅವರು ಬಂದರೇ?, ಇದು ಎಷ್ಟು?, ಹೇಗೆ?

## 9.ಕೃದಂತಾವ್ಯಯ:–

**ಧಾತುಗಳ ಮೇಲೆ ಉತ್ತು, ಅದೆ, ಉತ, ದರೆ, ಅಲು ಅಲಿಕ್ಕೆ** ಮೊದಲಾದ ಪ್ರತ್ಯಯುಗಳು ಬಂದರೆ ಅದು **ಕೃದಂತಾವ್ಯಯ** ಎನಿಸುವುದು

**ಉದಾ:–**ಉಣ್ಣು+ ಉತ್ತ=ಉಣ್ಣುತ್ತ , ನೋಡು+ಅದೆ=ನೋಡದೆ.

ನೋಡು+ಉತ್ತ=ನೋಡುತ್ತ ,ಕಾಡು+ಅದೆ=ಕಾಡದೆ.

# *ಸಮಾಸ

**ಸಂಧಿಪದವು ಎರಡು ಅಕ್ಷರಗಳು ಕೂಡಿ ಒಂದು ಪದವಾದರೆ,ಸಮಾಸವು ಎರಡು ಪದಗಳಿಂದ ಕೂಡಿ ಒಂದು ಸಮಾಸ** ಪದವಾಗುತ್ತದೆ.ಸಂದಿಯಲ್ಲಿರುವಂತೆ ಇಲ್ಲಿಯೂ ಪೂರ್ವಪದ ಮತ್ತು ಉತ್ತರಪದಗಳಿರುತ್ತವೆ.

**ಸಮಾಸ:–**

**ಎರಡು ಅಥವಾ ಎರಡಕ್ಕಿತಂಲೂ ಹೆಚ್ಚು ಪದಗಳು** ಅರ್ಥಕ್ಕೆ ಅನುಗುಣವಾಗಿ ಸೇರಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು **ಲೋಪ ಮಾಡಿಕೊಂಡು ಒಂದು ಪದವಾಗುವುದಕ್ಕೆ** ಸಮಾಸ ಎನ್ನುವರು. ಸಮಾಸವನ್ನು ಬಿಡಿಸಿ ಬರೆಯುವುದಕ್ಕೆ **"ವಿಗ್ರಹ ವಾಕ್ಯ"** ಎಂದು ಹೆಸರು.

**ಸೂಚನೆ:–**

ಸಮಾಸದಲ್ಲಿರುವ **ಎರಡು ಕನ್ನಡ ಪದಗಳು** ಅಥವಾ **ಎರಡು ಸಂಸ್ಕೃತ ಪದಗಳು ಇಲ್ಲವೇ ಎರಡು ಪದಗಳು** ತದ್ಭವಗಳಾಗಿದ್ದರೆ ಮಾತ್ರ **ಸಮಾಸ ಮಾಡಲು ಬರುತ್ತದೆ**.ಬದಲಿಗೆ ಒಂದು ಕನ್ನಡ ಪದದ ಇನ್ನೊಂದು ಸಂಸ್ಕೃತ ಅಥವಾ ತದ್ಭವ ಶಬ್ದವನ್ನು ತೆಗೆದುಕೊಂಡು ಸಮಾಸ ಮಾಡಿದರೆ ಅದು **"ಅರಿ" ಸಮಾಸ.** ದೋಷಕ್ಕೆ ಒಳಪಡುತ್ತದೆ. **ಆದರೆ ಕರ್ಮದಾರೆಯ ಸಮಾಸ, ಗಮಕಸಮಾಸ, ಮತ್ತು ಕ್ರಿಯಾ ಸಮಾಸಕ್ಕೆ ಈ ಅರಿಸಮಾಸ ನಿಯಮ ಅನುಯಿಸುವುದಿಲ್ಲ.**

## 1.ತತ್ಪುರುಷ ಸಮಾಸ:

**ಪೂರ್ವ ಪದವು ದ್ವಿತೀಯ, ತೃತೀಯ.ಚತುರ್ಥಿ,ಪಂಚಮಿ,ಷಷ್ಠಿ, ಸಪ್ತಮಿ, ವಿಭಕ್ತಿಗಳಿಂದ ಕೂಡಿದ್ದು, ಉತ್ತರ ಪದದ** ಅರ್ಥವನ್ನು ಪ್ರಧಾನವಾಗಿ ಹೇಳಿದರೆ ಅದು **ಆಯಾ ತತ್ಪುರುಷಸಮಾಸ ಆಗುವುದು.**

**ಉದಾಹರಣೆಗೆ:–**

**ದ್ವಿತೀಯ ತತ್ಪುರುಷ:–**

ಹಾವನ್ನು+ಆಡಿಸುವನು=ಹಾವಾಡಿಸುವನು

ಮೈಯನ್ನು+ ಮರೆ=ಮೈಮರೆ

**ತೃತೀಯ ತತ್ಪುರುಷ:–**

ಕೈಯಿಂದ+ಕಾಣಿಕೆ=ಕೈಕಾಣಿಕೆ

ಕಣ್ಣಿಂದ+ಕುರುಡ=ಕಣ್ಣುಕುರುಡ

ಹುಲಿಯಿಂದ+ಅಂಜಿಕೆ=ಹುಲಿಯಂಜಿಕೆ

ವಯಸ್ಸಿನಿಂದ+ವೃದ್ಧ=ವಯೋವೃದ್ಧ

ಕವಿಗಳಿಂದ+ವಂದಿತ=ಕವಿವಂದಿತ

**ಚತುರ್ಥಿ ತತ್ಪುರುಷ:–**

ಪಿತೃಗಳಿಗೆ+ಪಿಂಡ=ಪಿತೃಪಿಂಡ
ತೇರಿಗೆ+ಮರ=ತೇರುಮರ

**ಪಂಚಮಿ ತತ್ಪುರುಷ:–**

ಚೋರರದೆಸೆಯಿಂದ+ಭಯ=ಚೋರಭಯ

**ಷಷ್ಠಿ ತತ್ಪುರುಷ:–**

ಅರಸನ+ಮನೆ=ಅರಮನೆ
ಕೃಷ್ಣ+ಅರ್ಪಣೆ=ಕೃಷ್ಣಾರ್ಪಣ
ಪುರದ+ಜನ=ಪುರ ಜನ
ಚಳಿಯ+ಕಾಲ=ಚಳಿಗಾಲ
ಕಣ್ಣಿನ+ಪನಿ=ಕಂಬನಿ
ಮಳೆಯ+ಕಾಲ=ಮಳೆಗಾಲ
ಮರದ+ಕಾಲು=ಮರಗಾಲು
ಕಾಲಿನ+ಬಳೆ=ಕಾಲುಬಳೆ
ದೇವರ+ಮಂದಿರ=ದೇವಮಂದಿರ
ಕಲ್ಲಿನ+ಹಾಸಿಗೆ=ಕಲ್ಲುಹಾಸಿಗೆ

**ಸಪ್ತಮಿ ತತ್ಪುರುಷ:–**

ಹಗಲಿನಲ್ಲಿ+ಕನಸು=ಹಗಲುಗನಸು
ರಾತ್ರಿಯಲ್ಲಿ+ಕನಸು=ರಾತ್ರಿಗನಸು
ಬಿಸಿಲಿನಲ್ಲಿ+ಮಳೆ=ಬಿಸಿಲ್ಮಳೆ
ತಲೆಯಲ್ಲಿ+ನೋವು=ತಲೆನೋವು
ಕಣ್ಣಿನಲ್ಲಿ+ಉರಿ=ಕಣ್ಣುರಿ
ಕಾಲಿನಲ್ಲಿ+ಉರಿ=ಕಾಲುರಿ
ರಣದಲ್ಲಿ+ಶೂರ=ರಣಶೂರ

## 2.ಕರ್ಮದಾರೆಯ ಸಮಾಸ:

**ಉತ್ತರ ಪದವು ಪ್ರಧಾನವಾಗಿದ್ದು,ಪೂರ್ವೋತ್ತರ ಪದಗಳು ಲಿಂಗ ವಚನ ವಿಭಕ್ತಿಗಳಿಂದ ಸಮಾಸವಾಗಿದ್ದು,ವಿಶೇಷಣ ವಿಶೇಷ್ಯ ಸಂಬಂಧ**ದಿಂದ ಕೂಡಿ ಆಗುವ ಸಮಾಸಕ್ಕೆ **ಕರ್ಮಧಾರೆಯಸಮಾಸ** ಎನ್ನುವರು.

**ಉದಾಹರಣೆಗೆ:–**

ಹಿರಿದಾದ+ಬಾಗಿಲು=ಹೆಬ್ಬಾಗಿಲು
ಹಳೆಯಾದ+ಕನ್ನಡ=ಹಳೆಗನ್ನಡ

ನಡುವಿನ+ಮನೆ=ನಡುಮನೆ
ಕೆಂಪಾದ+ತುಟಿ=ಕೆಂದುಟಿ
ಸುಖವೇ+ಜೀವನ=ಸುಖಜೀವನ
ಕರಿಯ+ಹಲಗೆ=ಕರಿಹಲಗೆ
ಸ್ತ್ರೀ ಎಂಬ+ ದೇವತೆ= ಸ್ತ್ರೀ ದೇವತೆ
ಕಂಪಾದ+ ಅಕ್ಕಿ=ಕೆಂಪಕ್ಕಿ(ಕೇಸಕ್ಕಿ)
ಮೆಲ್ಲಿತು+ನುಡಿ=ಮೇಲ್ನುಡಿ

## 3.ದ್ವಿಗು ಸಮಾಸ:

**ಉತ್ತರಪದ ಪ್ರಧಾನವಾಗಿದ್ದು, ಪೂರ್ವ ಪದವು ಸಂಖ್ಯಾವಾಚಕವಾಗಿದ್ದು,ಉತ್ತರಪದ ನಾಮಪದ**ಅಥವಾ **ಸಂಖ್ಯಾ** ವಾಚಕವಾಗಿದ್ದು ಅದು **ದ್ವಿಗು ಸಮಾಸ** ಎನಿಸುವುದು.

**ಉದಾಹರಣೆಗೆ:-**

ನಾಲ್ಕು+ಮೊಗ=ನಾಲ್ಮೊಗ
ದಶ+ದಿಕ್ಕು=ದಶದಿಕ್ಕು
ಒಂದು+ಕಣ್ಣು=ಒಕ್ಕಣ್ಣು
ಏಕವಾದ+ಅಗ್ರ=ಏಕಾಗ್ರ
ಎರಡು+ಭಾಗ=ಇಬ್ಭಾಗ
ಸಪ್ತ+ಅಶ್ವಗಳು=ಸಪ್ತಾಶ್ವಗಳು
ಮೂರು+ಮುಡಿ=ಮುಮ್ಮಡಿ
ಪಂಚ+ಇಂದ್ರಿಯಗಳು=ಪಂಚೇಂದ್ರಿಯಗಳು
ಎರಡು+ಮುಡಿ=ಇಮ್ಮಡಿ
ಮೂರು+ಓಟ್ಟೆಗಳು=ಮೂವಟ್ಟೆಗಳು
ನಾಲ್ಕು+ದೆಸೆ=ನಾಲ್ದೆಸೆ
ಮೂರು+ಪಳಳು=ಮುಪ್ಪಳಲು
ಏಕ+ಅಕ್ಷಿ=ಏಕಾಕ್ಷಿ
ಷಷ್ಠಿ+ಕೋನ=ಷಟ್ಕೋನ
ಎರಡು+ಆಳು=ಎರಡಾಳು
ತೃತೀಯ+ಮುಕ=ತ್ರಿಮುಖ
ದ್ವಿತೀಯ+ಮುಖ=ದ್ವಿಮುಖ
ದಶಗಳಾದ+ಮುಖಗಳು=ದಶಮುಖಗಳು

## 4.ಕ್ರಿಯಾ ಸಮಾಸ:

**ಉತ್ತರಪದ ಪ್ರಧಾನವಾಗಿದ್ದು,ಪೂರ್ವಪದ ಒಂದು ಸಾಮಾನ್ಯ ನಾಮವಾಚಕ**ವಾಗಿದ್ದು, **ಉತ್ತರ ಪದದಲ್ಲಿ ಕ್ರಿಯಾಪದ** ಇಲ್ಲವೇ **ಕೃದಂತ ಪದ** ಇದ್ದು ಆಗುವ ಸಮಾಸಕ್ಕೆ **ಕ್ರಿಯಾಸಮಾಸ** ಎನ್ನುವರು.

**ಉದಾಹರಣೆಗೆ:-**

ಕಣ್ಣನ್ನು+ತೆರೆ =ಕಣ್ದೆರೆ
ನೀರನ್ನು+ ಕೊಡು=ನೀರ್ಗೊಡು
ಕೈಯನ್ನು+ಮುಗಿ=ಕೈಮುಗಿ
ಬಿಲ್ಲನ್ನು+ಎತ್ತು=ಬಿಲ್ಲೆತ್ತು
ಕೈಯನ್ನು+ಕೊಟ್ಟನು=ಕೈಕೊಟ್ಟನು
ಮಣಿಯನ್ನು+ಎತ್ತು=ಮಣಿಯುತ್ತು
ಮೈಯನ್ನು+ಮುಚ್ಚಿ=ಮೈಮುಚ್ಚಿ
ಮೈಯನ್ನು+ತಡವಿ=ಮೈದಡವಿ
ಹಾಲಿನಿಂದ+ಕುಡಿ=ಹಾಲ್ಗುಡಿ
ಕಷ್ಟವನ್ನು+ಪಡು=ಕಷ್ಟಪಡು
ಕತ್ತನ್ನು+ಎತ್ತು=ಕತ್ತೆತ್ತು
ಕಾಲನ್ನು+ಎತ್ತು=ಕಾಲೆತ್ತು
ನೀರನ್ನು+ಕುಡಿ=ನೀರ್ಗುಡಿ
ಕಣ್ಣಿಂದ+ಕೆಡು=ಕಂಗೆಡು

## 5.ಅಂಶಿ ಸಮಾಸ:

**ಪೂರ್ವಪದದ ಅರ್ಥಪ್ರಧಾನವಾಗಿದ್ದು,** ಪೂರ್ವಪದವು **"ಅಂಶ"** ವಾಚಕವಾಗಿಯೂ ಉತ್ತರಪದವು **"ಅಂಶಿ"** ವಾಚಕವಾಗಿಯೂ ಆಗುವ ಸಮಾಸ ಅಂಶಿ ಸಮಾಸ ವಾಗಿರುತ್ತದೆ.

**<u>ಸೂಚನೆ:-</u>ಅಂಶ=ಒಂದು ಸಮಗ್ರ ಭಾಗ,**
**ಅಂಶಿ=ಸಮಗ್ರ ಭಾಗದ ಒಂದು ಭಾಗ.**

**ಉದಾಹರಣೆಗೆ:-**

ಕಾಲಿನ+ಮುಂದು=ಮುಂಗಾಲು
ಮನೆಯ+ನಡುವೆ=ನಡುಮನೆ
ತಲೆಯ+ಹಿಂದು=ಹಿಂದಲೆ
ಕಾಲಿನ+ಅಡಿ=ಅಂಗಾಲು
ಮೂಗಿನ+ತುದಿ=ತುದಿಮೂಗು
ರಾತ್ರಿಯ+ನಡುವೆ=ನಡುರಾತ್ರಿ
ಬಾಗಿಲ+ಹೊರಗು=ಹೊರಬಾಗಿಲು

ಹುಬ್ಬಿನ+ಕುಡಿ=ಕುಡಿಹುಬ್ಬು
ಬಾಗಿಲಿನ+ಮುಂದು=ಮುಂಬಾಗಿಲು
ರಾತ್ರಿಯ+ಮದ್ಯೆ+ಮದ್ಯರಾತ್ರಿ
ತುಟಿಯ+ಕೆಳಗೆ=ಕೆಳದುಟಿ

**ಸೂಚನೆ:- ಈ ಸಮಾಸದಲ್ಲಿ ಸಾಮಾನ್ಯವಾಗಿ "ಅವ್ಯಯಗಳು" ಬರುವುದರಿಂದ "ಅವ್ಯಯೀಭಾವ ಸಮಾಸ" ಎಂದೂ ಕರೆಯುವರು.**

## 6.ದ್ವಂದ್ವ ಸಮಾಸ:

**ಎರಡು ಅಥವಾ ಹೆಚ್ಚು ನಾಮಪದಗಳು ಪ್ರಥಮ ವಿಭಕ್ತಿಯ** ಸಹಯೋಗದಿಂದ ಕೂಡಿ ಆಗುವ ಸಮಾಸವನ್ನು **ದ್ವಂದ್ವ ಸಮಾಸ** ಎನ್ನುವರು.

**ಉದಾರಣೆಗೆ:-**

ಗ್ರಹವು+ ನಕ್ಷತ್ರವು=**ಗ್ರಹನಕ್ಷತ್ರಗಳು**
ಸಿಂಹವೂ+ಶಾರ್ದೂಲವೂ**=ಸಿಂಹಶಾರ್ದೂಲಗಳು**
ಹೊಲವೂ+ಗದ್ದೆಯೂ=**ಹೊಲಗದ್ದೆಗಳು**
ರಾಮನೂ+ಲಕ್ಷ್ಮಣನೂ=**ರಾಮಲಕ್ಷ್ಮಣರು**
ಸುಖವೂ+ದುಃಖವೂ**=ಸುಖದುಃಖಗಳು**
ಫವವೂ+ಪುಷ್ಪವೂ**=ಫಲಪುಷ್ಪಗಳು**
ಹಣ್ಣು+ಕಾಯಿಯೂ=**ಹಣ್ಣುಕಾಯಿಗಳು**
ಕೈಯೂ+ಕಾಲೂ=**ಕೈಲುಗಳು**
ದೀನನೂ+ಅನಾಥನೂ**=ದಿನಾನಾಥರು**
ಗಿಡವೂ+ಮರವೂ+ಬಳ್ಳಿಯೂ=**ಗಿಡಮರಬಳ್ಳಿಗಳು**
ಆನೆಯೂ+ಕುದುರೆಯೂ+ಒಂಟೆಯೂ=**ಆನೆಕುದುರೆಒಂಟೆಗಳು**
ಸೂರ್ಯನೂ+ಚಂದ್ರನೂ+ನಕ್ಷತವೂ**=ಸೂರ್ಯಚಂದ್ರನಕ್ಷತ್ರಗಳು**
ರಾಮನೂ+ಕೃಷ್ಣನೂ+ಕೇಶವನೂ=**ರಾಮಕೃಷ್ಣಕೇಶವರು**

## 7.ಬಹುವ್ರೀಹಿ ಸಮಾಸ:

**ನಾಮಪದಗಳು ಸೇರಿ ಸಮಾಸವಾದಾಗ** ಬೇರೊಂದು ಪದದ ಅರ್ಥವನ್ನು ಪ್ರಧಾನವಾಗಿ ಹೇಳಿದರೆ ಅದು ಬಹಿವ್ರೀಹಿ ಸಮಾಸ ಎನ್ನುವರು.**ಇಲ್ಲಿ ಉಳ್ಳದು,ಯಾವುನೋ,ಯಾವನಿಗೋ,ಯಾವಳಿಗೂ,ಯಾವುದೇ ಎಂಬ ಸಹಾಯಕ ಪದಗಳನ್ನು ಬಳಸಿದರೆ** ಅರ್ಥ ಸ್ಪಷ್ಟವಾಗುತ್ತದೆ.

**ಉದಾ:–**

೧. ಮೂರು ಕಣ್ಣುಗಳನ್ನು ಉಳ್ಳವನು ಯಾವನೋ ಅವನು=**ಮುಕ್ಕಣ್ಣ(ಈಶ್ವರ)**
೨. ಆನೆಯಂತೆ ಮುಖವುಳ್ಳವವನು ಯಾರೋ=**ಗಜಾನನ(ಗಣೇಶ)**
೩. ಸಿಂಹವನ್ನು ವಾಹನವಾಗಿ ಉಳ್ಳವಳು ಯಾರೋ ಅವಳು**=ಸಿಂಹವಾಹಿನಿ(ಪಾರ್ವತಿ)**
೪. ಮೂಷಕವನ್ನು ವಾಹನವಾಗಿ ಉಳ್ಳವನು=**ಮೂಷಕವಾಹನ(ಗಣೇಶ)**
೫. ಆರು ಮುಖವುಳ್ಳವಳು ಯಾರೋ ಅವನು=**ಷಣ್ಮುಖ(ಸುಬ್ರಹ್ಮಣ್ಯ)**
೬. ಹಣೆಯಲ್ಲಿ ಕಣ್ಣುಳ್ಳವನು ಯಾರೋ ಅವನು=**ಹಣೆಗಣ್ಣ(ಈಶ್ವರ)**
೭. ಹರಿಣಿಯಂತೆ ಮುಖವುಳ್ಳವಳು ಯಾರೋ ಅವಳು=**ಹರಿಣಮುಖಿ(ಶಕುಂತಲೆ)**
೮. ನೀಲಿ ಬಣ್ಣದ ಕುತ್ತಿಗೆ ಉಳ್ಳವನು**=ಶಿತಿಕಂಠ(ಶಿವ)**
೯. ಉದರದಲ್ಲಿ ಕಮಲ ಉಳ್ಳವನು=**ಅಬ್ಜೋದರ(ವಿಷ್ಣು)**
೧೦. ವಾಯುವಿನ ವರಬಲದಿಂದ ಕುಂತಿಯಲ್ಲಿ ಜನಿಸಿದನು**=ಪವನಂದನ(ಭೀಮಸೇನ)**
೧೧. ಗಾಂಡೀವಿ ಎಂಬ ಬಿಲ್ಲನ್ನು ಹೊಂದಿದವವನು=**ಗಾಂಡೀವಿ(ಅರ್ಜುನ)**
೧೨. ಮುರ ಎಂಬ ರಾಕ್ಷಸನನ್ನು ವಧಿಸಿದವನು=**ಮುರಾರಿ(ಕೃಷ್ಣ)**
೧೩. ಘಟದಲ್ಲಿ (ಕುಂಭ) ಜನಿಸಿದವನು=**ಘಟಸಂಭೂತ(ದ್ರೋಣ)**
೧೪. ನಾಲ್ಕು ಮೊಗ ಉಳ್ಳವನು**=ನಾಲ್ಮೊಗ(ಬ್ರಹ್ಮ)**
೧೫. ಚಕ್ರವು ಪಾಣಿಯಲ್ಲಿ ಉಳ್ಳವನು=**ಚಕ್ರಪಾಣಿ(ವಿಷ್ಣು)**
೧೬. ಫಾಲದಲ್ಲಿ ನೇತ್ರ ಉಳ್ಳವನು**=ಫಾಲನೇತ್ರ(ಶಿವ)**

ದನುಜರಿಪು,ಇನತನೂಜ,ಮೇದಿನಿಪತಿ,ಕೆಂಗಣ್ಣ,ಕೇಶಾಕೇಶಿ,ಜುಟ್ಟಾಜುಟ್ಟಿ,ಕಮಲಾಸನ,ನಾಲ್ಮೊಗ, ನರೇಂದ್ರ.

## 8.ಗಮಕ ಸಮಾಸ:

**ಪೂರ್ವಪದವು ಸರ್ವನಾಮ ಕೃದಂತದ ಸಂಖ್ಯಾವಾಚಕ**ಗಳಲ್ಲಿ ಒಂದಾಗಿದ್ದು,**ಉತ್ತರದಲ್ಲಿರುವ ನಾಮ ಪದದೊಡನೆ ಕೂಡಿ** ಆಗುವ ಸಮಾಸವನ್ನು **ಗಮಕ ಸಮಾಸ** ಎಂದು ಕರೆಯುವರು.

**<u>ಸೂಚನೆ:–</u> ಈ ಸಮಾಸದಲ್ಲಿ ಅರಿ ಸಮಾಸ ದೋಷವನ್ನು ಎಣಿಸಕೊಡದು.**

**ಉದಾ:** ಅವಳು+ಹೆಂಗಸು=ಆ ಹೆಂಗಸು
ಅದು+ಮನೆ=ಆ ಮನೆ
ತುಗುವುದು+ತೊಟ್ಟಿಲು=ತೂಗು ತೊಟ್ಟಿಲು
ಕಡೆಯುವುದು+ಕೋಲು=ಕಡೆಗೋಲು
ಸಪ್ತ+ಸ್ವರ=ಸಪ್ತಸ್ವರ

ಮೂರು+ಕಣ್ಣು=ಮುಕ್ಕಣ್ಣು
ಮಾಡಿದುದು+ಅಡುಗೆ=ಮಾಡಿದಡುಗೆ
ಓದವವನು+ಹುಡುಗ=ಓದುವಹುಡುಗ
ಬಿಸಿಯಾದುದು+ಹಾಲು=ಬಿಸಿಯ ಹಾಲು
ಇದು+ನಾಯಿ= ಈ ನಾಯಿ
ಉಡುವದು+ದಾರ=ಉಡುದಾರ
ಅವನು+ಮಾಲಿಂಗ= ಆ ಮಾಲಿಂಗ
ಹಿರಿಯ+ಮಗ=ಹಿರಿಮಗ
ಹಿರಿಯ+ಮಗಳು=ಹಿರಿಮಗಳು
ಕಿರಿಯ+ಮಗ=ಕಿರಿಮಗ

**<u>ಸೂಚನೆ:–</u> ಇದು ಕರ್ಮದಾರೆಯಸಮಾಸ ಭೇದವಾಗಿದ್ದು, ಆದರೆ ಕರ್ಮದಾರೆಯದಲ್ಲಿ ಪೂರ್ವ ಪದವು ಪ್ರಕೃತಿ ರೂಪದಲ್ಲಿ ಉತ್ತರ ಪದದೊಂದಿಗೆ ಸೇರುತ್ತದೆ.ಗಮಕದಲ್ಲಿ "ಅ" ಪ್ರತ್ಯಯದಿಂದ ಕೂಡಿ ನಿಲ್ಲುತ್ತದೆ.**

## 9.ಅರಿಸಮಾಸ:

**ಕನ್ನಡ ಮತ್ತು ಸಂಸ್ಕೃತ ಪದಗಳು** ಸೇರಿ ಆಗುವ ಸಮಾಸವನ್ನು **ಅರಿಸಮಾಸ** ಎನ್ನುವರು.

**<u>ಸೂಚನೆ:–</u> ಬೇರೆ ಬೇರೆ ಭಾಷೆಯ ಶಬ್ದಗಳನ್ನು ಸೇರಿಸಿ ಸಮಾಸ ಮಾಡಕೂಡದು ಎಂಬ ನಿಯಮ ಇದ್ದರೂ, ಭಾಷೆಯಲ್ಲಿ ಇಂತಹ ಪ್ರಯೋಗಗಳು ಹಲವೆಡೆ ಕಂಡುಬಂದಿದೆ. ಸಾಮಾನ್ಯವಾಗಿ ಇಂತಹ ದೋಷಗಳು ಮೂರು ಸಂದರ್ಭಗಳಲ್ಲಿ ಕಂಡು ಬರುವುವು.**

**ಉದಾ:–1.ಪೂರ್ವ ಕವಿಗಳ ಪ್ರಯೋಗಗಳಲ್ಲಿ**

**ತುರದಗಳ**=ತರಗದ(ಕನ್ನಡ)+ದಳ(ಸಂಸ್ಕೃತ)
**ದಳಪತಿ**=ದಳದ+ಪತಿ
**ಮಂಗಳಾರತಿ**=ಮಂಗಳದ+ ಆರತಿ

**2.ಬಿರುದಾವಳಿಗಳಲ್ಲಿ**=ರಾಯಕೋಲಾಹಲ,ಧಳಮುಖದವಳ, ಅಂಕತ್ರಿಣೇತ್ರ,ದಳಮುಖಾದಿತ್ಯ
**3.ಗಮಕಸಮಾಸ**=ಅಕಾರ್ಯ,ಪೊಡೆಭೇರಿ
**4. ಕ್ರಿಯಾಸಮಾಸ**=ಧೈರ್ಯಹೊಂದು,ಧೈರ್ಯಮಾಡು.

## ಸಮಾಸದ ಪ್ರಕಾರಗಳು

**1.**ಉತ್ತರ ಪದದ ಅರ್ಥಪ್ರಧಾನ ಸಮಾಸ

- **1.**ತತ್ಪುರುಷಸಮಾಸ
- **2.**ಕರ್ಮಧಾರೆಯಸಮಾಸ
- **3.**ಕ್ರಿಯಾಸಮಾಸ
- **4.**ಗಮಕಸಮಾಸ

**2.**ಪೂರ್ವಪದದ ಅರ್ಥಪ್ರಧಾನ ಸಮಾಸ

- **5.**ಅಂಶಿಸಮಾಸ

**3.**ಉಭಯಪದದ ಅರ್ಥ ಪ್ರಧಾನ ಸಮಾಸ

- **6.**ದ್ವಂದ್ವಸಮಾಸ

**4.**ಅನ್ಯಪದದ ಅರ್ಥ ಪ್ರಧಾನ ಸಮಾಸ

- **7.**ಬಹುವ್ರೀಹಿಸಮಾಸ
- **8.**ಗಮಕಸಮಾಸ

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು
JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ವಿಭಕ್ತಿ ಪ್ರತ್ಯಯಗಳು

**ನಾಮ ಪ್ರಕೃತಿಗಳ** ಮೇಲೆ ಬೇರೆ ಬೇರೆ ಅರ್ಥದಲ್ಲಿ ಸೇರಿ **ನಾಮಪದವನ್ನು** ಸಿದ್ದಗೊಳಿಸುವ ಪ್ರತ್ಯಯಗಳನ್ನು **"ವಿಭಕ್ತಿ ಪ್ರತ್ಯಯಗಳು"** ಎಂದು ಕರೆಯುತ್ತಾರೆ. **"ವಿಭಕ್ತಿ" ಎಂದರೆ ಪದದ ಅರ್ಥವನ್ನು ಬಿಡಿಸಿ ಹೇಳುವುದು ಎಂದರ್ಥ,ಇವು ನಾಮ ಪ್ರಕೃತಿಗಳ ಸಂಬಂಧ ಹಾಗೂ ವಾಕ್ಯಾರ್ಥ ಕಾರ್ಯವನ್ನು ಸಹಜವಾಗಿ ನಿರೂಪಿಸುವುವು.**

| **ವಿಭಕ್ತಿ ವಿಚಾರ** | | **ಹಳೆಗನ್ನಡ** | **–** | **ಹೊಸಗನ್ನಡ** |
|---|---|---|---|---|
| **1.ವಿಭಕ್ತಿಗಳ ಸಂಖ್ಯೆ** | = | **7** | -- | **8** |
| **2.ಕಾರಕಗಳ ಸಂಖ್ಯೆ** | = | **6** | -- | **7** |
| **3.ಪ್ರತ್ಯಯಗಳ ಸಂಖ್ಯೆ** | = | **7** | -- | **8** |

**ವಿಭಕ್ತಿಗಳು:–**

**ಪ್ರಥಮ,ದ್ವಿತೀಯ,ತೃತೀಯ,ಚತುರ್ಥಿ,ಪಂಚಮಿ,ಷಷ್ಠೀ, ಸಪ್ತಮಿ, ಸಂಬೋಧನಾ** ಎಂದು ಎಂಟು ವಿಭಕ್ತಿಗಳು ಇರುತ್ತದೆ. ಆದರೆ ಸಂಭೋದನೆಯ ಪ್ರಥಮೆಯಲ್ಲಿ ಸೇರಿರುವುದರಿಂದ ಅದಕ್ಕೆ ಕಾರಣಾರ್ಥವೂ ಇಲ್ಲವಾದುದರಿಂದ **"ಏಳು ವಿಭಕ್ತಿ"**ಗಳೆಂದು ಪರಿಗಣಿಸಲಾಗುತ್ತದೆ.

**ಕಾರಕಗಳು:–**

**ನಾಮವಿಭಕ್ತಿಗಳ ಕ್ರಿಯಾರ್ಥವನ್ನು ಉಂಟು ಮಾಡುವಂಥವುಗಳನ್ನು "ಕಾರಕ"** ಗಳೆನ್ನುವರು. ಮೇಲಿನ ಕ್ರಮದಿಂದ **ಕತೃ, ಕರ್ಮ,ಕರಣ, ಸಂಪ್ರದಾನ,ಅಪಧಾನ,ಸಂಬಂಧ, ಅಧೀಕರಣ ಎಂದು ಏಳು ಇದ್ದರೂ ಷಷ್ಠಿ ವಿಭಕ್ತಿಗೆ** ಕಾರಕನ್ವಯವಿರದ ಕಾರಣ "ಆರು" ಕಾರಕಗಳು ಎಂದು ಪರಿಗಣಿಸುವರು.

**ಕಾರಕಗಳ ಕ್ರಿಯಾ ಸಂಬಂಧಾರ್ಥ:–**

## 1.ಕರ್ತೃಕಾರಕ:–

ಪ್ರಥಮ ವಿಭಕ್ತಿಯ ಕಾರಕವು **'ಉ'** ಪದವು ಕರ್ತೃಥದಲ್ಲಿ ಮಾಡಿಸುವವನು **ಕರ್ತೃ,ಪ್ರಾಣಿ ವಸ್ತುಗಳು ಕರ್ತೃವಾಹಬಹುದು.**

**ಇದರಲ್ಲಿ ಎರಡು ವಿಧಗಳು**

**1)ಸ್ವಯಂ ಪ್ರೇರಣೆ ಕರ್ತೃ ಉದಾಹರಣೆಗೆ:–**

ಅ) ಕೂಸು ಮಲಗಿತು, ಆ)ದನ ಓಡಿತು.

**2)ಪರರ ಪ್ರೇರಣೆ ಕರ್ತೃ ಉದಾಹಣಗೆ:–**

ಅ)ತಾಯಿಯ ಕೂಸನ್ನು ಮಲಗಿಸಿದಳು.

ಆ)ಶಿಕ್ಷಕರು ಮಕ್ಕಳಿಂದ ಹಾಡಿಸಿದರು.

## 2.ಕರ್ಮಕಾರಕ:–

**ದ್ವಿತೀಯ ವಿಭಕ್ತಿಯ** ಕಾರಕವು **"ಅನ್ನು"** ಪ್ರತ್ಯಯ ಹೊಂದಿರುತ್ತದೆ.ಇದು ವಾಕ್ಯದಲ್ಲಿಯ ಕ್ರಿಯೆಗೆ ವಿಷಯವಾಗಿರುತ್ತದೆ.

**ಉದಾ:–**ಹುಡುಗನು ಪುಸ್ತಕವನ್ನು ಓದಿದನು.
ರಾಮನು ತಿಂಡಿಯನ್ನು ತಿಂದನು.

## 3.ಕರಣಕಾರಕ:–

ಇದು **ತೃತೀಯ ವಿಭಕ್ತಿ** ಕಾರಕವು ಈ ಪದವು ಕರಣಾರ್ಥದಲ್ಲಿ **"ಇಂದ"** ಪ್ರತ್ಯಯ ಹೊಂದಿರುತ್ತದೆ.ಇದು ಕ್ರಿಯೆಯನ್ನುಂಟು ಮಾಡುವುದರಲ್ಲಿ ಮುಖ್ಯ ಸಾಧನವಾಗಿರುತ್ತದೆ.ಇಲ್ಲಿ

**1.ಕರಣಾರ್ಥ**

**2.ಕಾರಣಾರ್ಥ**

**3.ಲಕ್ಷಣಾರ್ಥ**

**4.ಪ್ರೇರಣಾರ್ಥಗಳಲ್ಲಿ** ತೃತೀಯ ವಿಭಕ್ತಿಯನ್ನು ಹೊಂದಿರುವುದು

**ಉದಾ:– ಕರಣಾರ್ಥ:–** ಕೊಡಲಿಯಿಂದ ಮರವನ್ನು ಕಡಿದನು
(ಕುಡಿಯುವ ಕ್ರಿಯೆಗೆ ಸಾದನ)
**ಕಾರಣಾರ್ಥ:–** ದುಡಿಮೆಯಿಂದ ಹಣ ದೊರೆಯುವುದು
(ಹಣ ಸಿಗುವ ಕ್ರಿಯೆಗೆ ದುಡಿಮೆ ಸಾದನ)
**ಲಕ್ಷಣಾರ್ಥ:–** ಹೊಗೆಯಿಂದ ಬೆಂಕಿಯನ್ನು ತಿಳಿದನು
(ಬೆಂಕಿ ತಿಳಿಯಲು ಹೊಗೆ ಲಕ್ಷಣ ಸಾದನ)
**ಪ್ರೇರಣಾರ್ಥ:–** ಗುರುಗಳು ಮಕ್ಕಳಿಂದ ಪಾಠ ಓದಿಸಿದರು
(ಓದಿದ ಕ್ರಿಯೆ ಗುರುಗಳ ಪ್ರೇರಣೆ ಸಾದನವಾಗಿದೆ).

## 4.ಸಂಪ್ರದಾನಕಾರಕ:–

ಇದು **ಚತುರ್ಥಿ ವಿಭಕ್ತಿಯ ಕಾರಕವು** ಈ ಪದವು **ಗೆ, ಇಗೆ,ಕ್ಕೆ,ಅಕ್ಕೆ,**ಪ್ರತ್ಯಯಗಳನ್ನು ಹೊಂದಿರುತ್ತದೆ. **"ಸಂಪ್ರದಾನ"** ಅಂದರೆ **ಕೊಡುವ ವಸ್ತುವು ಯಾರನ್ನು ಸೇರಿರುವದೋ ಅದು ಸಂಪ್ರದಾನ.**

**ಉದಾ:–** ಸ್ವಾಮಿಗಳಿಗೆ ಆಕಳನ್ನು ದಾನವಾಗಿ ಕೊಟ್ಟರು.
ವಿದ್ಯಾರ್ಥಿಗಳು ಶಾಲೆಗೆ ಹೋದರು.

## 5.ಅಪದಾನ ಕಾರಕ:–

ಇದು **ಪಂಚಮಿ ವಿಭಕ್ತಿಯ ಕಾರಕವು,** ಈ ಪದವೂ **"ದೆಸೆಯಿಂದ ಪ್ರತ್ಯವನ್ನು"** ಹೊಂದಿರುತ್ತದೆ.**ಅಪಾದಾನ ಎಂದರೆ ಅಗಲುವಿಕೆ ಎಂದರ್ಥ,ಹೊಸಗನ್ನಡದಲ್ಲಿ ದೆಸೆಯಿಂದ ಬದಲಿಗೆ ಇಂದ ಎಂಬ ಪ್ರತ್ಯಯ ಬಳಕೆಯಲ್ಲಿದೆ.**

**ಉದಾ**:–ನಾನು ಮನೆಯಿಂದ ಹೊರಟೆ, ಮರದಿಂದ ಹಣ್ಣು ಬಿತ್ತು.

## 6.ಸಂಬಂಧ:–

ಇದು **ಷಷ್ಠಿ ವಿಭಕ್ತಿ ಕಾರಕವು**. ಈ ಪದವು **"ಅ" ಪ್ರತ್ಯಯ ಹೊಂದಿರುತ್ತದೆ.** ವಾಕ್ಯದಲ್ಲಿ ಸಂಬಂಧಾರ್ಥ ತೋರುವಲ್ಲಿ ಇದು ಷಷ್ಠೀ ವಿಭಕ್ತಿಯ ಕಾಕವಾಗಗುತ್ತದೆ.ಇದನ್ನು ಕಾರಕವೆಂದು ಪ್ರತ್ಯೇಕವಾಗಿ ಪರಿಗಣಿಸುವುದಿಲ್ಲ.

**ಉದಾ:–ದೇವರ** ಗುಡಿ, **ಬಾಳೆಯ** ಗಿಡ,

**ಗಿಳಿಯ** ಹಿಂಡು, **ಸೂರ್ಯನ** ಕಿರಣ.

## 7.ಅಧೀಕರಣ:–

ಇದು **ಸಪ್ತಮಿ ವಿಭಕ್ತಿಕಾರಕವು** ಈ ಪದವು **"ಅಲ್ಲಿ"** ಪ್ರತ್ಯಯ ಹೊಂದಿರುತ್ತದೆ. **"ಅಧಿಕರಣ"** ಎಂದರೆ ಆಧಾರ ಎಂದರ್ಥ, ಅಧಿಕರಣ ಕರ್ತೃ ಇಲ್ಲವೇ ಕರ್ಮಪದಕ್ಕೆ ಆಧಾರವಾಗಿರುವುದು.

**ಉದಾ:–**ಬಲೆಗಾರನು ಹೊಳೆಯಲ್ಲಿ ಮೀನುಗಳನ್ನು ಹಿಡಿದನು.

## 8.ಕರೆಯುವುಕೆ(ಅಭಿಮುಖೀಕರಣ):–

ಇದು **ಸಂಬೋಧನಾ ವಿಭಕ್ತಿಯ ಕಾರಕವು** ಈ ಪದವು "ಆ, ಈ, ಏ, ಇರಾ" ಎಂಬ ಪ್ರತ್ಯಯ ಹೊಂದಿರುತ್ತದೆ. **ದೂರ, ಸಮೀಪ, ಅಥವಾ ಕಾರ್ಯದಲ್ಲಿ ತೊಡಗಿರುವವರನ್ನು ಕರೆಯುವುದು ಅಥವಾ ಮೊರೆಯಿಡುವುದು.**

**ಉದಾ:** ಮಗುವೇ ಇತ್ತ ಬಾ....., ಕಾಪಾಡು....., ಅಕ್ಕಾ ಬೇಗ ಬಾ...,

**ವಿಭಕ್ತಿ ಪ್ರತ್ಯಯಗಳು**

**ಉದಾ:–1**

**ಪ್ರಥಮ**–ಆಣ್ಣಂದಿರು+ಉ=ಅಣ್ಣಂದಿರು

**ದ್ವಿತೀಯ**–ಆಣ್ಣಂದಿರು+ಅನ್ನು=ಅಣ್ಣಂದಿರನ್ನು

**ತೃತೀಯ**–ಆಣ್ಣಂದಿರು+ಇಂದ=ಅಣ್ಣಂದಿರಿಂದ

**ಚತುರ್ಥಿ**–ಆಣ್ಣಂದಿರು+ಗೆ=ಅಣ್ಣಂದಿರಿಗೆ
**ಪಂಚಮಿ**–ಆಣ್ಣಂದಿರು+ದೆಸೆಯಿಂದ=ಅಣ್ಣಂದಿರದೆಸೆಯಿಂದ
**ಷಷ್ಠಿ**–ಆಣ್ಣಂದಿರು+ಅ=ಅಣ್ಣಂದಿರ
**ಸಪ್ತಮಿ**–ಆಣ್ಣಂದಿರು+ಅಲ್ಲಿ=ಅಣ್ಣಂದಿರಲ್ಲಿ
**ಸಂಬೋಧನೆ**–ಆಣ್ಣಂದಿರು+ಏ=ಅಣ್ಣಂದಿರೇ

**ಉದಾ:–2 ಬಹುವಚನದಲ್ಲಿ "ಅಂದಿರು" ಪ್ರತ್ಯಯ ಸೇರುತ್ತದೆ.**

ಅಣ್ಣನು–ಅಣ್ಣಂದಿರು, ಅಕ್ಕನು–ಅಕ್ಕಂದಿರು
ತಮ್ಮನು–ತಮ್ಮಂದಿರು, ಮಾವನು–ಮಾವಂದಿರು
ಅತ್ತೆಯು–ಅತ್ತೆಯಂದಿರು, ಅಮ್ಮನು–ಅಮ್ಮಂದಿರು
ಅಪ್ಪನು–ಅಪ್ಪಂದಿರು

**ಉದಾ:– 3**

| | |
|---|---|
| **ಪ್ರಥಮ** | –ಅರಸ+ಮ್=ಅರಸಂ |
| **ದ್ವಿತೀಯ** | –ಅರಸ+ಅಂ=ಅರಸಂ |
| **ತೃತೀಯ** | –ಅರಸ+ಇಂ=ಅರಸನಿಂ |
| | –ಅರಸ+ಇಂದಂ=ಅರಸನಿಂದಂ |
| | –ಅರಸ+ಇಂದೆ=ಅರಸನಿಂದೆ |
| **ಚತುರ್ಥಿ** | –ಅರಸ+ಗೆ=ಅರಸಂಗೆ |
| | –ಅರಸ+ಅತ್ತಣಿಂ=ಅರಸನತ್ತಣಿಂ |
| | –ಅರಸ+ಅತ್ತಣಿಂದೆ=ಅರಸನತ್ತಣಿಂದೆ |
| | –ಅರಸ+ಅತ್ತಣಿಂದಂ=ಅರಸನತ್ತಣಿಂದಂ |
| **ಷಷ್ಠಿ** | –ಅರಸ+ಅ=ಅರಸನ |
| **ಸಪ್ತಮಿ** | –ಅರಸ+ಒಳ್=ಅರಸನೊಳ್ |

| | | | | | | | |
|---|---|---|---|---|---|---|---|
| **ಪ್ರಥಮ** | ಉ | ರಾಮನು | ಅಣ್ಣನು | ಹುಲಿಯು | ನದಿಯು | ತಾನು | ನೀನು |
| **ದ್ವಿತೀಯ** | ಅನ್ನು | ರಾಮನನ್ನು | ಅಣ್ಣನನ್ನು | ಹುಲಿಯನ್ನು | ನದಿಯನ್ನು | ತನ್ನನ್ನು | ನಿನ್ನನ್ನು |
| **ತೃತೀಯ** | ಇಂದ | ರಾಮನಿಂದ | ಅಣ್ಣನಿಂದ | ಹುಲಿಯಿಂದ | ನದಿಯಿಂದ | ತನ್ನಿಂದ | ನಿನ್ನಿಂದ |
| **ಚತುರ್ಥಿ** | ಗೆ,ಕೆ | ರಾಮನಿಗೆ | ಅಣ್ಣನಿಗೆ | ಹುಲಿಗೆ | ನದಿಗೆ | ತನಗೆ | ನಿನಗೆ |
| **ಪಂಚಮಿ** | ದೆಸೆಯಿಂದ | ರಾಮನ ದೆಸೆಯಿಂದ | ಅಣ್ಣನ ದೆಸೆಯಿಂದ | ಹುಲಿಯ ದೆಸೆಯಿಂದ | ನದಿಯ ದೆಸೆಯಿಂದ | ತನ್ನ ದೆಸೆಯಿಂದ | ನಿನ್ನ ದೆಸೆಯಿಂದ |
| **ಷಷ್ಠಿ** | ಅ | ರಾಮನ | ಅಣ್ಣನ | ಹುಲಿಯ | ನದಿಯ | ತನ್ನ | ನಿನ್ನ |
| **ಸಪ್ತಮಿ** | ಅಲ್ಲಿ | ರಾಮನಲ್ಲಿ | ಅಣ್ಣನಲ್ಲಿ | ಹುಲಿಯಲ್ಲಿ | ನದಿಯಲ್ಲಿ | ತನ್ನಲ್ಲಿ | ನಿನ್ನಲ್ಲಿ |
| **ಸಂಬೋಧನೆ** | ಏ | ರಾಮನೇ | ಅಣ್ಣನೇ | ಹುಲಿಯೇ | ನದಿಯೇ | ತಾನೇ | ನೀನೇ |

| ಕ್ರ.ಸಂ | ವಿಭಕ್ತಿಗಳು | ಅರ್ಥಗಳು (ಕಾರಕಗಳು) | ಪ್ರತ್ಯಯಗಳು | | ನಾಮಪ್ರಕೃತಿ | ವಿಭಕ್ತಿ ಪ್ರತ್ಯಯ ಹೊಂದಿದ ನಾಮಪದ | |
|---|---|---|---|---|---|---|---|
| | | | ಹೊಸಗನ್ನಡ | ಹಳೆಗನ್ನಡ | | **ಹೊಸಗನ್ನಡ** | **ಹಳೆಗನ್ನಡ** |
| 1. | **ಪ್ರಥಮ** | **ಕರ್ತ್ರರ್ಥ** | **ಉ** | **ಮ್** | ರಾಮ | ರಾಮನು | ರಾಮಂ |
| 2. | **ದ್ವಿತೀಯ** | **ಕರ್ಮಾರ್ಥ** | **ಅನ್ನು** | **ಅಂ** | ರಾಮ | ರಾಮನನ್ನು | ರಾಮಂ |
| 3. | **ತೃತೀಯ** | **ಕರಣಾರ್ಥ** | **ಇಂದ** | **ಇಂ,ಇಂದಂ, ಇಂದೆ** | ರಾಮ | ರಾಮನಿಂದ | ರಾಮನಿಂದಂ |
| 4. | **ಚತುರ್ಥಿ** | **ಸಂಪ್ರದಾನ** | **ಗೆ,ಇನೆ,ಕ್ಕೆ,ಅಕ್ಕೆ** | **ಗೆ,ಕೆ,ಕ್ಕೆ,** | ರಾಮ | ರಾಮನಿಗೆ | ರಾಮನಿಗೆ |
| 5. | **ಪಂಚಮಿ** | **ಅಪಾದನ** | **ದಸೆಯಿಂದ** | **ಅತ್ತಣಿಂ, ಅತ್ತಣಿಂದೆ, ಅತ್ತಣಿಂದಂ** | ರಾಮ | ರಾಮನ ದೆಸೆಯಿಂದ | ರಾಮನತ್ತಣಿಂ |
| 6. | **ಷಷ್ಠೀ** | **ಸಂಬಂಧ** | **ಅ** | **ಅ** | ರಾಮ | ರಾಮನ | ರಾಮನ |
| 7. | **ಸಪ್ತಮಿ** | **ಅಧಿಕರಣ** | **ಅಲ್ಲಿ** | **ಒಳ್,ಅಲಿ,ಒಳು** | ರಾಮ | ರಾಮನಲ್ಲಿ | ರಾಮನೊಳ್ |
| 8. | **ಸಂಬೋಧನೆ** | **––––** | **ಏ,ಇರಾ** | **ಅ,ಏ,ಈ** | ರಾಮ | ರಾಮನೇ | ರಾಮನೇ |

# *ಕ್ರಿಯಾಪದಗಳು

**ಕ್ರಿಯೆಯ ಪೂರ್ಣ ಅರ್ಥವನ್ನು ಕೊಡುವ ಪದಕ್ಕೆ ಕ್ರಿಯಾಪದ ಎನ್ನುವರು** ಅಥವಾ **ಧಾತಗಳಿಗೆ ಕಾಲಸೂಚಕ ಪ್ರತ್ಯಯ ಮತ್ತು ಅಖ್ಯಾತ ಪ್ರತ್ಯಯವನ್ನು ಸೇರಿಸಿದಾಗ ಉಂಟಾಗುವ ಪದಕ್ಕೆ ಕ್ರಿಯಾಪದ ಎನ್ನುವರು.**

**ಉದಾ:–** ಮಾಡಿದನು,ಮಾಡುತ್ತಾನೆ,ಮಾಡುವನು
ನೋಡಿದನು,ನೋಡುತ್ತಾನೆ,ನೋಡುವನು

| **ಧಾತು** | **+ಕಾಲಸೂಚಕ ಪ್ರತ್ಯಯ** | **+ಅಖ್ಯಾತ ಪ್ರತ್ಯಯ** | **=ಕ್ರಿಯಾಪದ** |
|---|---|---|---|
| ಮಾಡು | +ದ | +ಅನು | =ಮಾಡಿದನು |
| ಮಾಡು | +ಉತ್ತ | +ಆನೆ | =ಮಾಡುತ್ತಾನೆ |
| ಮಾಡು | +ವ | +ಅನು | =ಮಾಡುವನು |
| ನೋಡು | +ದ | +ಅಳು | =ನೋಡಿದಳು |
| ನೋಡು | +ಉತ್ತ | +ಆಳೆ | =ನೋಡುತ್ತಾಳೆ |
| ನೋಡು | +ವ | +ಅಳು | =ನೋಡುವಳು |

## ಧಾತು

**ಕ್ರಿಯಾಪದದ ಮೂಲರೂಪಕ್ಕೆ "ಧಾತು"** ಎನ್ನುವರು.ಅಥವಾ ಕ್ರಿಯೆಯ ಅರ್ಥವನ್ನು ಕೊಡುವ ಮತ್ತು ಪ್ರತ್ಯಯವನ್ನು ಹೊಂದಿರುವ ಪದಗಳಿಗೆ **"ಧಾತು" ಎನ್ನುವರು**.ಧಾತುವನ್ನು ಕ್ರಿಯಾಪ್ರಕೃತಿ ಎಂದು ಸಹ ಕರೆಯುವರು.

**ಉದಾ:–** ಮಾಡು,ನೋಡು,ಹಾಡು,ಓಡು, ಬರೆ,ಬರು,ಕೇಳು,ನಡೆ

**ಧಾತುಗಳಲ್ಲಿ 2 ವಿಧ:–**

**1.**ಸಕರ್ಮಕ ಧಾತು

**2**ಅಕರ್ಮಕ ಧಾತು

**ಎ) ಸಕರ್ಮಕ ಧಾತು:–**

**ಕ್ರಿಯಾಪದವು ವಾಕ್ಯದಲ್ಲಿ ಕರ್ಮ ಪದದೊಂದಿಗೆ ಬಂದಿದ್ದರೆ** ಅಂತಹ ಕ್ರಿಯಾಪದಗಳಲ್ಲಿನ ಧಾತುಗಳನ್ನು **ಸಕರ್ಮಕ ಧಾತು** ಎನ್ನುವರು.**ಅಂದರೆ ಕರ್ಮಪದವನ್ನು ಬಯಸುವ ಧಾತುಗಳನನು ಸಕರ್ಮಕ ಧಾತುಗಳು ಎನ್ನುವರು.**

**ಉದಾ:–**ಕೊಡು,ಬಿಡು,ಉಣ್ಣು,ಉಜ್ಜು,ತಿದ್ದು,ಮುಚ್ಚು

**ಉದಾ:–**1.ರಾಮ ಗಿಡವನ್ನು ನಟ್ಟನು, 2.ಶಿಲ್ಪಿಗಳು ಗುಡಿಯನ್ನು ಕಟ್ಟಿದರು
3.ವಿಧ್ಯಾರ್ಥಿಗಳು ಪಾಠವನ್ನು ಓದಿದರು.4.ರಾಮನು ರಾವಣನನ್ನು ಕೊಂದನು.

**ಬಿ)ಅಕರ್ಮಕ ಧಾತು:-**

**ಕ್ರಿಯಾಪದವು ವಾಕ್ಯದಲ್ಲಿ ಕರ್ಮ ಪದಗಳನ್ನು** ಹೊಂದಿರದಿದ್ದರೆ ಅಂತಹ ಕಿಯಾಪದಗಳಲ್ಲಿನ ಧಾತುಗಳನ್ನು **ಅಕರ್ಮಕ ಧಾತುಗಳು** ಎನ್ನುವರು.ಅಂದರೆ ಕರ್ಮ ಪದವನ್ನು ಬಯಸದೆ ಇರುವ ಧಾತುಗಳನ್ನು ಅಕರ್ಮಕ ಧಾತುಗಳು ಎನ್ನುವರು.

**ಉದಾ:-** ಮಲಗು,ಓಡು,ಬದುಕು,ಹೋಗು,ನಾಚು

**ಉದಾ:-**1.ಕೂಸು ಮಲಗಿತು, 2.ಅವನು ಬದುಕಿದನು

3.ಆಕಾಶ ಹೊಳೆಯುತ್ತಿದೆ

## ಕ್ರಿಯಾಪದದ ರೂಪಗಳು

**1.ಕಾಲಾರ್ಥ ಕ್ರಿಯಾಪದ**
**2.ವಿಧ್ಯರ್ಥಕ ಕ್ರಿಯಾಪದ**
**3.ನಿಷೇಧಾರ್ಥಕ ಕ್ರಿಯಾಪದ**
**4.ಸಂಭಾವನಾರ್ಥಕ ಕ್ರಿಯಾಪದ**

### 1.ಕಾಲಾರ್ಥ ಕ್ರಿಯಾಪದ:

**ಕ್ರಿಯೆಯು ನಡೆದ ಕಾಲವನ್ನು ಸೂಚಿಸುವ ಕ್ರಿಯಾಪದಗಳಿಗೆ ಕಾಲಾರ್ಥ ಕ್ರಿಯಾಪದಗಳು ಎನ್ನುವರು.**

ಕಾಲಾರ್ಥ ಕ್ರಿಯಾಪದದಲ್ಲಿ 2 ವಿಧಗಳಿವೆ.

**1)ಭೂತಕಾಲ**
**2)ವರ್ತಮಾನ ಕಾಲ**
**3)ಭವಿಷ್ಯತ್ ಕಾಲ**

### 1)ಭೂತಕಾಲ:

**ಕ್ರಿಯೆಯು ಮುಗಿದು ಹೋಗಿರುವ ಕಾಲ**ವನ್ನು ತಿಳಿಸುವ ಕ್ರಿಯಾರೂಪವನ್ನು **ಭೂತಕಾಲ** ಎನ್ನುವರು.

**ಉದಾ:-** ರಮೇಶನು ಶಾಲೆಗೆ **ಹೋದನು**(ಹೋಗು+ದ+ಅನು)
ಸ್ವರೂಪ ಹಾಡನ್ನು **ಹಾಡಿದಳು**(ಹಾಡು+ದ+ಳು)
ಮಕ್ಕಳು ಶಾಲೆಗೆ **ಬಂದರು**(ಬರು+ದ+ಅರು)

(ಇಲ್ಲಿ ಕ್ರಿಯಾಪದಗಳು ಕ್ರಿಯೆಯು ನಡೆದು ಹೋಗಿರುವುದನ್ನು ಸೂಚಿಸಿತ್ತದೆ)

**<u>ಸೂಚನೆ:–</u> ಭೂತಕಾಲ ಕಾಲದ ಕಾಲಸೂಚಕ ಪ್ರತ್ಯಯ 'ದ' ಆಗಿರುವುದು.**

**2)ವರ್ತಮಾನ ಕಾಲ:**

**ಕ್ರಿಯೆಯು ಈಗ ನಡೆಯುತ್ತಿರುವ ಕಾಲ**ವನ್ನು ತಿಳಿಸುವ ಕ್ರಿಯಾರೂಪವನ್ನು **ವರ್ತಮಾನ** ಕಾಲ ಎನ್ನುವರು.

**ಉದಾ:–** ಹರೀಶ ಶಾಲೆಗೆ **ಹೋಗುತ್ತಾನೆ**(ಹೋಗು+ಉತ್ತ+ಅನು)
ಸ್ವರೂಪ ಹಾಡನ್ನು **ಹಾಡುತ್ತಾಳೆ**(ಹಾಡು+ಉತ್ತ+ಳು)
ಮಕ್ಕಳು ಶಾಲೆಗೆ **ಬರುತ್ತಾರೆ**(ಬರು+ಉತ್ತ+ಆರು)

(ಇಲ್ಲಿ ಕ್ರಿಯಾಪದಗಳು ಕ್ರಿಯೆಯು ನಡೆಯುತ್ತಿರುವುದನ್ನು ಸೂಚಿಸುತ್ತದೆ).

**<u>ಸೂಚನೆ:–</u> ವರ್ತಮಾನ ಕಾಲದ ಕಾಲಸೂಚಕ ಪ್ರತ್ಯಯ 'ಉತ್ತ' ಆಗಿರುವುದು.**

**3)ಭವಿಷ್ಯತ್ ಕಾಲ:**

**ಕ್ರಿಯೆಯು ಮುಂದೆ ನಡೆಯುವುದು** ಎಂಬ **ಕಾಲ**ವನ್ನು ತಿಳಿಸುವ ಕ್ರಿಯಾರೂಪವನ್ನು **ಭವಿಷ್ಯತ್** ಕಾಲ ಎನ್ನುವರು.

**ಉದಾ:–** ರಮೇಶನು ಶಾಲೆಗೆ ಹೋಗುವನು(ಹೋಗು+ವ+ಅನು)
ಸ್ವರೂಪ ಹಾಡನ್ನು ಹಾಡುವಳು(ಹಾಡು+ವ+ಳು)
ಮಕ್ಕಳು ಶಾಲೆಗೆ ಬರುವರು(ಬರು+ವ+ಅರು)

**<u>ಸೂಚನೆ:–</u>ಭವಿಷ್ಯತ್ ಕಾಲದ ಕಾಲಸೂಚಕ ಪ್ರತ್ಯಯ 'ವ' ಆಗಿರುವುದು.**

## *ಆಖ್ಯಾತ ಪ್ರತ್ಯಯಗಳು

**ಕ್ರಿಯಾಪದವನ್ನು ರೂಪಿಸುವ ಮೊದಲು ಧಾತುವಿನ ಮುಂದೆ ಸೇರುವ** ಪ್ರತ್ಯಯಗಳನ್ನು **ಆಖ್ಯಾತ ಪ್ರತ್ಯಯಗಳು**ಎಂದು ಕರೆಯುವರು.ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರುವಾಗ ಲಿಂಗ,ವಚನಗಳಲ್ಲಿ ಬದಲಾವಣೆಯನ್ನು ಹೊಂದುವವು.

**ಉದಾ:- ಭೂತಕಾಲದ ಆಖ್ಯಾತ ಪ್ರತ್ಯಯಗಳು**

ಅನು,ಅಲು, ಅರು,ಇತು,ಅವು,ಎ,ರಿ,ಎನು,ಎವು

| **ಪುರುಷ =ಲಿಂಗ** | **ಏಕವಚನ** | **ಬಹುವಚನ** |
|---|---|---|
| **ಪ್ರಥಮ ಪುರುಷ=ಪುಲ್ಲಿಂಗ** | ಅನು | ಅರು |
| **ಸ್ತ್ರೀಲಿಂಗ** | ಅಳು | ಅರು |
| **ನಪುಂಸಕಲಿಂಗ** | ಇತು | ಅವು |
| **ಮಧ್ಯಮಪುರುಷ=ಪು+ಸ್ತ್ರೀ** | ಎ | ಇರಿ |
| **ಉತ್ತಮ ಪುರುಷ=ಪು+ಸ್ತ್ರೀ** | ಎನು | ಎವು |

**ಉದಾ:-**

| **ವಾಕ್ಯಗಳು** | **ಧಾತು** | **+ಕಾ.ಪ್ರತ್ಯಯ** | **+ಅ.ಪ್ರತ್ಯಯ** |
|---|---|---|---|
| ರಮೇಶನು ಶಾಲೆಗೆ ಹೋದನು | (ಹೋಗು | +ದ | +ಅನು) |
| ಸ್ವರೂಪ ಶಾಲೆಗೆ ಹೋದಳು | (ಹೋಗು | +ದ | +ಅಳು) |
| ಮಕ್ಕಳು ಶಾಲೆಗೆ ಹೋದರು | (ಹೋಗು | +ದ | +ಅರು) |
| ನವಿಲು ಕಾಡಿಗೆ ಹೋದಿತು | (ಹೋಗು | +ದ | +ಇತು) |
| ನವಿಲುಗಳು ಹೋದವು | (ಹೋಗು | +ದ | +ಅವು) |
| ನೀನು ಶಾಲೆಗೆ ಹೋದೆ | (ಹೋಗು | +ದ | +ಎ) |
| ನೀವು ಶಾಲೆಗೆ ಹೋದಿರಿ | (ಹೋಗು | +ದ | +ರಿ) |
| ನಾನು ಶಾಲೆಗೆ ಹೋದೆನು | (ಹೋಗು | +ದ | +ಎನು) |
| ನಾನು ಶಾಲೆಗೆ ಹೋದೆವು | (ಹೋಗು | +ದ | +ಎವು) |

**ಉದಾ:–ವರ್ತಮಾನ ಕಾಲದ ಆಖ್ಯಾತ ಪ್ರತ್ಯಯಗಳು**

ಆನೆ,ಆಳೆ,ಆರೆ,ಆದೆ,ಆವೆ,ಈಯೆ,ಈರಿ,ಏನೆ,ಏವೆ

| ಪುರುಷ =ಲಿಂಗ | ಏಕವಚನ | ಬಹುವಚನ |
|---|---|---|
| ಪ್ರಥಮ ಪುರುಷ=ಪುಲ್ಲಿಂಗ | ಆನೆ | ಆರೆ |
| ಸ್ತ್ರೀಲಿಂಗ | ಆಳೆ | ಆರೆ |
| ನಪುಂಸಕಲಿಂಗ | ಅದೆ | ಆವೆ |
| ಮಧ್ಯಮಪುರುಷ=ಪು+ಸ್ತ್ರೀ | ಈಯೆ | ಈರಿ |
| ಉತ್ತಮ ಪುರುಷ=ಪು+ಸ್ತ್ರೀ | ಏನೆ | ಏವೆ |

**ಉದಾ:–**

| **ವಾಕ್ಯಗಳು** | **ಧಾತು** | **+ಕಾ.ಪ್ರತ್ಯಯ** | **+ಅ.ಪ್ರತ್ಯಯ** |
|---|---|---|---|
| ರಮೇಶ ಶಾಲೆಗೆ ಹೋಗುತ್ತಾನೆ | (ಹೋಗು | +ಉತ್ತ | +ಆನೆ) |
| ಸ್ವರೂಪ ಶಾಲೆಗೆ ಹೋಗುತ್ತಾಳೆ | (ಹೋಗು | +ಉತ್ತ | +ಆಳೆ) |
| ಮಕ್ಕಳು ಶಾಲೆಗೆ ಹೋಗುತ್ತಾರೆ | (ಹೋಗು | +ಉತ್ತ | +ಆರೆ) |
| ನವಿಲು ಕಾಡಿಗೆ ಹೋಗುತ್ತಾದೆ | (ಹೋಗು | +ಉತ್ತ | +ಆದೆ) |
| ನವಿಲುಗಳು ಕಾಡಿಗೆ ಹೋಗುತ್ತಾವೆ | (ಹೋಗು | +ಉತ್ತ | +ಆವೆ) |
| ನೀನು ಶಾಲೆಗೆ ಹೋಗುತ್ತೀಯೆ | (ಹೋಗು | +ಉತ್ತ | +ಈಯೆ) |
| ನೀವು ಶಾಲೆಗೆ ಹೋಗುತ್ತೀರಿ | (ಹೋಗು | +ಉತ್ತ | +ಈರಿ) |
| ನಾನು ಶಾಲೆಗೆ ಹೋಗುತ್ತೇನೆ | (ಹೋಗು | +ಉತ್ತ | +ಏನೆ) |
| ನಾವು ಶಾಲೆಗೆ ಹೋಗುತ್ತೇವೆ | (ಹೋಗು | +ಉತ್ತ | +ಏವೆ) |

**ಉದಾ:–ಭೂತಕಾಲ ಆಖ್ಯಾತ ಪ್ರತ್ಯಯಗಳು**

ಅನು,ಅಳು,ಅರು,ಉವು,ಎ,ಈರಿ,ಎನು,ಎವು

| ಪುರುಷ =ಲಿಂಗ | ಏಕವಚನ | ಬಹುವಚನ |
|---|---|---|
| ಪ್ರಥಮ ಪುರುಷ=ಪುಲ್ಲಿಂಗ | ಅನು | ಅರು |
| ಸ್ತ್ರೀಲಿಂಗ | ಅಳು | ಅರು |
| ನಪುಂಸಕಲಿಂಗ | ಉದು | ಉವು |
| ಮಧ್ಯಮಪುರುಷ=ಪು+ಸ್ತ್ರೀ | ಎ | ಈರಿ |
| ಉತ್ತಮ ಪುರುಷ=ಪು+ಸ್ತ್ರೀ | ಎನು | ಎವು |

**ಉದಾ:–**

| **ವಾಕ್ಯಗಳು** | **ಧಾತು** | **+ಕಾ.ಪ್ರತ್ಯಯ** | **+ಆ.ಪ್ರತ್ಯಯ** |
|---|---|---|---|
| ರಮೇಶ ಶಾಲೆಗೆ ಹೋಗುವವನು | (ಹೋಗು | +ವ | +ಅನು) |
| ಸ್ವರೂಪ ಶಾಲೆಗೆ ಹೋಗುವವಳು | (ಹೋಗು | +ವ | +ಅಳು) |
| ಮಕ್ಕಳು ಶಾಲೆಗೆ ಹೋಗುವವರು | (ಹೋಗು | +ವ | +ಅರು) |
| ನವಿಲು ಕಾಡಿಗೆ ಹೋಗುವುದು | (ಹೋಗು | +ವ | +ಉದು) |
| ನವಿಲುಗಳು ಕಾಡಿಗೆ ಹೋಗುವುವು | (ಹೋಗು | +ವ | +ಉವು) |
| ನೀನು ಶಾಲೆಗೆ ಹೋಗುವೆ | (ಹೋಗು | +ವ | +ಎ) |
| ನೀವು ಶಾಲೆಗೆ ಹೋಗುವಿರಿ | (ಹೋಗು | +ವ | +ಇರಿ) |
| ನಾನು ಶಾಲೆಗೆ ಹೋಗುವೆನು | (ಹೋಗು | +ವ | +ಎನು) |
| ನಾವು ಶಾಲೆಗೆ ಹೋಗುವೆವು | (ಹೋಗು | +ವ | +ಎವು) |

## 2.ವಿಧ್ಯರ್ಥಕ ಕ್ರಿಯಾಪದ:

**ಅಜ್ಞೆ, ಅಪ್ಪಣೆ,ಶುಭಹಾರೈಕೆ,** ಮುಂತಾದ **ಅರ್ಥವನ್ನು ಸೂಚಿಸುವ ಪದಗಳಿಗೆ** ಆಖ್ಯಾತ ಪ್ರತ್ಯಯಗಳು ಸೇರಿಸಿದಾಗ ಉಂಟಾಗುವ ಕ್ರಿಯಾಪದಗಳಿಗೆ **ವಿಧ್ಯರ್ಥಕ ಕ್ರಿಯಾಪದ**ಗಳು ಎನ್ನುವರು.**ವಿಧ್ಯರ್ಥಕ ಪ್ರತ್ಯಯಗಳು–**

| **ಪುರುಷ =ಲಿಂಗ** | **ಏಕವಚನ** | **ಬಹುವಚನ** |
|---|---|---|
| **ಪ್ರಥಮ ಪುರುಷ=ಪುಲ್ಲಿಂಗ**<br>**ಸ್ತ್ರೀಲಿಂಗ**<br>**ನಪುಂಸಕಲಿಂಗ** | ಅಲಿ<br>ಅಲಿ<br>ಅಲಿ | ಅಲಿ<br>ಅಲಿ<br>ಅಲಿ |
| **ಮಧ್ಯಮಪುರುಷ=ಪು+ಸ್ತ್ರೀ** | ಉದು | ಇರಿ |
| **ಉತ್ತಮ ಪುರುಷ=ಪು+ಸ್ತ್ರೀ** | ವೆ | ಓಣ |

**ಉದಾ:–**

ರಮೇಶ ಕೆಲಸವನ್ನು **ಮಾಡಲಿ**
ಮಕ್ಕಳು ಕೆಲಸವನ್ನು **ಮಾಡಲಿ**
ಸೀತಾ ಕೆಲಸವನ್ನು **ಮಾಡಲಿ**
ನವಿಲು ನಾಟ್ಯವನ್ನು **ಮಾಡಲಿ**
ನವಿಲುಗಳು ನಾಟ್ಯವನ್ನು **ಮಾಡಲಿ**
ನೀನು ಕೆಲಸವನ್ನು **ಮಾಡುವುದು**
ನೀವು ಕೆಲಸವನ್ನು **ಮಾಡಿರಿ**

ನಾನು ಕೆಲಸವನ್ನು **ಮಾಡುವೆ**

ನಾವು ಕೆಲಸವನ್ನು **ಮಾಡೋಣ**

**ಉದಾ:-** **ಏಕವಚನ=**ಮಾಡಲಿ, ಆಡಲಿ, ಕೇಳಲಿ, ಹೋಗಲಿ,ಬರಲಿ.

**ಬಹುವಚನ=**ನೋಡಿರಿ,ಮಾಡಿರಿ,ಮಾಡೋಣ,ನೋಡೋಣ.

## 3.ನಿಷೇಧಾರ್ಥಕ ಕ್ರಿಯಾಪದ:

**ಕ್ರಿಯೆಯು ನಡೆಯಲಿಲ್ಲ ಎಂಬುವ ಅರ್ಥಗಳನ್ನು** ಸೂಚಿಸುವ ಪದಗಳಿಗೆ **ಆಖ್ಯಾತ ಪ್ರತ್ಯಗಳು ಸೇರಿಸಿದಾಗ** ಉಂಟಾಗುವ ಕ್ರಿಯಾಪದಗಳಿಗೆ **ನಿಷೇಧಾರ್ಥಕ ಕ್ರಿಯಾಪದ** ಎನ್ನುವರು.

**ನಿಷೇದಾರ್ಥಕ ಪ್ರತ್ಯಯಗಳು-**

| **ಪುರುಷ =ಲಿಂಗ** | **ಏಕವಚನ** | **ಬಹುವಚನ** |
|---|---|---|
| **ಪ್ರಥಮ ಪುರುಷ=ಪುಲ್ಲಿಂಗ**<br>**ಸ್ತ್ರೀಲಿಂಗ**<br>**ನಪುಂಸಕಲಿಂಗ** | ಅನು<br>ಅಳಿ<br>ಅದು | ಅರು<br>ಅರು<br>ಅವು |
| **ಮಧ್ಯಮಪುರುಷ=ಪು+ಸ್ತ್ರೀ** | ಎ | ಅರಿ |
| **ಉತ್ತಮ ಪುರುಷ=ಪು+ಸ್ತ್ರೀ** | ಏನು | ಏವು |

**ಉದಾ:-**

ರಮೇಶ ಕೆಲಸವನ್ನು **ಮಾಡನು**

ಮಕ್ಕಳು ಕೆಲಸವನ್ನು **ಮಾಡರು**

ಸೀತಾ ಕೆಲಸವನ್ನು **ಮಾಡಳು**

ನವಿಲು ನಾಟ್ಯವನ್ನು **ಮಾಡದು**

ನವಿಲುಗಳು ನಾಟ್ಯವನ್ನು **ಮಾಡವು**

ನೀನು ಕೆಲಸವನ್ನು **ಮಾಡೆ**

ನೀವು ಕೆಲಸವನ್ನು **ಮಾಡರಿ**

ನಾನು ಕೆಲಸವನ್ನು **ಮಾಡುನು**

ನಾವು ಕೆಲಸವನ್ನು **ಮಾಡೆವು**

**ಉದಾ:-** **ಏಕವಚನ=**ಮಾಡನು, ನೋಡನು, ಕೇಳನು, ಕೇಳಳು, ಮಾಡಳು,

**ಬಹುವಚನ=**ಮಾಡರು, ನೋಡರು,ಕೇಳರು,ಹಾಡರು,ಹೋಗರು

## 4.ಸಂಭಾವನಾರ್ಥಕ ಕ್ರಿಯಾಪದ:

**ಕ್ರಿಯೆಯ ಕಾರ್ಯದಲ್ಲಿ ಸಂಶಯಾರ್ಥ** ಅರ್ಥಗಳ್ನನು ಸೂಚಿಸುವ ಪದಗಳಿಗೆ **ಆಖ್ಯಾತ ಪ್ರತ್ಯಯಗಳು ಸೇರಿಸಿದಾಗ** ಉಂಟಾಗುವ ಕ್ರಿಯಾಪದಗಳಿಗೆ **ಸಂಭಾವನಾರ್ಥಕ ಕ್ರಿಯಾಪದ** ಎನ್ನುವರು.

**ಸಂಭವನಾರ್ಥಕ ಪ್ರತ್ಯಯಗಳು–**

| **ಪುರುಷ =ಲಿಂಗ** | **ಏಕವಚನ** | **ಬಹುವಚನ** |
|---|---|---|
| **ಪ್ರಥಮ ಪುರುಷ=ಪುಲ್ಲಿಂಗ**<br>**ಸ್ತ್ರೀಲಿಂಗ**<br>**ನಪುಂಸಕಲಿಂಗ** | ಅನು<br>ಅಳು<br>ಈತು | ಅರು<br>ಅರು<br>ಅವು |
| **ಮಧ್ಯಮಪುರುಷ=ಪು+ಸ್ತ್ರೀ** | ಈಯೆ | ಈರಿ |
| **ಉತ್ತಮ ಪುರುಷ=ಪು+ಸ್ತ್ರೀ** | ಏನು | ಏವು |

**ಉದಾ:–**

ರಮೇಶ ಊರಿಗೆ **ನಡೆದಾನು**

ಸೀತಾ ಊರಿಗೆ **ನಡೆದಾಳು**

ಮಕ್ಕಳು ಊರಿಗೆ **ನಡೆದಾರು.**

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ, ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ದ್ವಿರುಕ್ತಿಗಳು/ದ್ವಿತ್ವ/ಪುನರಕ್ತಿ

**ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ** ಒಂದು ಪದವನ್ನು,ಒಂದು ವಾಕ್ಯವನ್ನು ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ "**ದ್ವಿರುಕ್ತಿ**" ಎನ್ನುವರು.

**ಉದಾಹರಣೆಗೆ:–**

| | |
|---|---|
| **ಉತ್ಸಾಹ** | –ಹೌದುಹೌದು,ನಿಲ್ಲುನಿಲ್ಲು |
| **ಹೆಚ್ಚು ಎಂಬರ್ಥ** | –ದೊಡ್ಡದೊಡ್ಡ,ಹೆಚ್ಚುಹೆಚ್ಚು |
| **ಪ್ರತಿಯೊಂದು ಎಂಬರ್ಥ** | –ಮನೆಮನೆ,ಕೇರಿಕೇರಿ<br>ಊರುಊರು,ಬೀದಿಬೀದಿ |
| **ಕೋಪ** | –ನಿಲ್ಲುನಿಲ್ಲು,ಎಲೆಲೇ,<br>ಹೇಳಿಹೇಳಿ,ಬಿಕ್ಕಿಬಿಕ್ಕಿ |
| **ಸಂಭ್ರಮ** | –ಆಗೋ ಆಗೋ, ಬನ್ನಿಬನ್ನಿ,<br>ನಕ್ಕು,ನಕ್ಕು, ಹೊಗಳಿ ಹೊಗಳಿ |
| **ಆಕೇಪಾರ್ಥ** | –ಬೇಡಬೇಡ,ನಡೆನಡೆ<br>ಬಿಡುಬಿಡು,ಹೇಳುಹೇಳು |
| **ಆಶ್ಚರ್ಯ** | –ಅಬ್ಬಬ್ಬಾ!(ಅಬ್ಬಾ+ಅಬ್ಬಾ) |
| **ಅವಸರ** | –ಓಡುಓಡು,ಬೇಗಬೇಗ,ಓಡಿಓಡಿ. |

**ದ್ವಿರುಕ್ತಿಯಲ್ಲಿ ಬರುವ ವಿಶೇಷ ರೂಪಗಳು:–**

| | | | |
|---|---|---|---|
| ಮೊದಲು | + | ಮೊದಲು | =ಮೊಟ್ಟಮೊದಲು |
| ಮೆಲ್ಲ | + | ಮೆಲ್ಲಗೆ | =ಮೆಲ್ಲಮೆಲ್ಲಗೆ |
| ತುದಿ | + | ತುದಿ | =ತುತ್ತತುದಿ |
| ಕಡೆ | + | ಕಡೆ | =ಕಟ್ಟಕಡೆ |
| ನಡುವೆ | + | ನಡುವೆ | =ನಟ್ಟನಡುವೆ |
| ಬಯಲು | + | ಬಯಲು | =ಬಟ್ಟಬಯಲು |
| ಎರಡು | + | ಎರಡು | =ಎರಡೆರಡು |
| ಬೇಗನೆ | + | ಬೇಗನೆ | =ಬೇಗಬೇಗನೆ |
| ನರಳಿ | + | ನರಳಿ | =ನರನರಳಿ |

| | | | |
|---|---|---|---|
| ಹೆದರಿ | + | ಹೆದರಿ | =ಹೆದಹದರಿ |
| ಕೆಳಗೆ | + | ಕೆಳಗೆ | =ಕೆಳಕೆಳಗೆ |

**ಪದ ಸಮುಚ್ಚಯ:-**

ಸುಮ್ಮನಿದ್ದು,ಸುಮ್ಮನಿದ್ದು,ಇತ್ತಬಾ ಇತ್ತಬಾ,ನಡೆದು ನಡೆದು
ಇದೆ ಇದೆ,ಇಲ್ಲ ಇಲ್ಲಿ,ಈಗೀಗ, ಆಗಾಗ,ಅಡಿ ಅಡಿ

ಅಕ್ಷರ ಅಕಾಡೆಮಿ

# *ಜೋಡಿ ನುಡಿಗಳು

ನಮ್ಮ **ಮಾತುಗಳು ಮತ್ತು ಬರವಣಿಗೆಯಲ್ಲಿ ಒಂದುಕ್ಕೊಂದು ಪೂರಕವಾದ ಒಂದಕ್ಕೊಂದು ವಿರುದ್ಧವಾದ ಪದಗಳನ್ನು ಜೋಡಿ** ಮಾಡುತ್ತೇವೆ.ಈ ಪದಗಳನ್ನು **"ಜೋಡಿನುಡಿಗಳು"** ಎಂದು ಕರೆಯುತ್ತಾರೆ.ಇಲ್ಲಿ **ಮೊದಲು ಪದಕ್ಕೆ ಅರ್ಥವಿರುತ್ತದೆ.ಎರಡನೇ ಪದಕ್ಕೆ ಅರ್ಥ ಹಾಗೂ ನಿಷ್ಪತ್ತಿ ಮತ್ತೆ ಕೆಲವೊಮ್ಮೆ ಒಂದೇ ಅರ್ಥ ಕೊಡುವ** ಎರಡು ಬಿನ್ನ ಭಾಷೆಯ ಶಬ್ದಗಳನ್ನು ಜೊತೆಗೂಡಿಸಿ ಹೇಳುತ್ತೇವೆ.

**ಒಂದಕ್ಕೊಂದು ವಿರುದ್ಧ:-**

ನೋವುನಲಿವು,ಹಗಲುರಾತ್ರಿ,ಕಪುಬಿಳುಪು,ಸತಿಪತಿ
ಸುಖದುಃಖ,ಬೆಳಗುಬೈಗು,ಗುರುಶಿಷ್ಯ,ಕೆನೆಮೊಸರು

**ಒಂದಕ್ಕೊಂದು ಪೂರಕ:-**

ಮನೆಮಠ,ಕಪ್ಪಕಾಣಿಕೆ,ಗಿಡಮರ,ಒಲವು ಚೆಲವು,
ಕಾಡುಮೇಡು,ಗುಡ್ಡಬಟ್ಟ,ತಿಂಡಿತೀರ್ಥ,ಹೆಜ್ಜೇನು

**ಒಂದುಕ್ಕೊಂದು ಅರ್ಥದ ಎರಡು ಭಿನ್ನಭಾಷ ಪದಗಳು:-**

ಗೇಟುಬಾಗಿಲು,ಸಂತೆಮಾರ್ಕೆಟು,
ಕ್ಯಾಚ್ ಹಿಡಿ,ಕಾಂಪೌಂಡ್,ಗೋಡೆ

**ಎರಡನೇ ಪದದ ಅರ್ಥಸ್ಪರ್ಷ:-**

ಕೂಲಿಕುಂಬಳಿ, ಹುಳಹುಪ್ಪಟೆ,ಕಾಯಿಲೆಕಸಾಲೆ.

**ಎರಡೂ ಪದಗಳ ಅರ್ಥ ಅಸ್ಪಷ್ಟ:-**

ತೊಳಸಂಬಳಸ,ಎಕ್ಕಸಕ್ಕ,ಕಟ್ರಾಪಟ್ರಿ,ಇರುಸುಮುರುಸು,
ಸೊಪ್ಪುಸೊದೆ.

# *ಮಾತಿಗೊಂದು ಗೀತು

**ಜೋಡು ನುಡಿಯನ್ನು ಹೋಲುವ ಈ ಪದಗಳಲ್ಲಿ ಎರಡನೇ ಪದಕ್ಕೆ ಅರ್ಥವಿಲ್ಲದ ಎರಡನೇ ಪದ ಮೊದಲ ಪದದ ಪ್ರತಿಧ್ವನಿಯಾಗಿ** ಕಂಡುಬರುತ್ತದೆ.ಆದರೆ ಮೊದಲ ಪದದ ಆದಿಯ ಅಕ್ಷರವು **ಎರಡನೇಯ ಪದದಲ್ಲಿ ಗಿ,ಬ,ಸ,ಹೀಗೆ ಆಗುವುದು**,ಹೀಗಾಗಿ ಈ ಜೋಡಿ ಪದಗಳನ್ನು "**ಮಾತಿಗೊಂದು ಗೀತು**" ಎಂದು ಕರೆಯಲಾಗಿದೆ.

**ಉದಾಹರಣೆಗೆ:–**

ಮನೆಗಿನೆ,ಕಾಫಿಗೀಫಿ,ತಲೆಗಿಲೆ,ಊಟಗೀಟ,ಸಗಣಿಗಿಗಣಿ,
ಬಸ್ಸುಗಿಸ್ಸು,ಪೆನ್ನುಗಿನ್ನು,ಹೂವುಗಿವ್ವು,ಪೇಪರ್‌ಗೀಪರ್,
ಪುಸ್ತಕಗಿಸ್ತಕ,ಗೋಡೆಗೀಡೆ,ನೀರುಗೀರು,ಹಾಡುಗೀಡು,
ಹಸುಗಿಸು,ಹುಲಿಗಿಲಿ,ಆಟಗೀಟ,ಮೇಷ್ಟುಗೀಷ್ಟು,ಲಾರಿಗೀರಿ,
ಉಪ್ಪುಗಿಪ್ಪು,ವ್ಯಾಪಾರಸಾಪಾರ

# *ಅಲಂಕಾರಗಳು

ಅಲಂಕಾರ

- ಶಬ್ದಾಲಂಕಾರ
  - ಅನುಪ್ರಾಸ
    - ವೃತ್ಯಾನುಪ್ರಾಸ
    - ಛೇಕಾನುಪ್ರಾಸ
  - ಯಮಕ
  - ಚಿತ್ರಕವಿತ್ವ
- ಅರ್ಥಲಂಕಾರ
  - 1.ಉಪಮಾ
  - 2.ರೂಪಕ
  - 3.ದೃಷ್ಟಾಂತ
  - 4.ಉತ್ಪ್ರೇಕ್ಷ
  - 5.ಶ್ಲೇಷ
  - 6.ಅರ್ಥಾಂತರನ್ಯಾಸಾಲಂಕಾರ

**ಅಲಂಕಾರ ಎಂಬ ಶಬ್ದವು "ಸುಂದರ" "ಸೊಗಸು", ಶೋಭೆ", "ಆಕರ್ಷಕ" ಎಂಬ ಅರ್ಥವನ್ನು ಕೊಡುತ್ತದೆ**. ಮನುಷ್ಯನೊಬ್ಬ ನಿಸರ್ಗ ಸಹಜವಾದ ಪರಿಸರ ಅಂದರೆ ದೇಹ,ಮನೆ,ಕೋಣೆ,ಇತ್ಯಾದಿಯನ್ನು ಸೌಂದರ್ಯವಾಗಿ ಕಾಣಲು ಮಾಡಿಕೊಳ್ಳುವ ಪ್ರಯತ್ನವನ್ನು ಅಲಂಕಾರವೆಂದು ಕರೆಯುತ್ತೇವೆ. ಹಾಗೆಯೇ ನಾವು ನಿತ್ಯ ವ್ಯವಹಾರದಲ್ಲಿ ಸಹಜವಾಗಿ ಉಪಯೋಗಿಸುವ ಮಾತುಗಳನ್ನು ಅವುಗಳಿಗೆ ತನ್ನ ಪ್ರತಿಭಾ ಸ್ಪರ್ಶದಿಂದ ಕವಿಯೊಬ್ಬ ಆಕರ್ಷಣೀಯವಾಗಿ ಕಾಣುವಂತೆ ಮಾಡುತ್ತೇವೆ. ಇದನ್ನು ಅಲಂಕಾರಗಳು ಎಂದು ಕರೆಯುತ್ತಾರೆ.

**ಅರ್ಥ:-ಅಲಂಕಾರ ಎಂದರೆ, "ಕಾವ್ಯ ಸೌಂದರ್ಯವನ್ನುಂಟುಮಾಡುವ ಶಬ್ದಾರ್ಥ ವೈಚಿತ್ಯಗಳಿಗೆ ಅಲಂಕಾರ"** ಎನ್ನುವರು. ಹೇಳಬೇಕಾದರೆ ವಿಷಯವನ್ನು ನೇರವಾಗಿ ಹೇಳಿದರೆ ಅದು ಬರೀ ಮಾತಾಗುತ್ತದೆ. ಅದೇ ವಿಚಾರವನ್ನು ವರ್ಣಿಸಿ ಹೇಳಿದರೆ ಅಲಂಕಾರವಾಗುತ್ತದೆ.

**ಉದಾ:- "ಪೂರ್ವ ದಿಕ್ಕಿನಲ್ಲಿ ಸೂರ್ಯ ಮೂಡಿದನು" ಎಂದು ಹೇಳುವ ಬದಲಿಗೆ "ಪೂರ್ವ**

**ದಿಕ್ಕಿನಲ್ಲಿ ಮೂಡಿದ ಸೂರ್ಯ ಮುತ್ತೈದೆಯ ಹಣೆಯ ಕುಂಕುಮದಂತೆಕಂಡನು"**
ಎಂದು ಹೇಳಿದಾಗ ಮಾತಿನ ಸೌಂದರ್ಯವೆಚ್ಚುವುದು.

**ಅಲಂಕಾರವನ್ನು ಕಾವ್ಯದಲ್ಲಿ ಅಳವಡಿಕೊಂಡ ಪ್ರಮುಖ ಕವಿಗಳು.**

**ಪ್ರಾಚೀನ ಸಂಸ್ಕೃತ ಕವಿಗಳು:–**

**ಭರತನ "ನಾಟ್ಯಶಾಸ್ತ್ರ"**(ಪ್ರಾಚೀನ ಸಂಸ್ಕೃತ ಅಲಂಕಾರ ಗ್ರಂಥ)
ಭಾಮಹ,ವಾಮನ,ರುದ್ರಟರು,ಮೊದಲಾದವರು.

**ನವೀನ ಸಂಸ್ಕೃತ ಕವಿಗಳು:–**

ಹೇಮಚಂದ್ರ,ವಿಶ್ವನಾಥ,ಮಮ್ಮಟ,ಜಗನ್ನಾಥ, ಆನಂವರ್ಧನ.

**ಕನ್ನಡ ಅಲಂಕಾರ ಗ್ರಂಥ ಕವಿಗಳು:–**

**ನೃಪತುಂಗ ಆಸ್ಥಾನದಲ್ಲಿದ್ದ ಶ್ರೀವಿನಯ–"ಕವಿರಾಜ ಮಾರ್ಗ" ಕೃತಿ**
(ಪ್ರಾಚೀನ ಕನ್ನಡ ಅಲಂಕಾರ ಗ್ರಂಥ)

| | | |
|---|---|---|
| **ನಾಗವರ್ಮನ** | –ಕಾವ್ಯಾಲೋಕನ | –2ನೇ ಯದು |
| **ಉದಯಾದಿತ್ಯನ** | –ಉದಯಾದಿತ್ಯಾಲಂಕಾರ | –3ನೇಯದು |
| **ಕವಿಕಾಮನ** | –ಶೃಂಗಾರ ರತ್ನಾಕಾರ | –4ನೇಯದು |
| **ಮಾಧವನ** | –ಮಾಧವಾಲಂಕಾರ ಸಾಳ್ವನ | –ರಸರತ್ನಾಕರ |
| **ಹದಿನೇಳನೇಯ ಶತಮಾನದ ತಿರುಮಲಾರ್ಯ** | | –ಅಪ್ರತಿಮವೀರ ಚರಿತೆ |

ಕವಿ ಭಾಷೆಯ ಅಲಂಕಾರಗಳಲ್ಲಿ**2** ವಿಧ.

**1.ಶಬ್ದಾಲಂಕಾರ** **2.ಅರ್ಥಾಲಂಕಾರ**

# 1.ಶಬ್ದಾಲಂಕಾರ:

**ಪದಗಳ ಜೋಡಣೆಯಿಂದ ಚಮತ್ಕಾರವು** ಗೋಚರವಾಗಿ ಕಾವ್ಯದ **ಸೌಂದರ್ಯವನ್ನು ಹೆಚ್ಚಿಸುವುದಲ್ಲಿ ನೆರವು ನೀಡಿದರೆ ಅದನ್ನು ಶಬ್ದಾಲಂಕಾರ** ಎನ್ನಬಹುದು.

ಶಬ್ದಾಲಂಕಾರದಲ್ಲಿ **3** ವಿಧಗಳು.

**1.ಅನುಪ್ರಾಸ 2.ಯಮಕ 3.ಚಿತ್ರಕವಿತ್ವ**

**1)ಅನುಪ್ರಾಸ:**

**ಒಂದೇ ರೂಪದ ಅಥವಾ ಆಕಾರದ ಅಥವಾ ಹೋಲಿಕೆಯ ಅಕ್ಷರಗಳು**(ವರ್ಣಗಳು)ಬಂದು ಪದ್ಯದ ಸಾಲಿನಲ್ಲಿ **ಮತ್ತೆ ಮತ್ತೆ ಪುನರಾವರ್ತನೆಯಾದರೆ** ಅದನ್ನು **ಅನುಪ್ರಾಸ ಅಲಂಕಾರ** ಎನ್ನುವರು.

**ಅ.ವೃತ್ಯನುಪ್ರಾಸಾಲಂಕಾರ:–**

**ವೃತ್ತ ಎಂದರೆ ಸುತ್ತು ಎಂದರ್ಥ,**ಈ ಅಲಂಕಾರದ ಶಬ್ದಗಳಲ್ಲಿ ವ್ಯಂಜನಗಳು ಮತ್ತೆ ಮತ್ತೆ ವೃತ್ತದ ರೀತಿಯಲ್ಲಿ **ಸುತ್ತಿ ಸುತ್ತಿ ಬರುತ್ತಿದ್ದರೆ** ಅಂತಹ ಅಲಂಕಾರ **ವೃತ್ಯನುಪ್ರಾಸಾಲಂಕಾರ** ಎನ್ನುವರು.

**ಉದಾ:–**

ಬೆಳ್ಳಿಯ ಹಳ್ಳಿಯ ಮೇರೆಯ ಮಿರಿ(**"ಳ"** ವೃತ್ಯನುಪ್ರಾಸ).

ಕುಂಟನಿಗೆ ಒಂದು ಚೇಷ್ಟೆ, ಆದರೆ ಕುರುಡನಿಗೆ ನಾನಾ ಚೇಷ್ಟೆ(**"ಕು"** ವೃತ್ಯನುಪ್ರಾಸ).

ಬಲ್ಲವನೇ ಬಲ್ಲ,ಬೆಲ್ಲದ ಸವಿಯ(**"ಬಲ್ಲ"** ವೃತ್ಯನುಪ್ರಾಸ)

**ಆ.ಛೇಕಾನುಪ್ರಾಸಾಲಂಕಾರ:–**

ಈ ಅಲಂಕಾರದಲ್ಲಿ**ಎರಡೆರಡು ಅಕ್ಷರಗಳು ಅಥವಾ ಒಂದು ಶಬ್ದವು ಪುನರಾವರ್ತನೆಯೇ ಛೇಕಾನುಪ್ರಾಸಾಲಂಕಾರ** ಎನ್ನುವರು.

**ಉದಾ:–**

ಹಾಡಿ ಹಾಡಿ ರಾಗ – "ಹಾಡಿ"

ಉಗಳಿ ಉಗಳಿ ರೋಗ – "ಉಗಳಿ"

ಮದುವೆಗೆ ಮುಂಚೆ ನೀ ಹೋಗಳುತ್ತಿದ್ದೆ ಹಾಡಿಹಾಡಿ

ಮದುವೆಯ ನಂತರ ತೆಗಳುತ್ತಿರುವೆ ನೀ ನನ್ನ ಕಾಡಿ ಕಾಡಿ

ಮಳೆ ಬರುವುದು ನಿಲ್ಲು ನಿಲ್ಲು

ಸಿಡಿಲು ಬರುವುದು ಓಡು ಓಡು

**2)ಯಮಕ:**

**ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವೋ, ಪದ್ಯಭಾಗವೋ ನಿಯಮಿತವಾಗಿ ಪುನರಾವರ್ತನೆಯನ್ನು ಹೊಂದಿದ್ದರೆ,**ಅದು**ಯಮಕ ಅಲಂಕಾರ.** ಈ ಮುನಾರಾವರ್ತನೆಯ ಒಂದು ಪದ್ಯದಲ್ಲಿ ಆದಿ,ಮಧ್ಯ,ಅಂತ್ಯ,ಹೀಗೆ ಎಲ್ಲಿಯಾದರೂ ಎಷ್ಟು ಸಲವಾದರೂ ಆಗಬಹುದು ಆದರೆ ಈ **ಪುನರಾವರ್ತನೆ ಕನಿಷ್ಟ ಎರಡು** ಬಾರಿಯಾದರೂ ಆಗಲೇಬೇಕು ಎನ್ನುವುದು ನಿಯಮವಾಗಿದೆ.

**ಉದಾ:–1**

**ಬರಹೇಳ್ ನಿಶುಂಭಾನಂ ಕುಂಭಾನಂ ಲಂಬನಂ**

**ಬರಹೇಳ್ ಸುಮಿಪುಳನಂ ಚಪಳನಂ ಕಪಿನಂ**

**ಬರಹೇಳ್ ಮುಹಂಡನಂ ಮುಂಡನಂ ಹುಂಡ ಮುಖ್ಯರನೆ ನೆತ್ತುರಿದೆದ್ದನು**

**ಇಲ್ಲಿ "ಬರಹೇಳ್" ಶಬ್ದ ಪುನರಾವರ್ತನೆಯಾಗಿದೆ.**

**ಇದು ವಿರುಪಾಕ್ಷಪಂಡಿರ ಬರೆದ ಚೆನ್ನಬಸವ ಪುರಾಣ ಕೃತಿ.**

ಉದಾ:–**2**

**ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ**

**ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ**

**ದಲ್ಲಿಗಲ್ಲಿಗೆ ರನ್ನದೆರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ**

**–ಇದು ವಿರುಪಾಕ್ಷಪಂಡಿತ ಬರೆದ ಚನ್ನಬಸವ ಪುರಾಣ ಕೃತಿ**

ಇಲ್ಲಿ "ಅಲ್ಲಿಗಲ್ಲಿಗೆ" ಶಬ್ದ ಪುನರಾವರ್ತನೆಯಾಗಿದೆ. ಈ ಎರಡು ಕವಿತೆಗಳ ಉಳಿದ ಸಾಲುಗಳಲ್ಲಿಯೂ ಈ ಶಬ್ದಗಳು ಪುನರಾವರ್ತನೆಯಾಗಿದೆ.

**3.ಚಿತ್ರ ಕವಿತ್ವ:**

**ಭಾಷೆಯ ಮೇಲೆ ಹೆಚ್ಚು ಪ್ರಭುತ್ವ ಸಾದಿಸಿದ ಸಮರ್ಥ ಕವಿಯೊಬ್ಬನು** ಕೆಲವಷ್ಟೆ ಅಕ್ಷರಗಳನ್ನಾಯ್ದುಕೊಂಡು **ಕುಶಲತೆಯಿಂದ ಜೋಡಿಸಿ ಸುಂದರವಾದ ಪದ್ಯ ಕಟ್ಟುವುದಕ್ಕೆ ಚಿತ್ರಕವಿತ್ವ ಎಂದು ಹೆಸರು.**

**ಉದಾ:–**

**ನನ್ದನ ನನ್ದನ ನಿನ್ನೊನ್ದನ್ದದ ಮೈ ಮುನ್ದೆ ನಿನ್ದುದೆನ್ದೆನೆ ಮುದದಿ**

**ನ್ದನ್ದಿನ್ದುನ್ದೆನ್ನದೆ ನೀ**

**ನೆನ್ದುಂ ಮೆನ್ಮನೆ ನೆಮ್ಮಿನೆನ್ದೀ ಮುದಮಂ**

## 2.ಅರ್ಥಲಂಕಾರ:

ಕಾವ್ಯ ಸೌಚಿದರ್ಯವನ್ನುಂಟು ಮಾಡುವ ಅರ್ಥ **ಚಮತ್ಕಾರಗಳಿಗೆ "ಅರ್ಥಲಂಕಾರ"** ಎನ್ನುವರು.ಅರ್ಥಲಂಕಾರದಲ್ಲಿ ಸುಮಾರು ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಅವುಗಳಲ್ಲಿ ಪ್ರಸುತ್ತ ಆರು ಅಲಂಕಾರಗಳನ್ನು ನೀಡಿದೆ. **ಉಪಮೇಯ ಉಪಮಾನಗಳೊಳಗಿನ ಸಂಬಂಧದಿಂದ ಅಲಂಕಾರ ಯಾವುದು ಎಂದು ನಿರ್ಧರಿಸಬಹುದು**.

**1).ಉಪಮಾಲಂಕಾರ**

**2).ರೂಪಕಾಲಂಕಾರ**

**3).ದೃಷ್ಟಾಂತಾಲಂಕಾರ**

**4).ಉತ್ಪ್ರೇಕ್ಷಾಲಂಕಾರ**

**5).ಶ್ಲೇಷಾಲಂಕಾರ**

**6).ಅರ್ಥಾಂತರನ್ಯಾಸಾಲಂಕಾರ**

**ಸೂಚನೆ:–**

**ಉಪಮೇಯ:** ವಾಕ್ಯದಲ್ಲಿ ಕವಿ ಯಾವ ವಸ್ತುವನ್ನು ವರ್ಣಿಸುತ್ತಾನೆಯೋ ಅದೇ ವರ್ಣ ಅಥವಾ ಉಪಮೇಯ.

**ಉಪಮಾನ:** ವಾಕ್ಯದಲ್ಲಿ ಕವಿ ಯಾವ ವಸ್ತುವನ್ನು ಆಧಾರವಾಗಿಟ್ಟು ಕೊಂಡು ಅಥವಾ ಮಾನವನ್ನಾಗಿ ಇಟ್ಟುಕೊಂಡು ವರ್ಣಿಸಲಾಗಿದೆಯೂ ಆ ವಸ್ತುವೇ ಅವಣ್ಯ ಅಥವಾ ಉಪಮಾನ.

### 1).ಉಪಮಾಲಂಕಾರ:

**ಉಪಮ ಎಂದರೆ "ಹೋಲಿಕೆ ಎಂದಾರ್ಥ** ಎರಡು **ವಸ್ತುಗಳಿಗೆ ಪರಸ್ಪರವಾಗಿ ಇರುವ ಆಕರ್ಷಕ ರೀತಿಯ ಹೋಲಿಕೆ ಅಥವಾ ಉಪಮೇಯ ಉಪಮಾನಗಳೊಳಗೆ ಉಪಮಾ(ಹೋಲಿಕೆ) ಇರುವ ಅಲಂಕಾರವೇ ಉಪಮಾಲಂಕಾರ** ಎನಿಸುವುದು.

ಈ ಅಲಂಕಾರದಲ್ಲಿ **ಅಂತೆ,ಹಾಗೆ,ರೀತಿ,ವೊಲ್,ಅಂತಿರೆವೊಲ್,ಅಂತೆವೋಲ್,ವೋಲ್(ದಾತು),ಮಾಳ್ಕೆ,ತೆರಂ(ಪ್ರಕಾರ**

**ವಾಚಕ) ಮೊದಲಾದವೂ ಉಪಮಾವಾಚಕ ಶಬ್ದಗಳಾಗಿರುತ್ತದೆ.** ಈ ಉಪಮವಾಚಕ ಇಲ್ಲದೆ ಹೋದರೆ ಉಪಮಾ ಅಲಂಕಾರ ಆಗುವುದಿಲ್ಲ, ಇದು ತುಂಬ ಮಹತ್ವವಾಗಿದೆ.

ಉಪಮಾಲಂಕಾರದಲ್ಲಿ ಎರಡು ಪ್ರಭೇದಗಳಿವೆ,

**i)ಪೂರ್ಣೋಪಮಾಲಂಕಾರ**

**ii)ಲುಪ್ತೋಪಮಾಲಂಕಾರ**

**i)ಪೂರ್ಣೋಪಮಾಲಂಕಾರ:**

**ಉಪಮೇಯ,ಉಪಮಾನ,ವಾಚಕಪದ ಮತ್ತು ಸಮಾನ ಧರ್ಮ ಈ ನಾಲ್ಕು ಅಂಶಗಳನ್ನೊಳಗೊಂಡ ಅಲಂಕಾರವೇ ಪೂರ್ಣೋಪಮಾಲಂಕಾರ.**

**ಉದಾ:–1. ಸೀತೆಯ ಮೂಕ ಕಮಲದಂತೆ ಅರಳಿತು.**

**ಉಪಮೇಯ**–ಸೀತೆಯ ಮುಖ

**ಉಪಮಾನ**–ಕಮಲ

**ವಾಚಕ ಪದ**–ಅಂತೆ

**ಸಮಾನಧರ್ಮ**–ಅರಳುವುದು

**ಉದಾ:–2. ಮಗುವಿನ ಮುಖವು ಚಂದ್ರನ ಮುಖದಂತೆ ಮನೋಹರವಾಗಿದೆ**

**ಉಪಮೇಯ**–ಮಗುವಿನ ಮುಖ

**ಉಪಮಾನ**–ಚಂದ್ರಮುಖ

**ವಾಚಕ ಪದ**–ಅಂತೆ

**ಸಮಾನಧರ್ಮ**–ಮನೋಗರವಾಗಿದೆ

**ಉದಾ:– 3. ಸೀತೆಯ ಮುಖವು ಚಂದ್ರನಂತೆ ರಮಣೀಯವಾಗಿದೆ.**

**ಉದಾ:– 4. ಪೂರ್ವ ದಿಕ್ಕಿನಲ್ಲಿ ಉದಯಿಸಿದ ಸೂರ್ಯ ಮುತ್ತೈದೆಯ ಹಣೆಯ ಕುಂಕುಮದಂತೆ ಕಂಡನು.**

**ii)ಲುಪ್ತೋಪಮಾಲಂಕಾರ:**

**ಉಪಮೇಯ, ಉಪಮಾನ, ವಾಚಕಪದ ಮತ್ತು ಸಮಾನಧರ್ಮ ಈ ನಾಲ್ಕು ಅಂಶಗಳಲ್ಲಿ ಯಾವುದಾದರೂ ಒಂದು ಅಂಶ ಕಡಿಮೆ ಇರುವುದು ಲುಪ್ತೋಪಮಾಲಂಕಾರ.**

**ಉದಾ:– 1. ಮುಖ ಕಮಲದಂತಿದೆ.**

**ಉಪಮೇಯ**–ಮುಖ

**ಉಪಮಾನ**–ಕಮಲ

**ವಾಚಕ ಪದ**–ಅಂತೆ

**ಸಮಾನಧರ್ಮ**–ಸಾರಣ ದರ್ಮ ಬಂದಿಲ್ಲ

**ಉದಾ:– 2. ನೀರಿನಂತೆ ನಿರ್ಮಲ.**

**ಉಪಮೇಯ**–ಇಲ್ಲಿ ಬಂದಿಲ್ಲ

**ಉಪಮಾನ**–ನೀರು

**ವಾಚಕ ಪದ**–ಅಂತೆ

**ಸಮಾನಧರ್ಮ**–ನಿರ್ಮಲ

**ಉದಾ:– 3. ಬಾವಿನಂತೆ ನಿಶ್ಚಲ,**

**ಉದಾ:– 4 ಹೂವಿನಂತೆ ಕೋಮಲ**

**ಸೂಚನೆ:–**

**1.ಉಪಮಾಲಂಕಾರವು ಅತ್ಯಂತ ಪ್ರಾಚೀನವಾದ ಮತ್ತು ಮಹತ್ವವಾದ ಅಲಂಕಾರವಾಗಿದೆ.**

**2.ಉಪಮಾಲಂಕಾರವನ್ನು "ಮೂಲ ಅಲಂಕಾರ" ಎಂದು ಕರೆಯುವರು.**

**2).ರೂಪಕಾಲಂಕಾರ:**

**ಉಪಮಾನ ಮತ್ತು ಉಪಮೇಯ ಅಭಿನ್ನ ಅಥವಾ ಒಂದೇ ಎಂದು ಹೇಳುವ ಅಲಂಕಾರವು ರೂಪಕಾಲಂಕಾರ ಎನಿಸುವುದು.**

**ಉದಾ:– 1. ಮುಖ ಚಂದ್ರ**

**ಉಪಮೇಯ**–ಮುಖ

**ಉಪಮಾನ**–ಚಂದ್ರ

ಇವೆರಡರಲ್ಲೂ ಅಭೇದ ಕಲ್ಪನೆಯಿದೆ.

**ಉದಾ:– 2. ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ.**

**ಉಪಮೇಯ**–ಪುರ(ಹರಿಶ್ಚಂದ್ರ)

**ಉಪಮಾನ**–ಪುರದ ಪುಣ್ಯಂ

ಇವೆರಡರಲ್ಲೂ ಅಭೇದ ಕಲ್ಪನೆಯಿದೆ.

**ಉದಾ:– 3. ನನ್ನವ್ವ ಫವವತ್ತಾದ ಕಪ್ಪು ನೆಲ**

**ಉದಾ:– 4. ಪುರುಷ ಸಿಂಹ**

**ಉದಾ:– 5. ಉಳ್ಳವರು ಶಿವಾಲಯ ಮಾಡುವರಯ್ಯ,**
**ನಾನೇನುಮಾಡಲಿ ಬಡವನಯ್ಯ**
**ಎನ್ನ ಕಾಲೇ ಕಂಬ ದೇಹವೇ ದೇಗುಲ ಶಿರವೇ ಹೊನ್ನ ಕಳಸ.**

### 3).ದೃಷ್ಟಾಂತಾಲಂಕಾರ:

**ಒಂದು ಸಾಮಾನ್ಯ ಸಂಗತಿಯನ್ನು ಇಲ್ಲವೆ ವಿಶೇಷ ಸಂಗತಿಯನ್ನು ಬೇರೊಂದು ಸಂಗತಿಯ ಉದಾರಣೆಯಿಂದ ಸ್ಪಷ್ಟಗೊಳಿಸುವುದು ದೃಷ್ಟಾಂತಾಲಂಕಾರ** ಎನಿಸುವುದು. ಇಲ್ಲಿ ಉಪಮೇಯ ಮತ್ತು ಉಪಮಾನಗಳು ಬಿಂಬ ಪ್ರತಿಬಿಂಬಿಗಳಂತೆ ಬಾಸವಾಗುತ್ತವೆ.

**ಉದಾಹರಣೆಗೆ:–**

**ಮಾತುಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ,**
**ಊರು ಉಪಕಾರ ಅರಿಯದು,ಹೆಣ ಶೃಂಗಾರ ಅರಿಯದು,**
**ಅಟ್ಟ ಮೇಲೆ ಒಲೆ ಉರಿಯದು,ಕೆಟ್ಟ ಮೇಲೆ ಬುದ್ಧಿ ಬಂತು.**

ದೃಷ್ಟಾಂತ ಎನ್ನುವದು ಉದಾರಣೆಯೆನ್ನುವ ಅರ್ಥವನ್ನು ಕೊಡುತ್ತದೆ. ಯೋಗ್ಯವಾದ ದೃಷ್ಟಾಂತ ಇಲ್ಲದೆ ಹೋದರೆ ಯಾವ ವಿಚಾರವೂ ಸ್ಪಷ್ಟತೆಯನ್ನು ಪಡೆದುಕೊಳ್ಳವುದಿಲ್ಲ.ಆದ್ದರಿಂದ ಮೊದಲನೆಯ ವಿಚಾರವನ್ನು ಸ್ಪಷ್ಟಪಡಿಸುವ ಸಲುವಾಗಿ ಮತ್ತೊಂದು ವಿಚಾರವನ್ನಿಡಲಾಗಿದೆ.

### 4).ಉತ್ಪ್ರೇಕ್ಷಾಲಂಕಾರ:

**ಯಾವುದಾದರೂ ಒಂದು ಪದಾರ್ಥ ಅಥವಾ ಸನ್ನಿವೇಷವನ್ನು ಮತ್ತೊಂದನ್ನಾಗಿ ಕಲ್ಪಿಸಿ ಅಥವಾ ಭಾವಿಸಿ ವರ್ಣಿಸುವ ಅಲಂಕಾರವನ್ನು ಉತ್ಪ್ರೇಕ್ಷಾಲಂಕಾರ**ಎನ್ನುವರು. ಇರುವ ವಸ್ತುವನ್ನು ಮತ್ತೊಂದು ಎಂದು ಪಟ್ಟುಕೊಳ್ಳವುದೇ ಇದರಲ್ಲಿಯ ಚಮತ್ಕಾರವಾಗಿದೆ. ಅಂದರೆ ಕಲ್ಪಿಸಿಕೊಳ್ಳುವುದಾಗಿದೆ.

**ಉದಾ:– 1.ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು.**

**ಉಪಮೇಯ**–ಸೀತೆಯ ಮುಖ

**ಉಪಮಾನ**–ಕಮಲ

**ಉಪಮಾನ**–ಉತ್ಪ್ರೇಕ್ಷಾಲಂಕಾರ

**ಸಮನ್ವಯ**–ಉಪಮೇಯುವಾದ ಸೀತೆಯ ಮುಖವನ್ನು ಕಮಲವೆಂಬುದಾಗಿ ಕಲ್ಪುಸಿಕೊಳ್ಳಲಾಗಿದೆ.

**ಉದಾ:– 2.**

**ರಕ್ತದ ಸಮುದ್ರಕ್ಕೆ ಸೇತುವೆ**
**ಯನ್ನು ಕಟ್ಟಲು ಈ ರೀತಿ ಚಿಕ್ಕ ಚಿಕ್ಕ ಬೆಟ್ಟಗಳನ್ನು**
**ಹೊಸದಾಗಿ ಹರಡಿರುವರೋ**
**ಎನ್ನುವಂತೆ ಸತ್ತುಬಿದ್ದ ಆನೆಗಳ ಹಿಂಡು ಕಾಣುತ್ತಿತ್ತು.**

(ರಕ್ತ ಸಿಕ್ತವಾದ ರಣರಂಗದಲ್ಲಿ ಸತ್ತು ಬಿದ್ದಿರುವ ಆನೆಗಳನ್ನು ಕಂಡು ಕವಿಯು ಈ ರೀತಿ ಉತ್ಪ್ರೇಕ್ಷೆ ಮಾಡುವನು).

**ಉದಾ:– 3.**

**ತೀವಿದ ಸಂಧ್ಯಾರಾಗಮಿ**
**ದಾವುಷ್ಣನು ರಥ ತುರಂಗ ಪದಧುತ ರಜವೂ**

(ಇಲ್ಲಿ ಕೆಂಪುಬಣ್ಣದ ಸಂಜೆಗೆಂಪನ್ನು ಸೂರ್ಯನ ರಥದ ಕುದುರೆಗಳ ಕಾಲಿನಿಂದ ಎದ್ದ ದೂಳು ಎಂದು ಊಹಿಸಿರುವುದು ಉತ್ಪ್ರೇಕ್ಷೆಯಾಗಿದೆ).

### 5).ಅರ್ಥಾಂತರನ್ಯಾಸಾಲಂಕಾರ:

**ಒಂದು ವಿಶೇಷ ವಾಕ್ಯ(ಸಾಂದರ್ಭಿಕ ವಾಕ್ಯ)ವನ್ನು ಸಾಮಾನ್ಯ ವಾಕ್ಯದಿಂದ(ರೂಡಿಯಲ್ಲಿರುವ ವಾಕ್ಯ) ಸಮರ್ಥನೆ ಮಾಡಿ ವರ್ಣಿಸುವ ಅಲಂಕಾರವನ್ನು ಅರ್ಥಾಂತರನ್ಯಾಸಾಲಂಕಾರ** ಎನ್ನುವರು.

**ಉದಾಹರಣೆಗೆ:–**

**1.** ಆತನು ಉಂಡಮನೆಗೆ ಕೇಡು ಬಗೆದನು:ಕೃತಘ್ನರು ಏನನ್ನು ತಾನೆ ಮಾಡುವುದಿಲ್ಲ.

**2.** ಆತನು ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಪಾಸಾದನು:ಬುದ್ಧಿವಂತ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೆ?

**3.** ಪರಮಾತ್ಮನು ಭಕ್ತರನ್ನು ಸದಾ ಕಾಪಾಡುತ್ತಾನೆ: ಭಕ್ತನಾದ ಪ್ರಹಲ್ಲಾದನಿಗೆ ತಂದೆಯಿಂದ
ಗಂಡಾಂತರ ಬಂದಾಗ ಪರಮಾತ್ಮನ್ನು ಕಾಪಾಡಲಿಲ್ಲವೆ.

**4.** "ಮಾರುತಿ ಸಾಗರವನುತ್ತರಿಸಿದಂ ಮಹಾತ್ಮರಿಗರಿದೇಂ"

### 6).ಶ್ಲೇಷಾಲಂಕಾರ:

**ಬೇರೆ ಬೇರೆ ಅರ್ಥಗಳನ್ನು ಹೊಂದಿರುವ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಡುವ ಅಲಂಕಾರವನ್ನು ಶ್ಲೇಷಾಲಂಕಾರ** ಎನ್ನುವರು.

**ಉದಾ:–1.**

**ಗೆಳತಿ ನೀನು ಪ್ರೀತಿಸುವಾಗ ನನಗೇನಾಗಿತ್ತು ದಾಡಿ**

(ಇಲ್ಲಿ **ದಾಡಿ** ಎಂಬ ಪದವು ಗಡ್ಡ ಮತ್ತು ತೊಂದರೆ ಎಂಬ ಎರಡು ಅರ್ಥಗಳನ್ನು ನೀಡುವುದರಿಂದ ಇದು ಶ್ಲೇಷಾಲಂಕಾರವಾಗಿದೆ)

**ಉದಾ:–2.**

**ಕಲಿಯಂತೆ ಸಶರಂ ಅಂಬರ**
**ತಲದಂತೆ ಸಹಂಸ ಅಮರಪುರಮೆನೆಸುಮನೋ**
**ನಿಲಯಂ ಸಕವಿ ನೃಪಸಭಾ**
**ತಲದಂತೆ ಅಹಿಯಂತೆ ಸಮಿಷಮೊಪ್ಪಿದುದು ಸರಂ**

ಇಲ್ಲಿ ಸರೋವರ ವಿಶೇಷದಲ್ಲಿ ಬಂದ ಸಶರ, ಸಹಂಸ,ಸುಮನೋನಿಲಯ ಸಕವಿ,ಸಮಿಷ ಐದು ಪದಗಳ ಅರ್ಥ ಬೇರೆ ಬೇರೆಯಾಗಿರಬೇಕು.

1). **ಕಲಿಯಂತೆ ಸಶರವಾಗಿತ್ತು**(ಸಶರ ಅಂದರೆ ನೀರು–ಬಾಣ)

2). **ಅಂಬರ ತಲದಂತೆ ಸಹಂಸವಾಗಿತ್ತು**(ಸಹಂಸ ಅಂದರೆ–ಸೂರ್ಯ)

3). **ಅಮರಪುರದಂತೆ ಸುಮನೋನಿಯಲವಾಗಿತ್ತು.**
(ಸುಮನೋನಿಲಯ ಅಂದರೆ ಹೂವು–ದೇವತೆಗಳಿಂದ ಕೂಡಿತ್ತು)

4). **ನೃಪ ಸಭೆಯಂತೆ ಸಕವಿಯಾಗಿತ್ತು.**
(ಸಕವಿ ಅಂದರೆ ನೀರುಹಕ್ಕಿಗಳು–ಕಾವ್ಯಬರೆಯುವವರಿಂದ ಕೂಡಿತ್ತು)

5). **ಹಾವಿನಂತೆ ಸವಿಷವಾಗಿತ್ತು.**(ಸವಿಷ ಅಂದರೆ ನೀರು–ವಿಷದಿಂದ ಕೂಡಿತ್ತು)

ಹೀಗೆ ಐದು ಪದಗಳ ಅಥವೂ ಸರೋವರ ಮತ್ತು ಕಲಿಯ ಪರವಾಗಿ ಬೇರೆ ಬೇರೆ ಇರುವುದರಿಂದ ಇದು ಶ್ಲೇಷಾಲಂಕಾರವಾಗಿದೆ.

## 7.ದೀಪಕಾಲಂಕಾರ:

**ಉಪಮೇಯ ಮತ್ತು ಉಪಮಾನಗಳಲ್ಲಿ ಒಂದೇ ಧರ್ಮವಿದೆ ಎಂದು ಹೇಳುವ ಅಲಂಕಾರವನ್ನು ದೀಪಕಾಲಂಕಾರ** ಎನ್ನುವರು.

**ಉದಾಹರಣೆಗೆ:–**

ನಾಯಕಿಯಿಲ್ಲದೆ ಚಿತ್ರ,
ಬಾಲಕಿಯರಿಲ್ಲದ ಶಾಲೆ,

ಶೀಲವಿಲ್ಲದ ಶಿಕ್ಷಣ

ರಸಿಕತೆಯಿಲ್ಲದ ಜೀವನ

ಗುರಿಯಿಲ್ಲದ ಬಾಣ ಸೊಬಗೆ?

(ಇಲ್ಲಿ ಕೊನೆಯಲ್ಲಿ ಬಂದ ಸೊಬಗೆ?ಎನ್ನುವ ಪದವು

ನಾಯಕಿಯಿಲ್ಲದ ಚಿತ್ರ ಸೊಬಗೆ

ಬಾಲಕಿಯರಿಲ್ಲದೆ ಶಾಲೆ ಸೊಬಗೆ

ಶೀಲವಿಲ್ಲದ ಶಿಕ್ಷಣ ಸೊಬಗೆ

ರಸಿಕತೆಯಿಲ್ಲದ ಜೀವನ ಸೊಬಗೆ

ಗುರಿಯಿಲ್ಲದ ಬಾಣ ಸೊಬಗೆ ಎಂದು ಎಲ್ಲಕ್ಕೂ ಸಂಬಂಧ ಉಂಟುಮಾಡಿದೆ, ಆದ್ದರಿಂದ ಇದು ದೀಪಕಾಲಂಕಾರ.

ಈಗಾಗಲೇ 1,60,000ಕ್ಕೂ ಅಧಿಕ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು
JOIN ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

# *ಕನ್ನಡ ಸಾಹಿತ್ಯ ಚರಿತ್ರೆ

ಜ್ಞಾನಪೀಠ ಪ್ರಶಸ್ತಿ ವಿಜೇತರು
ಪಂಪ ಪ್ರಶಸ್ತಿ ವಿಜೇತ ಕವಿಗಳು
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರ ಪರಿಚಯ
ಕರ್ನಾಟಕ ರತ್ನ ಪ್ರಶಸ್ತಿ ವಿಜೇತರು
ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ವಿಜೇತರು
ಕನ್ನಡದ ಕವಿಗಳ ಅಭಿನಂದನ ಗ್ರಂಥಗಳು
ಕನ್ನಡ ಕವಿಗಳ ಕಾವ್ಯನಾಮಗಳು
ಅಂಕಿತ ನಾಮಗಳು
ಕರ್ನಾಟಕ ಕವಿಗಳ ಬಿರುದುಗಳು
ಅನ್ವರ್ಥನಾಮಗಳು
ಪೂರ್ಣ ಹೆಸರು
ಕನ್ನಡ ಸಾಹಿತ್ಯದ ಕವಿನುಡಿಗಳು
ಕನ್ನಡದ ಪ್ರಪ್ರಥಮಗಳು
–ಪ್ರಪ್ರಥಮ ಮಹಿಳೆಯರು
–ಪ್ರಪ್ರಥಮ ಪುರುಷರು
–ಪ್ರಪ್ರಥಮ ಕೃತಿಗಳು
ಪ್ರಾಚೀನ ಕವಿಗಳ ಕಿರುಪರಿಚಯ
ಪ್ರವಾಸ ಸಾಹಿತ್ಯ ಕೃತಿಗಳು
ಕನ್ನಡದ ಕವಿಗಳ ಆತ್ಮಚರಿತ್ರೆಗಳು

# *ಜ್ಞಾನ ಪೀಠ ಪ್ರಶಸ್ತಿ ವಿಜೇತರು

**1.ಕುವೆಂಪು**

| | |
|---|---|
| **ಪೂರ್ಣ ಹೆಸರು** | :ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ |
| **ಕಾವ್ಯನಾಮ** | :ಕುವೆಂಪು |
| **ಬಿರುದು** | :ರಾಷ್ಟ್ರಕವಿ |
| **ಜನನ–ಮರಣ** | :**29-12-1904, 09-11-1994** |
| **ಸ್ಥಳ** | :ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ |
| **ಕವನ ಸಂಕಲನ** | :ಕೊಳಲು,ಪಕ್ಷಿಕಾಶಿ,ಅನಿಕೇತನ,ನವಿಲು, ಚಂದ್ರಮಂಚಕೆ ಬಾ ಚಕೋರಿ,ಪ್ರೇಮ ಕಾಶ್ಮೀರ, ಪಾಂಚಜನ್ಯ |
| **ಕಥಾ ಸಂಕಲನ** | :ನನ್ನ ದೇವರು ಮತ್ತು ಇತರೆ ಕಥೆಗಳು,ಸನ್ಯಾಸಿ ಮತ್ತು ಇತರೆ ಕಥೆಗಳು |
| **ನಾಟಕ** | :ಜಲಗಾರ,ಯಮನಸೋಲು,ಬೆರಳ್ಗೆ ಕೊರಳು, ರಕ್ತಾಕ್ಷಿ,ಚಂದ್ರ ಹಾಸ,ಶೂದ್ರ ತಪಸ್ವಿ,ಸ್ಮಶಾನ ಕುರುಕ್ಷೇತ್ರ |
| **ಕಾದಂಬರಿ** | :ಕಾನೂರು ಹೆಗ್ಗಡತಿ,ಮಲೆಗಳಲ್ಲಿ ಮದುಮಗಳು, |
| **ಆತ್ಮಕಥೆ** | :ನೆನಪಿನ ದೋಣಿಯಲ್ಲಿ |
| **ಅಭಿನಂದನ ಗ್ರಂಥ** | :ಸಹ್ಯಾದ್ರಿ |
| **ಪ್ರಬಂದ** | :ಮಲೆನಾಡಿನ ಚಿತ್ರಗಳು |
| **ಮಕ್ಕಳ ಪುಸ್ತಕ** | :ಅಮಲನ ಕಥೆ,ಮೋಡಣ್ಣನ ತಮ್ಮ ಬೊಮ್ಮನಹಳ್ಳಿಯ ಕಿಂದರಿಜೋಗಿ. |
| **ಮಹಾಕಾವ್ಯ** | :ಶ್ರೀ ರಾಮಾಯಣದರ್ಶನಂ |
| **ಖಂಡಕಾವ್ಯ** | :ಚಿತ್ರಾಂಗದ |
| **ಕಾವ್ಯಮಿಮಾಂಸೆ** | :ರಸೋವೈಸಂ,ದ್ರೌಪದಿಯ ಶ್ರೀಮುಡಿ,ತಪೋನಂದನ |
| **ಪ್ರಶಸ್ತಿಗಳು** | : **1955-**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–ಶ್ರೀ ರಾಮಾಯಣದರ್ಶನಂ<br>**1964-**ಪದ್ಮಭೂಷಣ<br>**1967-**ಜ್ಞಾನಪೀಠಪ್ರಶಸ್ತಿ–ಶ್ರೀ ರಾಮಾಯಣದರ್ಶನಂ<br>**1968-**ಪಂಪ ಪ್ರಶಸ್ತಿ–ಶ್ರೀ ರಾಮಾಯಣದರ್ಶನಂ<br>**1992-**ಕರ್ನಾಟಕ ರತ್ನ ಪ್ರಶಸ್ತಿ |

## 2.ದ.ರಾ.ಬೇಂದ್ರೆ

**ಪೂರ್ಣ ಹೆಸರು** :ದತ್ತಾತ್ರೇಯ ರಾಮಚಂದ್ರ ಬೇಂದ್ರೆ
**ಕಾವ್ಯನಾಮ** :ಅಂಭಿಕಾತನಯದತ್ತ
**ಬಿರುದು** :ವರಕವಿ
**ಜನನ–ಮರಣ** : **31-01-1896, 26-10-1981**
**ಸ್ಥಳ** :ಧಾರವಾಡದ ಸಾಧನಕೇರಿ(ಪೋತನೀಸ ಓಣಿ)
**ಕವನ ಸಂಕಲನ** :ನಾಕುತಂತಿ,ಅರಳು ಮರಳು, ಕೃಷ್ಣಕುಮಾರಿ,ಊಯ್ಯಾಲೆ, ಗರಿ, ನಾದಲೀಲೆ,ಸಖೀಗೀತ,ಮೇಘದೂತ,ಹಾಡುಪಾಡು, ಯಕ್ಷ–ಯಕ್ಷಿ,ಗಂಗಾವತರಣ,ಪರಾಕಿ, ಮತ್ತೇ ಬಂತು ಶ್ರಾವಣ,ನಮನ ಸೂರ್ಯಪಾನ,ವಿನಯ, ಬಾ ಹತ್ತಿರ,ಹೃದಯ ಸಮುದ್ರ
**ಕಥಾ ಸಂಕಲನ** :ನಿರಾಭರಣ ಸುಂದರಿ, ಮಾತೆಲ್ಲ ಜ್ಯೋತಿ
**ನಾಟಕ** :ಸಾಯುವ ಆಟ, ತಿರುಕರ ಪಿಡುಗು, ದೇವ್ವದ ಮನೆ, ನಗೆಯಹೊಗೆ, ಉದ್ಧಾರ, ಆಥರಾ ಈಥರಾ,
**ವಿಮರ್ಶೆ** :ಕುಮಾರವ್ಯಾಸ, ಸಾಹಿತ್ಯ ವಿರಾಟಸ್ವರೂಪ, ಮಹಾರಾಷ್ಟ್ರ ಸಾಹಿತ್ಯ, ಸಾಹಿತ್ಯ ಮತ್ತು ವಿಮರ್ಶೆ, ಕನ್ನಡ ಸಾಹಿತ್ಯದ ನಾಲ್ಕು ರತ್ನಗಳು
**ಅಭಿನಂದನ ಗ್ರಂಥ** :ಇಳಿದು ಬಾ ತಾಯಿ
**ಸಮಗ್ರ ಕಾವ್ಯ** :ಔದುಂಬರ ಗಾಥೆ
**ಪ್ರಶಸ್ತಿಗಳು** : **1959-**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–ಅರಳು ಮರಳು
**1974-**ಜ್ಞಾನಪೀಠಪ್ರಶಸ್ತಿ–ನಾಕುತಂತಿ
**1968-**ಕೇಂದ್ರ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ

# 3.ಡಾ. ಕೋಟಿ ಶಿವರಾಮ ಕಾರಂತ

**ಪೂರ್ಣ ಹೆಸರು** :ಕೋಟಿ ಶಿವರಾಮ ಕಾರಂತ
**ಬಿರುದು** :ಕಡಲ ತೀರದ ಬಾರ್ಗವ
**ಜನನ–ಮರಣ** : **10-10-1902, 09-12-1997**
**ಸ್ಥಳ** :ಉಡುಪಿ ಜಿಲ್ಲೆ, ಕೋಟ
**ಕವನ ಸಂಕಲನ** :ನೀಳ್ಗವನಗಳು, ರಾಷ್ಟ್ರಗೀತೆ ಸುಧಾರಕ
**ಕಥಾ ಸಂಕಲನ** :ತರೆಯ ಮರೆಯಲ್ಲಿ ಹಸಿವು, ಹಾವು, ಕವಿಕರ್ಮ
**ನಾಟಕ** :ಹಣೆಬರಹ, ಡುಮಿಂಗೋ, ಹಿರಿಯಕ್ಕನ ಚಾಳಿ,
ಮುಕ್ತದ್ವಾರ,ಗರ್ಭಗುಡಿ, ವಿಜಯದಶಮಿ
**ಕಾದಂಬರಿ** :ಮರಳಿ ಮಣ್ಣಿಗೆ, ಚೋಮನದುಡಿ, ಮೈಮನಗಳ ಸುಳಿಯಲ್ಲಿ,
ಅಳಿದ ಮೇಲೆ, ಚಿಗುರಿದ ಕನಸು,
ಒಡಹುಟ್ಟಿದವರು,ಸನ್ಯಾಸಿಯ ಬದುಕು, ಬೆಟ್ಟದ ಜೀವ
**ಜಾನಪದ ಸಾಹಿತ್ಯ** :ಯಕ್ಷಗಾನ ಬಯಲಾಟ
**ಆತ್ಮಕಥನ** :ಹುಚ್ಚುಮನಸ್ಸಿನ ಹತ್ತು ಮುಖಗಳು
**ಅಭಿನಂದನ ಗ್ರಂಥ** :ಕಾರಂತ ಪ್ರಪಂಚ
**ಪ್ರಬಂಧ** :ಮೈಲಿಗಲ್ಲಿನೊಡನೆ ಮಾತುಕಥೆಗಳು
**ಪ್ರವಾಸ ಕಥನ** :ಅಬುವಿನಿಂದ ಬರಾಮಕೆ,ಅಪೂರ್ವಪಶ್ಚಿಮ,ಪತಾಳಕ್ಕೆ ಪಯಣ,
ಅರಸಿಕರಲ್ಲ,ಚಿತ್ರಮಯ ದಕ್ಷಿಣ ಕನ್ನಡ,ಪೂರ್ವದಿಂದ ಅಂತ್ಯ ಪೂರ್ವಕ್ಕೆ
**ಪ್ರಶಸ್ತಿಗಳು** :**1959-**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–ಯಕ್ಷಗಾನ ಬಯಲಾಟ,
**1968-**ಪದ್ಮಭೂಷಣ
**1978-**ಜ್ಞಾನಪೀಠಪ್ರಶಸ್ತಿ–ಮೂಕಜ್ಜಿಯ ಕನಸುಗಳು
**1992-**ಪಂಪ ಪ್ರಶಸ್ತಿ–ಮೈಮನಗಳ ಸುಳಿಯಲ್ಲಿ
**1989-**ಇಂದಿರಾಗಾಂಧಿ ಪುರಸ್ಕಾರ
**1990-**ತುಲಸೀ ಸಮ್ಮಾನ್ ಪ್ರಶಸ್ತಿ ಇತ್ಯಾದಿ

## 4.ಮಾಸ್ತಿ ವೆಂಕಟೇಶ ಅಯ್ಯಂಗರ್

**ಪೂರ್ಣ ಹೆಸರು** :ಮಾಸ್ತಿ ವೆಂಕಟೇಶ ಅಯ್ಯಂಗಾರ್

**ಬಿರುದು** :ಸಣ್ಣಕಥೆಗಳ ಜನಕ,ಕನ್ನಡದ ಆಸ್ತಿ

**ಜನನ–ಮರಣ** :**6-6-1891, 06-06-1986**

**ಸ್ಥಳ** :ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ಮಾಸ್ತಿ

**ಕವನ ಸಂಕಲನ** :ಗೌಡರ ಮಲ್ಲಿ,ಬಿನ್ನಹ,ಅರುಣ, ತಾವರೆ, ರಾಮನವಮಿ, ಮೂಕನ ಮಕ್ಕಳು,ಸಂಕ್ರಾತಿ, ಶ್ರೀ ರಾಮಪಟ್ಟಾಭೀಷೆಕ

**ನಾಟಕ** :ಕಾಕನ ಕೋಟೆ, ಯಶೋದರ, ಮಾಸ್ತಿ,ಪುರಂದರದಾಸ, ಕಾಳಿದಾಸ,ಶಂತ,ಸಾವಿತ್ರಿ,ಉಷಾ,ಭಟ್ಟರಮಗಳು

**ಐತಿಹಾಸಿಕ** :ಚಿಕ್ಕವೀರ ರಾಜೇಂದ್ರ,ಚೆನ್ನಬಸವ ನಾಯಕ

**ಕಾದಂಬರಿ**

**ವಿಮರ್ಶೆ** :ಜನತೆಯ ಸಂಸ್ಕೃತಿ ಸಾಹಿತ್ಯ, ಆದಿಕವಿ ವಾಲ್ಮೀಕಿ ವಿಚಾರ,ಸಾಹಿತ್ಯ ಪ್ರೇರಣೆ

**ಅಭಿನಂದನ** :ಶ್ರೀನಿವಾಸ

ಗ್ರಂಥ

**ಸಣ್ಣ ಕಥೆಗಳು** :ರಂಗನ ಮದುವೆ,ಸುಬ್ಬಮ್ಮ(ನೀಳ್ಗವಿತೆ),ಸಣ್ಣಕಥೆಳು ( ಒಂದು ರಿಂದ ಹನ್ನೆರಡು ಸಂಪುಟ),ಶೇಷಮ್ಮ

**ಪ್ರಶಸ್ತಿಗಳು** :**1968**-ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–ಸಣ್ಣ ಕಥೆಗಳು,
**1983**ಜ್ಞಾನಪೀಠಪ್ರಶಸ್ತಿ–ಚಿಕ್ಕವೀರ ರಾಜೇಂದ್ರ
**1979**ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಇತ್ಯಾದಿ ಪ್ರಶಸ್ತಿಗಳು.

## 5.ವಿನಾಯಕ ಕೃಷ್ಣ ಗೋಕಾಕ

**ಪೂರ್ಣ ಹೆಸರು** :ವಿನಾಯಕ ಕೃಷ್ಣ ಗೋಕಾಕ

**ಕಾವ್ಯನಾಮ** :ವಿನಾಯಕ

**ಜನನ–ಮರಣ** :**9-8-1909, 28-4-1992**

**ಸ್ಥಳ** :ಹಾವೇರಿ ಜಿಲ್ಲೆಯ ಸವಣೂರು

**ಕವನ ಸಂಕಲನ** :ಪಯಣ,ಆಕಾಶ ಗಂಗೆ,ದ್ಯಾವಪೃಥ್ವಿ,
ತ್ರಿವಕ್ರಮರ,ಕಲೋಪಾಸಕ,ಉಗಮ,ನವ್ಯಕವಿತೆಗಳು,ಕಾಶ್ಮೀರ,ವಿನಾಯಕರ
ಸುನೀತಗಳು,ಹಿಗ್ಗು,
ಬಾಳದೇಗಲದಲ್ಲಿ,ಸಿಮ್ಲಾ ಸಿಂಘನ,ಬಾವರಾಗ,ಆಭ್ಯದಯ,
ಊರ್ಣನಾಭ,ಚಿಂತನ ಪುಣ್ಯಭೂಮಿ

**ನಾಟಕ** :ಜನನಾಯಕ,ಯುಗಾಂತರ,ಮುನಿದಮಾರಿ,ವಿಮರ್ಶಕ ವೈದ್ಯ

**ಕಾದಂಬರಿ** :ಸಮರಸವೇ ಜೀವನ,ಇಜ್ಜೋಡು,ಸಮುದ್ರಯಾನ
ನೂತನ ಯಗದ ಪ್ರವಾದಿ(ಇಂಗ್ಲೀಷ್ ಅನುದಾನ)

**ವಿಮರ್ಶೆ** :ಕವಿ ಕಾವ್ಯಮಹೊನ್ನತಿ,ನವ್ಯತೆ ಹಾಗು ಕಾವ್ಯ ಜೀವನ,
ಸೌಂದರ್ಯ ಮೀಮಾಂಸೆ, ಬೇಂದ್ರೆಯವರ ಕಾವ್ಯಗುಣ ಹಾಗೂ
ಪ್ರಯೋಗಶೀಲತೆ

**ಅಭಿನಂದನ ಗ್ರಂಥ** :ವಿನಾಯಕರ ವಾಙ್ಮಯ

**ಮಹಾಕಾವ್ಯ** :ಭಾರತ ಸಿಂಧೂರಶ್ಮಿ

**ಪ್ರವಾಸ ಕಥನ** :ಸಮುದ್ರದಾಚೆಯಿಂದ,ಸಮುದ್ರದಿಚೆಯಿಂದ,ಪಯಣಿಗ

**ಸಣ್ಣ ಕಥೆಗಳು** :ರಂಗನ ಮದುವೆ,ಸುಬ್ಬಮ್ಮ(ನೀಳ್ಗವಿತೆ),ಸಣ್ಣಕಥೆಳು
( ಒಂದು ರಿಂದ ಹನ್ನೆರಡು ಸಂಪುಟ),ಶೇಷಮ್ಮ

**ಪ್ರಶಸ್ತಿಗಳು** :**1960-**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–ದ್ಯಾವಪೃಥ್ವಿ,
**1961-**ಪದ್ಮಶ್ರೀ ಪ್ರಶಸ್ತಿ
**1991-**ಜ್ಞಾನಪೀಠಪ್ರಶಸ್ತಿ–ಭಾರತ ಸಿಂಧೂರಶ್ಮಿ

## 6.ಡಾ. ಯು.ಆರ್.ಅನಂತಮೂರ್ತಿ

**ಪೂರ್ಣ ಹೆಸರು** :ಯು.ಆರ್.ಅನಂತಮೂರ್ತಿ

**ಜನನ** :**21-12-1932**

**ಸ್ಥಳ** :ಶಿವಮೊಗ್ಗ ಜಿಲ್ಲೆಯ ಮೇಳಿಗಿ

**ಕವನ ಸಂಕಲನ** :ಹದಿನೈದು ಪದ್ಯಗಳು, ಅಜ್ಜನ ಹೆಗಲ ಸುಕ್ಕುಗಳು,ಮಿಥುನ

**ಕಥಾ ಸಂಕಲನ** :ಎಂದೆಂದೂ ಮುಗಿಯದ ಕಥೆ,ಪ್ರಶ್ನೆ,ಮೌನಿ,
ಆಕಾಶ ಮತ್ತು ಬೆಕ್ಕು, ಸೂರ್ಯನ ಕುದುರೆ

**ನಾಟಕ** :ಅವಾಹನೆ

**ಕಾದಂಬರಿ** :ಅವಸ್ಥೆ,ಸಂಸ್ಕಾರ,ಭವ

**ವೈಚಾರಿಕ ಬರಹ** :ಪ್ರಜ್ಞೆ ಮತ್ತು ಪರಿಸರ,ಸನ್ನಿವೇಶ, ಸಮಕ್ಷಮ,
ಪೂರ್ವಪರ ನವ್ಯಾಲೋಕ ಬೆತ್ತಲೆ ಸೇವೆಯಾಕೆ ಕೊಡದು

**ಪ್ರಶಸ್ತಿಗಳು** :**1994-**ಜ್ಞಾನಪೀಠ ಪ್ರಶಸ್ತಿ–ಸಮಗ್ರ ಸಾಹಿತ್ಯ(ಅವಸ್ಥೆ)
ಪದ್ಮಭೂಷಣ, ಮಾಸ್ತಿ,ಹಿಮಚಲಪ್ರದೇಶ,
ಸರ್ಕಾರದ ಶಿಖರ ಸಮ್ಮಾನ್ಮ ಇತ್ಯಾದಿ ಪ್ರಶಸ್ತಿಗಳು.

## 7.ಡಾ. ಗಿರೀಶ್ ಕಾರ್ನಾಡ್

**ಪೂರ್ಣ ಹೆಸರು** :ಗಿರೀಶ್ ಕಾರ್ನಾಡ್

**ಜನನ** :**19-05-1938**

**ಸ್ಥಳ** :ದಕ್ಷಿಣ ಕನ್ನಡ ಜಿಲ್ಲೆ ಮಲ್ಕಿ ಬಳಿ ಕರ್ನಾಡು ಗ್ರಾಮ

**ನಾಟಕ** :ಯಯಾತಿ,ಹಯವದನ,ತಲೆದಂತ,ತುಘಲಕ್,ನಾಗಮಂಡಲ,
ಹಿಟ್ಟಿನಹುಂಜ,ಅಂಜುಮಲ್ಲಿಗೆ ,ಮನೀಷಾದ, ಟಿಪ್ಪುವಿನ ಕನಸುಗಳು
ಅಗ್ನಿ ಮತ್ತು ಮಳೆ, ಮಾನಿಷಾದ

**ಚಲನ ಚಿತ್ರಗಳು** :ಕಾಡು,ಒಂದಾನೊಂದು ಕಾಲದಲ್ಲಿ, ತಬ್ಬಲಿಯು ನೀನಾದೆ ಮಗನೆ,
ವಂಶವೃಕ್ಷ,ಉತ್ಸವ್(ಹಿಂದಿ)

**ಪ್ರಶಸ್ತಿಗಳು** :**1994-**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–ತಲೆದಂಡ
**1992-**ಪದ್ಮಭೂಷಣ
**1998-**ಜ್ಞಾನಪೀಠ ಪ್ರಶಸ್ತಿ–ನಾಟಕ ಸಾಹಿತ್ಯ
**1994-**ಕರ್ನಾಟಕ ನಾಟಕೆ ಅಕಾಡೆಮಿ ಪ್ರಶಸ್ತಿ
**1974-**ಪದ್ಮಶ್ರೀ
ರಾಜ್ಯೋತ್ಸವ ಪ್ರಶಸ್ತಿ ಹಾಗೂ ಹಯವದನ ಕೃತಿಗೆ ಕಮಲಾದೇವಿ
ಚಟ್ಟೋಪಧ್ಯಾಯ ಪ್ರಶಸ್ತಿ ಇತ್ಯಾದಿ

## 8.ಡಾ. ಚಂದ್ರಶೇಖರಕಂಬಾರ

| | |
|---|---|
| **ಜನನ** | : **2-01-1937** |
| **ಸ್ಥಳ** | :ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕು,ಘೋಡಗೇರಿ |
| **ಕವನಸಂಕಲನಗಳು** | :ಸಾವಿರದ ನೆರಳು,ಬೆಳ್ಳಿಮೀನು, ಹೇಳತೇನೆ ಕೇಳ, ಮುಗುಳು, ತಕರಾರಿನವರು. |
| **ಕಾದಂಬರಿಗಳು** | :ಕರಿಮಾಯಿ,ಸಿಂಗಾರವ್ವನ ಅರಮನೆ, ಜಿ.ಕೆ.ಮಾಸ್ತರಿನ ಪ್ರಣಯ ಪ್ರಸಂಗ,ಅಣ್ಣ–ತಂಗಿ,ಶಿಖರಸೂರ್ಯ ಉತ್ತರ ಕರ್ನಾಟಕ ಜನಪದ ರಂಗಭೂಮಿ |
| **ನಾಟಕಗಳು** | :ಹರಕೆಯ ಕುರಿ,ಸಿರಿಸಂಪಿಗೆ,ನಾಯಿಕಥೆ,ಕಾಡುಕುದುರೆ,ತುಕ್ರನಕನಸು, ಅಂಗಿಮ್ಯಾಲಂಗಿ,ಪುಷ್ಪರಾಣಿ,ಆಲಿಬಾಬಾ ನಲವತ್ತು ಜನ ಕಳ್ಳರು, ಸಂಗ್ಯಾ–ಬಾಳ್ಯಾ,ಅನಬೇಕೋ ನಾಡೋಳಗ,ಮಹಾಮಾಹಿ, ಬೆಪ್ಪುತಕ್ಕಡಿ ಭೋಳೆಶಂಕರ,ಜೋಕುಮಾರಸ್ವಾಮಿ, ಬೆಂಬತ್ತಿದ ಕಣ್ಣು |
| **ಇತರೆ** | :ಮಾತಾಡು ಲಿಂಗವೇ,ಬಣ್ಣಿಸಿ ಹಾಡವ್ವ ನನ್ನ ಬಳಗ, ಬಯಲಾಟ,ಕನ್ನಡ ಜನಪದ ವಿಶ್ವಕೋಶ, ಬೇಡರ ಹುಡುಗ,ಎಂಥಾಲಾಜಿ ಆಫ್ ಮಾಡ್ರನ್ ಇಂಡಿಯನ್ ಪ್ಲೇಯ್ಸ್ ಉತ್ತರಕನ್ನಡದ ರಂಗಭೂಮಿ. |
| **ದುಹಾಕಾವ್ಯ** | :ಚಕೋರಿ. |
| **ಪ್ರಶಸ್ತಿಗಳು** | :ಕಾಡುಕುದುರೆ ಚಲನಚಿತ್ರಕ್ಕೆ ಇವರೆ ಸಂಗೀತ ಸಂಯೋಜಿಸಿದ್ದ "ಕಾಡುಕುದುರೆ ಓಡಿಬಂದಿತ್ತ" ಹಾಡಿಗೆ ರಾಷ್ಟ್ರ ಪ್ರಶಸ್ತಿ<br>**1991-**ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ–ಸಿರಿ ಸಂಪಿಗೆ<br>**2003-**ಪಂಪ ಪ್ರಶಸ್ತಿ–ಸಮಗ್ರ ಸಾಹಿತ್ಯ<br>**2010-**ಜ್ಞಾನಪೀಠ ಪ್ರಶಸ್ತಿ–ಸಮಗ್ರ ಸಾಹಿತ್ಯ<br>ಪದ್ಮಶ್ರೀ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಮಲದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಜನಪದ ಮತ್ತು ಯಕ್ಷಗಾನ ಅಕಡೆಮಿ ಪ್ರಶಸ್ತಿ |

## *ಪಂಪ ಪ್ರಶಸ್ತಿ ವಿಜೇತ ಕವಿಗಳು

| ಕವಿಗಳು | ಪಂಪ ಪ್ರಶಸ್ತಿ ಕೃತಿ |
|---|---|
| ಕುವೆಂಪು | 1987–ಶ್ರೀ ರಾಮಾಯಣ ದರ್ಶನಂ |
| ತೀ.ನಂ.ಶ್ರೀಕಂಠಯ್ಯ | 1988–ಭಾರತೀಯ ಕಾವ್ಯ ಮೀಮಾಂಸೆ |
| ಡಾ. ಕೆ.ಶಿವರಾಮಕಾರಂತ | 1989–ಮೈಮನಗಳ ಸುಳಿಯಲ್ಲಿ |
| ಪ್ರೊ. ಸಂ.ಶಿ.ಭೂಸನೂರ ಮಠ | 1990–ಶೂನ್ಯ ಸಂಪಾದನೆಯ ಪರಾಮರ್ಶೆ |
| ಡಾ. ಪು.ತಿ.ನರಸಿಂಹಾಚಾರ್ | 1991–ಶ್ರೀ ಹರಿಚರಿತೆ |
| ಪ್ರೋ.ಎ.ಎನ್.ಮೂರ್ತಿರಾವ್ | 1992–ದೇವರು |
| ಪ್ರೋ.ಎಂ.ಗೋಪಾಲಕೃಷ್ಣಅಡಿಗ | 1993–ಸುವರ್ಣ ಪುತ್ಥಳಿ |
| ಸೇಡಿಯಾಪುಕೃಷ್ಣ ಭಟ್ಟ | 1994–ವಿಚಾರ ಪ್ರಪಂಚ |
| ಢಾ. ಕೆ.ಎಸ್.ನರಸಿಂಹಸ್ವಾಮಿ | 1995–ದುಂಡು ಮಲ್ಲಿಗೆ |
| ಡಾ. ಎಂ.ಎಂ.ಕಲಬರ್ಗಿ | 1996–ಸಮಗ್ರ ಸಾಹಿತ್ಯ |
| ಡಾ. ಜಿ.ಎಸ್.ಶೀವರುದ್ರಪ್ಪ | 1997–ಸಮಗ್ರ ಸಾಹಿತ್ಯ |
| ಪ್ರೋ.ದೇ. ಜವರೇಗೌಡ | 1998–ಸಮಗ್ರ ಸಾಹಿತ್ಯ |
| ಚೆನ್ನವೀರ ಕಣವಿ | 1999–ಸಮಗ್ರ ಸಾಹಿತ್ಯ |
| ಪ್ರೋ.ಎಲ್.ಬಸವರಾಜು | 2000–ಸಮಗ್ರ ಸಾಹಿತ್ಯ |
| ಕೆ.ಪಿ.ಪೂರ್ಣಚಂದ್ರತೇಜಸ್ವಿ | 2001–ಸಮಗ್ರ ಸಾಹಿತ್ಯ |
| ಡಾ. ಎಂ.ಚಿದಾನಂದ ಮೂರ್ತಿ | 2002–ಸಮಗ್ರ ಸಾಹಿತ್ಯ |
| ಡಾ. ಚಂದ್ರಶೇಖರ ಕಂಬಾರ | 2003–ಸಮಗ್ರ ಸಾಹಿತ್ಯ |
| ಡಾ. ಎಚ್.ಎಲ್.ನಾಗೇಗೌಡ | 2004–ಸಮಗ್ರ ಸಾಹಿತ್ಯ |
| ಡಾ. ಎಸ್.ಎಲ್.ಬೈರಪ್ಪ | 2005–ಸಮಗ್ರ ಸಾಹಿತ್ಯ |
| ಡಾ. ಜಿ.ಎಸ್.ಅಮೂರ | 2006–ಸಮಗ್ರ ಸಾಹಿತ್ಯ |
| ಯಶವಂತ ಚಿತ್ತಾಲ | 2007–ಸಮಗ್ರ ಸಾಹಿತ್ಯ |
| ಪ್ರೋ. ಟಿ.ವಿ.ವೆಂಕಟಾಚಲಶಾಸ್ತ್ರೀ | 2008–ಸಮಗ್ರ ಸಾಹಿತ್ಯ |
| ಫ್ರೋ. ಚಂದ್ರಶೇಖರ ಪಾಟೀಲ | 2009–ಸಮಗ್ರ ಸಾಹಿತ್ಯ |
| ಜಿ.ಹೆಚ್. ನಾಯಕ್ | 2010–ಸಮಗ್ರ ಸಾಹಿತ್ಯ |
| ಬರಗೂರು ರಾಮಚಂದ್ರಪ್ಪ | 2011–ಸಮಗ್ರ ಸಾಹಿತ್ಯ |
| ಡಾ. ಶಂಕರಭಟ್. ಡಿ.ಎನ್ | 2012–ಸಮಗ್ರ ಸಾಹಿತ್ಯ |

ಕಯ್ಯಾರ ಕಿಞ್ಞಣ್ಣರೈ 2013–ಸಮಗ್ರ ಸಾಹಿತ್ಯ

## *ಕೇಂದ್ರ ಸಾಹಿತ್ಯ ಅಕಾಡೆಮಿ, ಪ್ರಶಸ್ತಿ ವಿಜೇತರ ಪರಿಚಯ

| **ಕವಿಗಳ ಹೆಸರು** | **ಕೇಂದ್ರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು** |
|---|---|
| ಡಾ.ಕೆ.ವಿ.ಪುಟ್ಟಪ್ಪ | 1955–ರಾಮಾಯಾಣ ದರ್ಶನಂ |
| ಆರ್.ಎಸ್.ಮುಗಳಿ | 1956–ಕನ್ನಡ ಸಾಹಿತ್ಯ ಚರಿತ್ರೆ |
| ದ.ರಾ.ಬೇಂದ್ರೆ | 1958–ಅರಳು ಮಲ್ಲಿಗೆ |
| ಡಾ. ಕೆ.ಶಿವರಾಮಕಾರಂತ್ | 1959–ಯಕ್ಷಗಾನ ಬಯಲಾಟ |
| ವಿ.ಕೆ.ಗೋಕಾಕ್ | 1960–ದ್ಯಾವಾ ಪೃಥ್ವಿ |
| ಎ.ಆರ್.ಕೃಷ್ಣಶಾಸ್ತ್ರಿ | 1961–ಬಂಕಿಮ ಚಂದ್ರ |
| ದೇವುಡು ನರಸಿಂಹ ಶಾಸ್ತ್ರಿ | 1962–ಮಹಾಕ್ಷತ್ರೀಯ |
| ಬಿ.ಪುಟ್ಟಸ್ವಾಮಯ್ಯ | 1964–ಕ್ರಾಂತಿ ಕಲ್ಯಾಣ |
| ಎಸ್.ವಿ.ರಂಗಣ್ಣ | 1965–ರಂಗ ಬಿನ್ನಪ |
| ಪೂ.ತಿ.ನರಸಿಂಹಾ ಚಾರ್ | 1966–ಹಂಸ ದಮಯಂತಿ |
| ಡಿ.ವಿ.ಗುಂಡಪ್ಪ | 1967–ಜೀವನ ಧರ್ಮಯಾಗ |
| ಮಾಸ್ತಿ | 1968–ಸಣ್ಣ ಕಥೆಗಳು |
| ಹೆಚ್.ತಿಪ್ಪೇರುದ್ರಸ್ವಾಮಿ | 1969–ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ |
| ಶಂ.ಬಾ.ಜೋತಿ | 1970–ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ |
| ಆದ್ಯ ರಂಗಾಚಾರ್ಯ | 1971–ಕಾಳಿದಾಸ |
| ಎಸ್.ಎಸ್.ಭೂಸನೂರು ಮಠ | 1972–ಶೂನ್ಯ ಸಂಪಾದನೆಯ ಪರಾಮರ್ಶೆ |
| ಎ.ಸೀತಾರಾಮಯ್ಯ | 1973–ಅದಲು ಬದಲು |
| ಎಂ.ಗೋಪಾಲಕೃಷ್ಣ ಅಡಿಗ | 1974–ವರ್ದಮಾನ |
| ಎಸ್.ಎಲ್.ಬೈರಪ್ಪ | 1975–ದಾಟು |
| ಎಂ.ಶಿವರಾಮ್ | 1976–ಮನಮಂಥನ |
| ಕೆ.ಎಸ್.ನರಸಿಂಹ ಸ್ವಾಮಿ | 1977–ತೆರೆದ ಬಾಗಿಲು |
| ಬಿ,ಜಿ.ಎಲ್.ಸ್ವಾಮಿ | 1978–ಹಸಿರು ಹೊನ್ನು |
| ಎ.ಎನ್.ಮೂರ್ತಿರಾವ್ | 1979–ಚಿತ್ರಗಳು ಪತ್ರಗಳು |
| ಗೊ.ರಾಮಸ್ವಾಮಿ ಅಯ್ಯಂಗರ್ | 1980–ಅಮೇರಿಕದಲ್ಲಿ ಗೊರೂರು |
| ಚೆನ್ನವೀರ ಕಣವಿ | 1981–ಜೀವ ಧ್ವನಿ |

ಅಕ್ಷರ

| | |
|---|---|
| ಚದುರಂಗ | 1982–ವೈಶಾಖ |
| ಯಶವಂತ ಚಿತ್ತಾಲ | 1983–ಕಥೆಯಾದಳು ಹುಡುಗಿ |
| ಜಿ.ಎಸ್.ಶಿವರುದ್ರಪ್ಪ | 1984–ಕಾವ್ಯಾರ್ಥ ಚಿಂತನೆ |
| ತಾ.ರ.ಸು | 1985–ದುರ್ಗಸ್ತಮಾನ |
| ವ್ಯಾಸರಾಯ ಬಲ್ಲಾಳ | 1986–ಬಂಡಾಯ |
| ಕೆ.ಪಿ.ಪೂರ್ಣ ಚಂದ್ರ ತೇಜಸ್ವಿ | 1987–ಚಿದಂಬರ ರಹಸ್ಯ |
| ಶಂಕರ ಮೊಕಾಶಿ ಪೂಣೆಕರ | 1988–ಅವಧೇಶ್ವರಿ |
| ಹಾ.ಮಾ.ನಾಯಕ | 1989–ಸಂಪ್ರತಿ |
| ದೇವನೂರು ಮಹದೇವ | 1990–ಕುಸುಮಾಬಾಲೆ |
| ಚಂದ್ರಶೇಖರ ಕಂಬಾರ | 1991–ಸಿರಿ ಸಂಪಿಗೆ |
| ಸು.ರಂ.ಎಕ್ಕುಂಡಿ | 1992–ಬಕುಲದ ಹೂಗಳು |
| ಪಿ.ಲಂಕೇಶ | 1993–ಕಲ್ಲು ಕರಗುವ ಸಮಯ |
| ಗೀರಿಶ್ ಕಾರ್ನಾಡ್ | 1994–ತಲೆದಂಡ |
| ಕೀರ್ತನಾಥ ಕುರ್ತಕೋಟಿ | 1995–ಉರಿಯನಾಲಿಗೆ |
| ಜಿ.ಎಸ್.ಅಮೂರ | 1996–ಭುವನದ ಭಾಗ |
| ಎಂ.ಚಿದಾನಂದ ಮೂರ್ತಿ | 1997–ಹೊಸತು ಹೊಸತು |
| ಬಿ.ಸಿ.ರಾಮಚಂದ್ರ ಮೂರ್ತಿ | 1998–ಸಪ್ತ ಪದಿ |
| ಡಿ.ಆರ್.ನಾಗರಾಜ | 1999–ಸಾಹಿತ್ಯ ಕಥನ |
| ಶಾಂತಿನಾಥ ದೇಸಾಯಿ | 2000–ಓಂ ನಮೋ! |
| ಎಲ್.ಎಸ್.ಶೇಷಗಿರಿರಾವ್ | 2001–ಇಂಗ್ಲೀಷ್ ಸಾಹಿತ್ಯ ಚರಿತ್ರೆ |
| ಸುಜನಾ | 2002–ಯುಗಸಂಧ್ಯ |
| ಕೆ.ವಿ.ಸುಬ್ಬಣ್ಣ | 2003–ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು |
| ಗೀತಾನಾಗಭೂಷಣ | 2004–ಬದುಕು |
| ರಾಘವೇಂದ್ರ ಪಾಟೀಲ | 2005–ತೇರು |
| ಡಾ.ಎಂ.ಎಂ.ಕಲ್ಬುರ್ಗಿ | 2006–ಮಾರ್ಗ–೪ |
| ಕುಂ.ವೀರಬದ್ರಪ್ಪ | 2007–ಅರಮನೆ |
| ಶ್ರೀನಿವಾಸವೈದ್ಯ | 2008–ಹಳ್ಳಬಂತು ಹಳ್ಳ |
| ವೈದೇಹಿ(ಜಾನಕಿ) | 2009–ಕ್ರೌಂಚಕ್ಷಿಗಳು |
| ರಹಮತ್ ತರಿಕೆರಿ | 2010–ಕತ್ತಿಹೆಂಚಿನದಾರಿ |
| ಗೋಪಾಲ ಕೃಷ್ಣ ಪೈ | 2011–ಸ್ವಪ್ನ ಸಾರಸ್ವತ |

ಹೆಚ್.ಎಸ್.ಶಿವ ಪ್ರಕಾಶ್ 2012–ಮುಬ್ಬಿನ ಹಾಗೆ ಕಣಿವೆಯಾಸಿ!

ಸಿ.ಎನ್.ರಾಮಚಂದ್ರನ್ 2013–ಅಖ್ಯಾನ ವ್ಯಾಖ್ಯಾನ

## *ಕರ್ನಾಟಕ ರತ್ನ ಪ್ರಶಸ್ತಿ ವಿಜೇತರು

ಡಾ. ಕುವೆಂಪು –1992

ಡಾ. ರಾಜ್‌ಕುಮಾರ್ –1992

ಎಸ್.ನಿಜಲಿಂಗಪ್ಪ –1999

ಡಾ. ಸಿ.ಎನ್.ಆರ್.ರಾವ್ –2000

ಪಂಡಿತ ಶ್ರೀ ಭೀಮಸೇನ ಜೋಶಿ –2005

ಡಾ ಶಿವಕುಮಾರ್ ಸ್ವಾಮಿಜೀ –2006

ಪ್ರೋ. ದೇ. ಜವೇಗೌಡ –2008

ಡಾ. ಧರ್ಮಸ್ಥಳ ವಿರೇಂದ್ರ ಹೆಗಡೆ –2009

## *ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ವಿಜೇತರು

ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ **–ವಿ.ಶಾಂತಾರಾಂ**

ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ಪಡೆದ ಮೊದಲ ಚಿತ್ರನಟ **–ಡಾ. ರಾಜ್‌ಕುಮಾರ್**

ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ಪಡೆದ ಮೊದಲ ಛಾಯಗ್ರಹಕ **–ವಿ.ಕೆ.ಮೂರ್ತಿ**

## *ಕನ್ನಡದ ಕಿವಗಳ ಅಭಿನಂದನ ಗ್ರಂಥಗಳು

**ಕವಿಗಳು ಅಭಿನಂದನ ಗ್ರಂಥಗಳು**

ಕುವೆಂಪು –ಸಹ್ಯಾದ್ರಿ,ಗಂಗೋತ್ರಿ

ಬೇಂದ್ರೆ –ಇಳಿದು ಬಾ ತಾಯಿ

ಶಿವರಾಮಕಾರಂತ – ಕಾರಂತ ಪ್ರಪಂಚ

ಮಾಸ್ತಿ –ಶ್ರೀನಿವಾಸ

ವಿ.ಕೃ.ಗೋಕಾಕ್ –ವಿನಾಯಕ ವಾಙ್ಮಯ

ಬಿ.ಎಂ.ಶ್ರೀಕಂಠಯ್ಯ –ಸಂಭಾವನೆ

ಗೋವಿಂದ ಪೈ –ದೀವಿಗೆ

ಡಿ.ವಿ.ಜಿ –ಧೀಮಂತ

| | |
|---|---|
| ಡಿ.ಎಲ್.ನರಸಿಂಹಾಚಾರ್ | –ಜ್ಞಾನೋಪಾಸಕ/ಉಪಾಯನ |
| ಎ.ಆರ್.ಕೃಷ್ಣಶಾಸ್ತ್ರಿ | –ಅಭಿನಂದನೆ |
| ಹಾ.ಮಾ.ನಾಯಕ | –ಮಾನ |
| ಫ.ಗ. ಹುಳಿಕಟ್ಟೆ | –ವಚನ ಪಿತಾಮಹ/ಮಣಿಹ |
| ಅ.ನ.ಕೃ | –ರಸ ಚೇತನ |
| ತ.ರಾ.ಸು | –ಗಿರಿಮಲ್ಲಿಗೆ |
| ತ.ಸು.ರಾಮರಾಯ | –ಸ್ವಸ್ತಿ |
| ಟಿ.ಎಸ್.ವೆಂಕಣ್ಣಯ್ಯ | –ಸವಿ ನೆನಪು |
| ಅಮೃತ ಸೋಮೇಶ್ವರ | –ಸಿರಿ |
| ನ.ನಾಗಲಿಂಗಸ್ವಾಮಿ | –ನಮ್ಮ ಕನ್ನಡ |
| ಎಂ.ವಿ.ಸೀತರಾಮಯ್ಯ | –ಆಸ್ವಾದ |
| ದೇ. ಜವರೇಗೌಡ | –ಅಂತಃ |
| ಕೆ.ವಿ.ಶಂಕರೇಗೌಡ | –ಕಬ್ಬಿನ ಹಾಲು |
| ಹೆಚ್.ಎಲ್.ನಾಗೇಗೌಡ | –ನಾಗವಲ್ಲಿ |
| ತಿಪ್ಪೇರುದ್ರಸ್ವಾಮಿ | –ಶಿವಚಿಂತನ |
| ಎಸ್.ವಿ.ಪರಮೇಶ್ವರ ಭಟ್ಟ | –ಪೂರ್ಣ ಕುಂಭ |
| ಅನುಪಮಾ ನಿರಂಜನ | –ಅನುಪಮಾಭಿನಂದನ |
| ಸಿಂಪಿ ಲಿಂಗಣ್ಣ | –ಸಿಂಸಿಯ ಮುತ್ತು |
| ಶಂ.ಬಾ.,ಜೋಷಿ | –ಅಧ್ಯಯನ |
| ಪು.ತಿ.ನ | –ಯದುಗಿರಿ |
| ಎಸ್.ಎಲ್.ಭೈರಪ್ಪ | –ಸಹ ಸ್ಪಂದನ |
| ಕೆ.ಎಸ್.ನರಸಿಂಹಸ್ವಾಮಿ | –ಚಂದನ |
| ಜಯವಂತ ಕುಳ್ಳಿ | –ಜಯವಂತ |
| ಚನ್ನವೀರ ಕಣವಿ | –ಬೆಂಬೆಳಕು |
| ತೀನಂ.ಶ್ರೀಕಂಠಯ್ಯ | –ಪ್ರಬಂಧ ಪ್ರಪಂಚ |
| ರಂಶ್ರೀ.ಮುಗಳಿ | –ರಸಿಕರಂಗ ದರ್ಶನ |
| ಡೆಪ್ಯೂಟಿ ಚೆನ್ನಬಸವಪ್ಪ | –ಕನ್ನಡದ ದೀಪ |
| ಕೆ.ಕೃಷ್ಣಮೂರ್ತಿ | –ಅಭಿಜ್ಞಾನ |
| ಶ್ರೀ ಸದಾಶಿವ ಒಡೆಯರ್ | –ಸವಿ ಬೆಳಕು |
| ಬಿ.ಬಿ.ಹೆಂಡಿ | –ವಂದನೆ |
| ವಿ.ಎಂ.ಇನಾಂದಾರ್ | –ನವನೀತ/ಕಾದಂಬರಿ ಲೋಕ |
| ಜೆ.ಪಿ.ರಾಜರತ್ನಂ | –ರಾಜಮಾರ್ಗ |

| | |
|---|---|
| ಚದುರಂಗ | –ವ್ಯಕ್ತಿ ಅಭಿವ್ಯಕ್ತಿ |
| ನೀ.ಗಿರಿಗೌಡ | –ಶತಮಾನದ ಬೆಳಕು |
| ಹಂಪನಾಗರಾಜಯ್ಯ | –ಬರಹ ಬಾಗೀನ |
| ಎನ್.ಎಸ್.ಲಕ್ಷ್ಮಿನಾರಾಯಣಭಟ್ಟ | –ನೀಲಾಂಜನ |
| ಡಿ.ಕೆ.ರಾಜೇಂದ್ರ | –ಹೊನ್ನ ಹೊಂಬಾಳೆ |
| ಪುಟ್ಟರಾಜಗವಾಯಿ | –ಜ್ಞಾನ ದೇಗುಲ |

## *ಕನ್ನಡ ಕವಿಗಳ ಕಾವ್ಯನಾಮಗಳು

| **ಹೆಸರು** | **ಕಾವ್ಯನಾಮಗಳು** |
|---|---|
| ಕೆ.ವಿ.ಪುಟ್ಟಪ್ಪ | –ಕುವೆಂಪು |
| ದ.ರಾ.ಬೇಂದ್ರೆ | –ಅಬಿಕಾತನಯದತ್ತ |
| ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ | –ಬಿ.ಎಂ.ಶ್ರೀ |
| ಅರಕಲಗೂಡು ನರಸಿಂಹರಾವ್ ಕೃಷ್ಣರಾವ್ | –ಅ.ನ.ಕೃ |
| ಕಿಕ್ಕೇರಿ ಸುಬ್ಬರಾವ್ ನರಸಿಂಹಸ್ವಾಮಿ | –ಕೆ.ಎಸ್.ಎನ್ |
| ಕುಳಕುಂದ ಶಿವರಾಮು | –ನಿರಂಜನ |
| ಕುಪ್ಪಳಿ ಪುಟ್ಟಪ್ಪಪೂರ್ಣಚಂದ್ರ ತೇಜಸ್ವಿ | –ಪೂಚಂತೇ |
| ಗುಗ್ಗೇರಿ ಶಾಂತವೀರಪ್ಪ ಶಿವರುದ್ರಪ್ಪ | – ಜಿ.ಎಸ್.ಎಸ್ |
| ಗೊರೂರು ರಾಮಸ್ವಾಮಿ ಅಯ್ಯಂಗಾರ | –ಸೀತಾತನಯ |
| ಚನ್ನಮಲ್ಲಪ್ಪ ಸಿದ್ದಲಿಂಗಪ್ಪ ಗಲಗಲಿ | –ಮಧುರಚೆನ್ನ |
| ಚಂದ್ರಶೇಖರ ಪಾಟೀಲ | –ಚಂಪಾ |
| ಜಾನಕಿ ಎಸ್ ಮೂರ್ತಿ | –ವೈದೇಹಿ |
| ತಳುಕಿನ ರಾಮಸ್ವಾಮಿ ಸುಬ್ಬರಾವ್ | –ತ.ರಾ.ಸು |
| ತಿರುಮಲೆ ರಾಜಮ್ಮ | –ಭಾರತಿ |
| ತೀರ್ಥಪುರ್ ನಂಜಂಡಯ್ಯ ಶ್ರೀಕಂಠಯ್ಯ | –ತಿ.ನಂ.ಶ್ರೀ |
| ದೇವನಹಳ್ಳಿ ವೆಂಕಟರಮಣ ಗುಂಡಪ್ಪ | –ಡಿ.ವಿ.ಜಿ |
| ಮಲ್ಲಾಡಹಳ್ಳಿ ರಾಘವೇಂದ್ರ ಸ್ವಾಮಿಗಳು | –ತಿರುಕ |
| ರಂಗನಾಥ ಶ್ರೀನಿವಾಸ ಮುಗಳಿ | –ರಸಿಕ ರಂಗ |
| ವೆಂಕಟೇಶ ತಿರುಕೊ ಕುಲಕರ್ಣಿ | –ಗಳಗನಾಥ |
| ಸಿದ್ದಯ್ಯ ಪುರಾಣಿಕ | –ಕಾವ್ಯಾನಂದ |
| ಬಿ.ಎನ್.ಸುಬ್ಬಮ್ಮ | –ವಾಣಿ |

| | |
|---|---|
| ಸಿದ್ದವನ ಹಳ್ಳಿ ಕೃಷ್ಣಶರ್ಮ | –ಹರಟೆಮಲ್ಲ |
| ಸಿ.ಸಿ.ಕೃಷ್ಣ ಕುಮಾರ | –ವೀಚಿ |
| ಎಚ್.ಶ್ರೀನಿವಾಸ ಮೂರ್ತಿ | –ಪರಿಮಳ |
| ಬಿ.ಡಿ.ಸುಬ್ಬಯ್ಯ | –ಕಾಕೆಮನಿ |
| ಚೆನ್ನ ಮಲ್ಲಪ್ಪಸಿದ್ದಲಿಂಗಪ್ಪ ಗಲಗಲಿ | –ಮಧುರಚೆನ್ನ |
| ಟಿ.ಟಿ.ಶರ್ಮಾ | –ಕನ್ನಡ ವರ್ಕಿ |
| ಶಾಂತಾದೇವಿ ಮಳವಾಡ | –ಶಾಂತಕ್ಕ |
| ಸಂತೆ ಶಿವಾರ ಲಿಂಗಪ್ಪಯ್ಯ ಬೈರಪ್ಪ | –ಎಸ್ ಎಲ್ ಬೈರಪ್ಪ |
| ಜಯಚಾಮರಾಜ ಒಡೆಯರ್ | –ಶ್ರೀವಿದ್ಯ |
| ಚುಳಕ ಗೋವಿಂದ ವೇಂಕಟೇಶ | –ಚಾಲುಕ್ಯ |
| ದೊಡ್ಡ ರಂಗೇಗೌಡ | –ಮನುಜ |
| ದೇವುಡು ನರಸಿಂಹಶಾಸ್ತ್ರಿ | –ದೇವುಡು |
| ಪಾಟೀಲು ಪುಟ್ಟಪ್ಪ | –ಪಾಪು |
| ನಾರಾಯಣರಾವ್ ಕೃಷ್ಣರಾವ್ ಕುಲಕರ್ಣಿ | –ಎನ್ಕೆ |
| ಪಂಜೆ ಮಂಗೇಶರಾಯರು | –ಕವಿಶಿಷ್ಯ |
| ನಾಡಗೇರೆ ಕೃಷ್ಣರಾವ್ | –ಗೇಡಿನಾರ |
| ನಂದಳಿಕ ಲಕ್ಷ್ಮಿ ನಾರಾಯಣಪ್ಪ | –ಮುದ್ದಣ್ಣ |
| ಪುರೋಹಿತ ತಿರುನಾರಾಯಣ ನರಸಿಂಹಚಾರ್ಯ | –ಪು.ತಿನ |
| ಬಳ್ಳಾರಿ ಭೀಮಸೇನರಾವ್ | –ಬೀಚೀ |
| ಬಾಳಾಚಾರ್ಯ ಸಕ್ಕರಿ | –ಶಾಂತಕವಿ |
| ಬೆಟ್ಟಗೇರಿ ಕೃಷ್ಣಶರ್ಮ | –ಆನಂದ ಕಂದ |
| ವಿ.ಸೀತಾರಾಮಯ್ಯ | –ವಿ.ಸೀ |
| ಅಂಬಳೆ ರಾಮಕೃಷ್ಣಶಾಸ್ತ್ರಿ | –ಎ.ಆರ್.ಕೃ |
| ಮ.ನ. ಜವರಯ್ಯ | –ಮನಜ |
| ರಂಶ್ರೀ.ಮುಗಳಿ | –ರಸಿಕರಂಗ |
| ಮಾಸ್ತಿ ವೆಂಕಟೇಶ ಅಯ್ಯಂಗರ್ | –ಶ್ರೀನಿವಾಸ |
| ವಿನಾಯಕ ಕೃಷ್ಣ ಗೋಕಾಕ್ | –ವಿನಾಯಕ |
| ಹಾರೋಗದ್ದೆ ಮಾರಪ್ಪನಾಯಕ | –ಹಾಮನಾ |
